ಸಂಪುಟ: 05 ಸಂಚಿಕೆ: 187 ಪುಟಗಳು: 08 ಶನಿವಾರ 20 ಸೆಪ್ಟೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**
ಸೂರ್ಯನಂತೆ ಹೊಳೆಯುವ ಆಸೆ ನಿಮಗಿದ್ದರೆ ಮೊದಲು ಸೂರ್ಯನಂತೆ ಹೊತ್ತಿ ಉರಿಯುವುದನ್ನು ಕಲಿಯಿರಿ.

## ಜಾತಿ ಗಣತಿ ಗದ್ದಲ: ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ನಮೂದಿಸಿ!

● ಕಾಂತರಾಜುರ ವರದಿ ಅವೈಜ್ಞಾನಿಕ ಎಂದರೂ ಸರ್ಕಾರದಿಂದ ನೋ ರೆಸ್ಪಾನ್ಸ್ ● ಕರ್ನಾಟಕದಲ್ಲಿ ಜಾತಿಗಣತಿ ಸಮೀಕ್ಷೆಯಿಂದ ಗೊಂದಲ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಜಾತಿ ಗಣತಿ ವಿಚಾರವಾಗಿ ಸಾಕಷ್ಟು ಪರ ಹಾಗೂ ವಿರೋಧ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಬಿಜೆಪಿ ಚಿಂತನ -ಮಂಥನ ಸಭೆಯಲ್ಲಿ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ. ಧರ್ಮದ ಕಾಲಂನಲ್ಲಿ ಹಿಂದೂ ಎಂದು ನಮೂದಿಸಿ ಹಾಗೂ ಜಾತಿ ಹಾಗೂ ಉಪ ಜಾತಿ ಆ ಸಮಾಜಕ್ಕೆ ಬಿಟ್ಟಿದ್ದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಮನವಿ ಮಾಡಿದ್ದಾರೆ.



ಚಿಂತನ -ಮಂಥನ ಸಭೆಯ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂತರಾಜು ವರದಿಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಸಚಿವರು ಹೇಳಿಕೆಗಳನ್ನು ನೀಡುತ್ತಿದ್ದರು. ಆದರೆ ಇದು ಅವೈಜ್ಞಾನಿಕ ಎಂದು ಬಿಜೆಪಿ ವಿರೋಧ ಮಾಡಿತ್ತು. ಆದರೆ ನಮ್ಮ ಮನವಿಗೆ ಸರ್ಕಾರ ಸ್ಪಂದಿಸಿರಲಿಲ್ಲ ಎಂದರು.

ಆದರೆ ರಾಹುಲ್ ಗಾಂಧಿ ಸೂಚನೆ ಕೊಟ್ಟಾಗ ಮರುಗಣತಿ ಮಾಡಲಾಯಿತು. 47 ಹೊಸ ಜಾತಿಗಳನ್ನು ಸೃಷ್ಟಿ ಮಾಡಲಾಗಿದೆ. ಕ್ರಿಶ್ಚಿಯನ್ ಲಿಂಗಾಯತ, ಕ್ರಿಶ್ಚಿಯನ್ ಒಕ್ಕಲಿಗ ಎಂಬೆಲ್ಲಾ ಜಾತಿಗಳನ್ನು ಸೃಷ್ಟಿ ಮಾಡಲಾಗಿದೆ. ಈ ಮೂಲಕ ಗೊಂದಲ ಸೃಷ್ಟಿ ಮಾಡಲಾಗಿದೆ ಎಂದು ಆರೋಪ ಮಾಡಿದರು.

ಹೀಗಾಗಿ ರಾಜಕೀಯ ಚಿಂತನೆ ಶಿಬಿರದಲ್ಲಿ ಇದರ ವಿರುದ್ಧ ನಿರ್ಣಯ ಕೈಗೊಳ್ಳಲಾಗಿದೆ. ನಮ್ಮ ರಾಜ್ಯದ ಯಾವುದೇ ಜಾತಿ ಪಂಥ ಮತದಲ್ಲಿ ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಯಬೇಕು ಎಂದು ಒಕ್ಕೊರಳಿನ ನಿರ್ಣಯ ಮಾಡಲಾಗಿದೆ. ಜಿಎಸ್‌ಟಿ ಸುಧಾರಣೆ ಘೋಷಣೆಯಿಂದ ದೇಶದ ಜನರಿಗೆ ಸಂತಸ ಉಂಟಾಗಿದೆ. ಈ ಐತಿಹಾಸಿಕ ನಿರ್ಣಯ ಕೈಗೊಂಡ ಪ್ರಧಾನಿ ನರೇಂದ್ರ ಮೋದಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು ಎಂದು ಮಾಹಿತಿ ನೀಡಿದರು.

**ಎಸ್‌ಸಿ ಜನಾಂಗದ ಸಮೀಕ್ಷೆ ಬೇಡ:** ಸಿದ್ದರಾಮಯ್ಯ ಸರ್ಕಾರ ಜಾತಿ ಗಣತಿ ವಿಚಾರವಾಗಿ ಗೊಂದಲ ಸೃಷ್ಟಿ ಮಾಡುತ್ತಿದೆ. ಎರಡು ತಿಂಗಳ ಹಿಂದೆ ಎಸ್‌ಸಿ ಎಸ್ ಟಿ ಜಾತಿಗಣತಿ ಆಗಿದೆ. ಮತ್ತೊಮ್ಮೆ ಮಾಡುವುದಕ್ಕೆ ನಮ್ಮ ವಿರೋಧ ಇದೆ. ಎರಡು ತಿಂಗಳ ಹಿಂದೆ ನಡೆದ ಗಣತಿಯಲ್ಲಿ ಎಸ್ಸಿ ಜನಾಂಗದ ಮುಂದೆ ಕ್ರಿಶ್ಚಿಯನ್ ಎಂಬ ಉಲ್ಲೇಖ ಇರಲಿಲ್ಲ. ಆದರೆ ಇದೀಗ ಜಾತಿ ಗಣತಿಯಲ್ಲಿ ಕ್ರಿಶ್ಚಿಯನ್ ಉಲ್ಲೇಖ ಇದೆ. ಹಾಗಾಗಿ ಎಸ್ಸಿ ಜನಾಂಗದ ಸಮೀಕ್ಷೆ ಮಾಡಬಾರದು ಎಂದು ಮನವಿ ಮಾಡಿದರು.

### ಎರಡು ದಿನಗಳಲ್ಲಿ ಉತ್ತಮ ಚರ್ಚೆ

**ಬಿಜೆಪಿ ಚಿಂತನ -ಮಂಥನ ಸಭೆಯಲ್ಲಿ ನಿರ್ಣಯ**

ರಾಜಕೀಯ ಚಿಂತನ ಮಂಥನ ಎರಡು ದಿನಗಳ ಶಿಬಿರ ಯಶಸ್ವಿಯಾಗಿದೆ. ಪಕ್ಷ ಸಂಘಟನೆಯ ನಿಟ್ಟಿನಲ್ಲಿ ಸಾಕಷ್ಟು ಚರ್ಚೆಗಳು ನಡೆದಿದೆ. ಮುಂದಿನ ದಿನಗಳಲ್ಲಿ ಪಕ್ಷ ಸಂಘಟನೆ ಮಾಡುವ ನಿಟ್ಟಿನಲ್ಲಿ ಹಾಗೂ ಹೋರಾಟ ನಡೆಸುವ ನಿಟ್ಟಿನಲ್ಲಿ ಗಂಭೀರ ಚರ್ಚೆಗಳು ನಡೆದಿವೆ ಎಂದು ತಿಳಿಸಿದರು.

## ಬೆಂಗಳೂರು ಕೌಶಲ ಶೃಂಗಸಭೆ ಸಚಿವ ಶರಣಪ್ರಕಾಶ್ ಪಾಟೀಲ

• **ಉದಯವಾಹಿನಿ, ಬೆಂಗಳೂರು**



ಬೆಂಗಳೂರು ಕೌಶಲ ಶೃಂಗಸಭೆ 2025ಅನ್ನು ನವೆಂಬರ್ 4 ರಿಂದ 6 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಶರಣಪ್ರಕಾಶ್ ಪಾಟೀಲ ತಿಳಿಸಿದರು. ಇದೇ ಮೊದಲ ಬಾರಿಗೆ ಈ ಶೃಂಗಸಭೆ ನಡೆಯುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಈ ಶೃಂಗಸಭೆಯ ಮೂಲಕ ಯುವ ಸಮುದಾಯಕ್ಕೆ ಮುಖ್ಯವಾಗಿ ಮಹಿಳೆಯರು, ಗ್ರಾಮೀಣ ಸಮುದಾಯಗಳು ಮತ್ತು ಅಂಗವಿಕಲರಿಗೆ ಹೆಚ್ಚು ಆದ್ಯತೆ ನೀಡಲು ಗಮನಹರಿಸಲಾಗಿದೆ. ಕೌಶಲದ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಲು ನಮ್ಮ ಸರ್ಕಾರ ಅವಕಾಶಗಳ ಬೃಹತ್ ವೇದಿಕೆ ಒದಗಿಸುತ್ತಿದೆ' ಎಂದು ಪಾಟೀಲ ವಿವರಿಸಿದರು. ಕೈಗಾರಿಕೆ, ಶೈಕ್ಷಣಿಕ, ತರಬೇತಿ ಮತ್ತು ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಯುವ ಸಮೂಹವನ್ನು ಬೆಳೆಸಲು ಹಾಗೂ ಉದ್ಯೋಗವನ್ನು ಹೆಚ್ಚಿಸುವ ಗುರಿಯನ್ನು ಶೃಂಗಸಭೆ ಹೊಂದಿದೆ ಎಂದರು.

## ಆನ್‌ಲೈನ್ ಮೂಲಕ ಮತ ಅಳಿಸಲು ಅಸಾಧ್ಯ : ಆಯೋಗ

• **ಉದಯವಾಹಿನಿ, ಬೆಂಗಳೂರು**

ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 6,108 ಮತಗಳನ್ನು ಅಳಿಸಲು ಯತ್ನಿಸಿದ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿಗೆ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಇನ್ನಷ್ಟು ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸಲಿದ್ದಾರೆ ಎಂದು ಕೇಂದ್ರ ಚುನಾವಣಾ ಆಯೋಗ ಶುಕ್ರವಾರ ತಿಳಿಸಿದೆ. ಆದರೆ, ಲಭ್ಯವಿರುವ ಮಾಹಿತಿಯನ್ನು ತನಿಖಾಧಿಕಾರಿಗೆ ಈಗಾಗಲೇ ಹಸ್ತಾಂತರಿಸಲಾಗಿದೆ ಎಂದು ಆಯೋಗ ಒತ್ತಿ ಹೇಳಿದೆ. ಆಳಂದ ಮತ ಅಕ್ರಮ ಯತ್ನದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿಗೆ ಕೇಂದ್ರ ಚುನಾವಣಾ ಆಯೋಗವು ಒಂದು ವಾರದೊಳಗೆ ಎಲ್ಲಾ ಸಾಕ್ಷ್ಯಗಳನ್ನು ಒದಗಿಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಗಡುವು ವಿಧಿಸಿದ್ದರು. ಮತಕಳವು ಮಾಡುವವರನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಕ್ಷಿಸುತ್ತಿದ್ದಾರೆ ಎಂದೂ ಆಪಾದಿಸಿದ್ದರು. ಆಳಂದದಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಲು 6,018 ಅರ್ಜಿಗಳು ಸಲ್ಲಿಕೆಯಾಗಿದ್ದವು. ಪರಿಶೀಲನೆ ನಡೆಸಿದ ಸಮಯದಲ್ಲಿ 24 ಮಾತ್ರ ನಿಜವಾದವು ಎಂದು ಕಂಡುಬಂದಿದ್ದು, 5,994 ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ.

## ದೀಪಿಕಾ ವಿದ್ಯಾರ್ಥಿ ವೇತನ ಕಾರ್ಯಕ್ರಮಕ್ಕೆ ಸಿಎಂ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ರಾಜ್ಯದ ಹೆಣ್ಣು ಮಕ್ಕಳಿಗೆ ಇನ್ನು ಮುಂದೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ಆರ್ಥಿಕ ನೆರವು ನೀಡಲಿದ್ದು, ಅದಕ್ಕಾಗಿ 2,000 ಕೋಟಿ ಹಾಗೂ ರಾಜ್ಯ ಸರ್ಕಾರ 200 ಕೋಟಿ ಒದಗಿಸಿವೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರತಿ ವರ್ಷ ವಿದ್ಯಾರ್ಥಿ ವೇತನ ನೀಡಲು ಅಜೀಂ ಪ್ರೇಮ್‌ಜಿ ಫೌಂಡೇಷನ್ ಹಾಗೂ ಉನ್ನತ ಶಿಕ್ಷಣ ಇಲಾಖೆ 'ದೀಪಿಕಾ ವಿದ್ಯಾರ್ಥಿ ವೇತನ' ಕಾರ್ಯಕ್ರಮ ರೂಪಿಸಿದ್ದು, ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಚಾಲನೆ ನೀಡಿದರು. ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿನಿಗೆ ಪದವಿ ಶಿಕ್ಷಣ ಮುಗಿಯುವವರೆಗೆ ವಾರ್ಷಿಕ 30,000 ಸಿಗಲಿದ್ದು, ಶೈಕ್ಷಣಿಕ ಉದ್ದೇಶ ಹಾಗೂ ಪೂರಕ ಕಾರಣಗಳಿಗೆ ಬಳಸಿಕೊಳ್ಳಬಹುದು. ಸರ್ಕಾರಿ ಶಾಲೆಗಳಲ್ಲಿ 10ನೇ ತರಗತಿ ಹಾಗೂ ದ್ವಿತೀಯ ಪಿಯು ಉತ್ತೀರ್ಣರಾಗಿ 2025-26ನೇ ಸಾಲಿನಲ್ಲಿ ಸಾಮಾನ್ಯ ಪದವಿ ಅಥವಾ ವೃತ್ತಿ ಶಿಕ್ಷಣ ಪದವಿಗೆ ಸೇರುವ 37,000 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನದ ನೆರವು ಸಿಗಲಿದೆ. ಅರ್ಹ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾದರೆ ಅ ಮೊತ್ತವನ್ನು ರಾಜ್ಯ ಭರಿಸಲಿದೆ.

## ಎಥೆನಾಲ್ ಕಂಪನಿಗಳಿಗೆ ನೋಟಿಸ್ ಜಾರಿಗೆ ಸೂಚನೆ

• **ಉದಯವಾಹಿನಿ, ಬೆಂಗಳೂರು**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಕ್ರಮ ಮಾರುಕಟ್ಟೆ ಶುಲ್ಕ ವಂಚಿಸುವ ಮೆಕ್ಕೆಜೋಳ, ಅಕ್ಕಿ ಆಧಾರಿತ ಎಥೆನಾಲ್ ಕಾರ್ಖಾನೆಗಳಿಗೆ ನೋಟಿಸ್ ಜಾರಿ ಮಾಡಿ ಕ್ರಿಮಿನಲ್ ಕೇಸು ದಾಖಲಿಸಿ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು. ವಿಕಾಸಸೌಧದಲ್ಲಿ ಕೃಷಿ ಮಾರುಕಟ್ಟೆ ಇಲಾಖೆ ರಾಜ್ಯಮಟ್ಟದ ಪ್ರಗತಿ ಪರಿಶೀಲನೆ ಸಭೆ ನಡೆಸಿ ಅವರು ಮಾತನಾಡಿದರು. ಮೆಕ್ಕೆಜೋಳ, ಭತ್ತ, ಅಡಿಕೆ, ಮೆಣಸಿನಕಾಯಿ, ಹತ್ತಿ ಬೆಳೆಗಳು ಎಪಿಎಂಸಿಯ ಆದಾಯದ ಪ್ರಮುಖ ಮೂಲಗಳು. ಕೆಲವು ಎಥೆನಾಲ್ ಕಂಪನಿಗಳು ಮತ್ತು ರೈಸ್‌ಮಿಲ್‌ಗಳ ಮಾಲೀಕರು ಮಾರುಕಟ್ಟೆ ಶುಲ್ಕ ವಂಚಿಸುತ್ತಿರುವ ಮಾಹಿತಿ ಇದೆ. ಆದ್ದರಿಂದ, ಅಂತಹವರ ಮೇಲೆ ಗಮನ ಇಡಬೇಕು ಎಂದು ಹೇಳಿದರು.

# ಪಾಕ್ - ಚೀನಾಗೆ ಮುಖಭಂಗ



### ಬಲೂಚ್ ಲಿಬರೇಶನ್ ಆರ್ಮಿಯನ್ನು ಉಗ್ರರೆಂದು ಘೋಷಿಸಲು ಅಮೆರಿಕ ತಡೆ

• **ಉದಯವಾಹಿನಿ, ಬೆಂಗಳೂರು**

ಬಲೋಚಿಸ್ತಾನ್ ಲಿಬರೇಷನ್ ಆರ್ಮಿ ಮತ್ತು ಮಜೀದ್ ಬ್ರಿಗೇಡ್ ಸಂಘಟನೆಗಳನ್ನು ವಿದೇಶಿ ಉಗ್ರರ ಸಂಘಟನೆ ಎಂದು ಅಮೆರಿಕ ಘೋಷಿಸಿದ ನಂತರ ಅವುಗಳನ್ನು ವಿಶ್ವಸಂಸ್ಥೆಯಲ್ಲಿ ನಿರ್ಬಂಧಿಸುವ ಪಾಕಿಸ್ತಾನ ಮತ್ತು ಚೀನಾ ಪ್ರಯತ್ನವನ್ನು ಅಮೆರಿಕ, ಇಂಗ್ಲೆಂಡ್ ಮತ್ತು ಫ್ರಾನ್ಸ್ ತಡೆದಿವೆ.

ಬಲೂಚ್ ವಿಮೋಚನಾ ಸೇನೆ ಮತ್ತು ಅದರ ಆತ್ಮಾಹುತಿ ದಳವಾದ ಮಜೀದ್ ಬ್ರಿಗೇಡ್ ಅಲ್ ಖೈದಾ ಅಥವಾ ISILನೊಂದಿಗೆ ಸಂಪರ್ಕದಲ್ಲಿವೆ ಎಂಬುದಕ್ಕೆ ಯಾವುದೇ ಸೂಕ್ತ ಪುರಾವೆಗಳಿಲ್ಲ ಎಂಬುದನ್ನು ಅಮೆರಿಕ ಮತ್ತಿತರ ಮಿತ್ರ ರಾಷ್ಟ್ರಗಳು ಪರಿಗಣಿಸಿವೆ.1267ರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯದಂತೆ ಅಲ್-ಖೈದಾ, ತಾಲಿಬಾನ್ ಮತ್ತು ISILಗೆ ಸಂಬಂಧಿಸಿರುವ ವ್ಯಕ್ತಿಗಳು ಅಥವಾ ಸಂಘಟನೆಗೆ ಸೇರಿದ ಕಾರ್ಯಕರ್ತರ ಪ್ರಯಾಣಕ್ಕೆ ನಿರ್ಬಂಧ, ಆಸ್ತಿ ಹಾಗೂ ಶಸಾಸ್ತ್ರಗಳ ಮುಟ್ಟುಗೋಲಿಗೆ ಅವಕಾಶ ನೀಡುತ್ತದೆ.

ಈ ಹಿಂದೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ (ಬಿಎಲ್‌ಎ) ಮತ್ತು ಅದರ ಆತ್ಮಾಹುತಿ ವಿಭಾಗವಾದ ಮಜೀದ್ ಬ್ರಿಗೇಡ್ ನಿರ್ಬಂಧಿಸುವಂತೆ ಪಾಕಿಸ್ತಾನ ಮತ್ತು ಚೀನಾ ಜಂಟಿಯಾಗಿ ಮನವಿ ಸಲ್ಲಿಸಿದ್ದವು. ISIL-ಎ ಅಲ್ -ಖೈದಾ, ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್, BLA ಮತ್ತು ಮಜೀದ್ ಬ್ರಿಗೇಡ್-ಆಫ್ಘಾನಿಸ್ತಾನದಿಂದ ಗಡಿಯಾಚೆಗಿನ ದಾಳಿಗಳನ್ನು ನಡೆಸುತ್ತಿವೆ ಎಂದು ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ಖಾಯಂ ಪ್ರತಿನಿಧಿ ಅಸಿಮ್ ಇಫ್ತಿಕರ್ ಅಹ್ಮದ್ ಬುಧವಾರ ಹೇಳಿದ್ದರು. BLA ಮತ್ತು ಮಜೀದ್ ಬ್ರಿಗೇಡ್ ಸಂಘಟನೆಗಳನ್ನು ನಿರ್ಬಂಧ ಪಟ್ಟಿಗೆ ಸೇರಿಸಬೇಕು ಎಂದು 1267ರ ನಿರ್ಬಂಧ ಸಮಿತಿ ಮುಂದೆ ಮನವಿ ಸಲ್ಲಿಸಿದ್ದರು.

ಬಲೋಚಿಸ್ತಾನ್ ಲಿಬರೇಷನ್ ಆರ್ಮಿ ಮತ್ತು ಮಜೀದ್ ಬ್ರಿಗೇಡ್ ಸಂಘಟನೆಗಳನ್ನು ವಿದೇಶಿ ಉಗ್ರರ ಸಂಘಟನೆ ಎಂದು ಕಳೆದ ತಿಂಗಳು ಅಮೆರಿಕ ಘೋಷಿಸಿತ್ತು. **'ಪಾಕ್ ವಿರುದ್ಧದ ಕಾರ್ಯಾಚರಣೆಗೆ ನಮಗೆ ಬೆಂಬಲಿಸಿ':** ಪಹಲ್ಗಾಮ್ ದಾಳಿ ಪ್ರತೀಕಾರ ತೀರಿಸಿಕೊಂಡ ಭಾರತದ ಮುಂದೆ ಬಲೂಚಿಸ್ತಾನಿಗಳು ಮನವಿಯೊಂದನ್ನ ಮಾಡಿಕೊಂಡಿದ್ರು. ನಾವು ಪಾಕ್ ವಿರುದ್ಧ ಹೋರಾಡುತ್ತಿದ್ದೇವೆ, ನಿಮ್ಮ ಬೆಂಬಲ ನಮಗೆ ಬೇಕು, ನಮಗೆ ಸಹಕಾರ ನೀಡಿ ಪಾಕ್ ನಿರ್ನಾಮ ಮಾಡೋಣ ಎಂದು ಭಾರತಕ್ಕೆ ಬಲೂಚಿಗಳು ಮನವಿ ಮಾಡಿದ್ರು.

**ಭಾರತ-ಪಾಕಿಸ್ತಾನ ಕದನ ವಿರಾಮಕ್ಕೆ ಅಮೆರಿಕ ಕಾರಣವಲ್ಲ:** ಅಂತಾರಾಷ್ಟ್ರೀಯ ರಾಜಕೀಯದಲ್ಲಿ ದೊಡ್ಡ ಸುಳ್ಳೊಂದು ಬಯಲಾಗಿದೆ. ಆಪರೇಷನ್ ಸಿಂಧೂರ ನಂತರ ನಡೆದ ಭಾರತ,ಪಾಕಿಸ್ತಾನ ಸಂಘರ್ಷಕ್ಕೆ ಶಾಂತಿಯ ಲೇಪ ಹಚ್ಚಿದ್ದು ನಾನೇ ಎನ್ನುತ್ತಿದ್ದ ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಭಾರಿ ಹಿನ್ನಡೆ ಆಗಿದೆ. ಹೌದು, ಭಾರತ ಹಾಗೂ ಪಾಕಿಸ್ತಾನದ ಸಂಘರ್ಷಕ್ಕೆ ಯಾವುದೇ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆಗೆ ಭಾರತ ಒಪ್ಪಲಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟವಾಗಿ ತಿಳಿಸಿತ್ತು. ಆದರೂ ಟ್ರಂಪ್ ಮಾತ್ರ ಹೋದಲ್ಲಿ ಬಂದಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವಿನ ಕದನ ವಿರಾಮಕ್ಕೆ ನಾನೇ ಕಾರಣ ಎಂದು ಜಂಬ ಕೊಚ್ಚಿಕೊಳ್ಳುತ್ತಲೇ ಇದ್ರು. ಆದ್ರೆ ಇದೀಗ ಟ್ರಂಪ್ ಅವರ ಈ ಮಹಾ ಸುಳ್ಳಿನ ಕೋಟೆಯನ್ನು ಅವರ ಮಿತ್ರ ರಾಷ್ಟ್ರವಾದ ಪಾಕಿಸ್ತಾನವೇ ಪುಡಿಗೈದಿದೆ. ಪಾಕಿಸ್ತಾನದ ವಿದೇಶಾಂಗ ಸಚಿವರೇ ನೀಡಿದ ಒಂದು ಹೇಳಿಕೆ, ಟ್ರಂಪ್ ಅವರ ಬಣ್ಣವನ್ನು ಜಗತ್ತಿನೆದುರು ಬಯಲು ಮಾಡಿದೆ.

1. ಭಾರತದ 'ಆಪರೇಷನ್ ಸಿಂಧೂರ'ದಲ್ಲಿ ತಮ್ಮ ಶಿಬಿರಕ್ಕೆ ಹಾನಿಯಾಗಿದೆ ಎಂದು ಒಪ್ಪಿಕೊಂಡ ಲಷ್ಕರ್ ನಾಯಕ ಖಾಸಿಂ
2. ಪಾಕಿಸ್ತಾನದ ಸರ್ಕಾರ ಮತ್ತು ಸೇನೆಯಿಂದ ಲಷ್ಕರ್ ಸಂಘಟನೆಯ ಪುನರ್ ನಿರ್ಮಾಣಕ್ಕೆ ಹಣಕಾಸಿನ ಸಹಾಯ
3. ಸ್ವತಃ ಲಷ್ಕರ್-ಎ-ತೊಯ್ಬಾದ ಉಪ ಮುಖ್ಯಸ್ಥ ಸೈಫುಲ್ಲಾ ಕಸೂರಿ ಹೇಳಿಕೆ

### ಪಾಕಿಸ್ತಾನದ ಗೋಣು ಮುರಿದಿದ್ದ ಆಪರೇಷನ್ ಸಿಂಧೂರ

ಮೇ 7 ರಂದು, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ನಾಗರಿಕರನ್ನು ಉಗ್ರರು ಹತ್ಯೆ ಮಾಡಿದ ಕೆಲವೇ ದಿನಗಳಲ್ಲಿ, ಭಾರತೀಯ ಸೇನೆಯು 'ಆಪರೇಷನ್ ಸಿಂಧೂರ' ಹೆಸರಿನಲ್ಲಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದೊಳಗೆ ದಾಳಿ ನಡೆಸಿತ್ತು. ಈ ಕಾರ್ಯಾಚರಣೆಯಲ್ಲಿ ಲಷ್ಕರ್‌ನ ಮುರಿಡ್ಕೆ ಶಿಬಿರ, ಜೈಶ್-ಎ-ಮೊಹಮ್ಮದ್‌ನ ಬಹಾವಲ್ಪುರ್ ನೆಲೆ ಮತ್ತು ಹಿಜ್ಬುಲ್ ಮುಜಾಹಿದ್ದೀನ್‌ನ ಸಿಯಾಲ್‌ಕೋಟ್ ಶಿಬಿರ ಸೇರಿದಂತೆ ಒಂಬತ್ತು ಪ್ರಮುಖ ಭಯೋತ್ಪಾದಕ ತಾಣಗಳನ್ನು ನಾಶಪಡಿಸಲಾಗಿತ್ತು. ಈ ಹಿಂದೆ, ಜೈಶ್ ಕಮಾಂಡರ್ ಮಸೂದ್ ಇಲ್ಯಾಸ್ ಕಾಶ್ಮೀರಿ ಎಂಬಾತ ಕೂಡ ಬಹಾವಲ್ಪುರ್ ಮೇಲಿನ ದಾಳಿಯಲ್ಲಿ ಜೈಶ್ ಮುಖ್ಯಸ್ಥ ಮಸೂದ್ ಅಝರ್‌ನ ಕುಟುಂಬವು 'ಚಿಂದಿಚಿಂದಿಯಾಗಿದೆ' ಎಂದು ಒಪ್ಪಿಕೊಂಡಿದ್ದ. 'ಆಪರೇಷನ್ ಸಿಂಧೂರ'ದಲ್ಲಿ ಹತರಾದ ಉಗ್ರರ ಅಂತ್ಯಕ್ರಿಯೆಗೆ ಪಾಕಿಸ್ತಾನ ಸೇನೆ ಮತ್ತು ಅದರ ಮುಖ್ಯಸ್ಥ ಅಸಿಮ್ ಮುನೀರ್ ಅವರು ಜನರಲ್‌ಗಳನ್ನು ಕಳುಹಿಸಿದ್ದರು ಎಂದೂ ಆತ ಹೇಳಿಕೊಂಡಿದ್ದ.ಉಗ್ರಗಾಮಿ ಸಂಘಟನೆಗಳ ಮುಖ್ಯಸ್ಥರಿಂದ ಬರುತ್ತಿರುವ ಈ ಸರಣಿ ಒಪ್ಪಿಗೆಗಳು, ಭಯೋತ್ಪಾದನೆಗೆ ಪಾಕಿಸ್ತಾನ ನೀಡುತ್ತಿರುವ ಬೆಂಬಲವನ್ನು ಜಗತ್ತಿನೆದುರು ಮತ್ತೊಮ್ಮೆ ಬೆತ್ತಲುಗೊಳಿಸಿವೆ.

**ಪಾಕಿಸ್ತಾನವೇ ಹೇಳ್ತು ಸತ್ಯ!**

### ಭಾರತ ಮೂರನೇ ವ್ಯಕ್ತಿಯ ಪಾತ್ರ

ತಾನೇ ಭಾರತ ಮತ್ತು ಪಾಕಿಸ್ತಾನದ ನಡುವಿನ ಯುದ್ಧವನ್ನು ನಿಲ್ಲಿಸಿದ್ದು ಎಂದು ಪದೇಪದೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡುತ್ತಲೇ ಇದ್ದಾರೆ. ಭಾರತವೂ ಅದನ್ನು ಪದೇಪದೆ ನಿರಾಕರಿಸುತ್ತಿದೆ. ಇದೀಗ ಪಾಕಿಸ್ತಾನ ಕೂಡ ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನವಿರಾಮದಲ್ಲಿ ಅಮೆರಿಕದ ಪಾತ್ರವೇನೂ ಇಲ್ಲ ಎಂದು ಪಾಕಿಸ್ತಾನವೇ ಒಪ್ಪಿಕೊಂಡಿದೆ. ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಅವರು ಭಾರತವು ಕದನ ವಿರಾಮ ಮಾತುಕತೆಯಲ್ಲಿ ಅಥವಾ ಬೇರಾವುದೇ ದ್ವಿಪಕ್ಷೀಯ ಮಾತುಕತೆಯಲ್ಲಿ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆಯನ್ನು ಎಂದಿಗೂ ಸ್ವೀಕರಿಸಲಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಈ ಮೂಲಕ ಪರೋಕ್ಷವಾಗಿ ಆಪರೇಷನ್ ಸಿಂಧೂರ್ ವೇಳೆ ನಡೆದ ಕದನವಿರಾಮದಲ್ಲೂ ಭಾರತ ಅಮೆರಿಕದ ಮಧ್ಯಸ್ಥಿಕೆಯನ್ನು ಒಪ್ಪಿಲ್ಲ ಎಂದು ಅವರು ಖಚಿತಪಡಿಸಿದ್ದಾರೆ



**ಬಲೂಚಿಸ್ತಾನ್ ಹೋರಾಟಕ್ಕೆ ಸಿಕ್ತಾ 'ಮಹಾ ಬಲ...**

# ಜಾತಿಗಣತಿ ಮುಂದೂಡಲ್ಲ, ಮುಂದೂಡಲ್ಲ: ಸಿಎಂ

● ಸಚಿವ ಸಂಪುಟ ಸಭೆಯಲ್ಲಿ ಜಾತಿ ಸಮೀಕ್ಷೆ ಗೊಂದಲ ಬಗ್ಗೆ ತೀವ್ರ ಆಕ್ರೋಶ ● ಸಮೀಕ್ಷೆ ಆರಂಭವಾಗಲು 2 ದಿನಗಳಷ್ಟೇ ಬಾಕಿ

• **ಉದಯವಾಹಿನಿ, ಬೆಂಗಳೂರು**

ಜಾತಿಗಣತಿ ಮುಂದೂಡಲ್ಲ, ಮುಂದೂಡಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ಬಾರಿ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಅವರು, ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಸಂವಿಧಾನಿಕ ಸಂಸ್ಥೆ. ಎಲ್ಲರ ಅಭಿಪ್ರಾಯ ಪಡೆದು ಅವರು ತೀರ್ಮಾನ ಮಾಡಿದ್ದಾರೆ. ಜಾತಿಗಣತಿ ಮುಂದೂಡಲ್ಲ ಎಂದು ತಿಳಿಸಿದ್ದಾರೆ. ಕ್ಯಾಬಿನೆಟ್‌ನಲ್ಲಿ ಸಚಿವರ ಅಸಮಾಧಾನದ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಬಿಜೆಪಿ ಅವರು ರಾಜಕೀಯ ಮಾಡುತ್ತಿದ್ದಾರೆ. ನೀವು ಕೂಡ ರಾಜಕೀಯವಾಗಿ ಎದುರಿಸಬೇಕು. ಅದನ್ನ ಖಂಡಿಸಬೇಕು ಎಂದು ಸಚಿವರಿಗೆ ಹೇಳಿದ್ದೇನೆ ಎಂದಿದ್ದಾರೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಜಾತಿಗಣತಿ ಸಮೀಕ್ಷೆ ಆರಂಭವಾಗಲು ಕೇವಲ ಎರಡು ದಿನಗಳಷ್ಟೇ ಬಾಕಿ ಇದ್ದು, ಈ ನಡುವಲ್ಲೇ ಸಮೀಕ್ಷೆ ಬಗ್ಗೆ ಸಚಿವರಲ್ಲಿಯೇ ಭಿನ್ನಮತ ಸ್ಫೋಟಗೊಂಡಿದೆ. ಸಚಿವ ಸಂಪುಟ ಸಭೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ಬಗ್ಗೆ ಚರ್ಚೆ ನಡೆದಿದಿದ್ದು, ಈ ವೇಳೆ ಸಮೀಕ್ಷಾ ಪಟ್ಟಿಯಲ್ಲಿ 331 ಹೊಸ ಜಾತಿಗಳ ಸೇರ್ಪಡೆಗೊಳಿಸುವುದನ್ನು ಸಚಿವರ ಒಂದು ವರ್ಗ ವಿರೋಧ ವ್ಯಕ್ತಪಡಿಸಿದೆ ಎಂದು ತಿಳಿದುಬಂದಿದೆ. ಕೆಲ ಸಚಿವರು ಸಮೀಕ್ಷೆ ಪರ ವಾದಿಸಿದ್ದರೆ. ಇನ್ನೂ ಕೆಲವರು ಸಮೀಕ್ಷೆಯ ವಿರೋಧಿಸಿದ್ದು, ಸಂಪುಟ ಸಭೆಯಲ್ಲಿ ಪರ-ವಿರೋಧದ ಚರ್ಚೆ ತಾರಕಕ್ಕೇರಿ ವಾಗ್ಯುದ್ದ ನಡೆಯಿತು ಎನ್ನಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖವೇ ಕೆಲ ಸಚಿವರು ಸಮೀಕ್ಷೆ ವಿರುದ್ಧ ಭಾವೋದ್ವೇಗದಲ್ಲಿ ಮಾತನಾಡಿದ್ದಲ್ಲದೆ ಸಮೀಕ್ಷೆಯನ್ನೇ ನಡೆಸದಂತೆ ಆಗ್ರಹಿಸಿದರು ಎಂದು ಮೂಲಗಳಿಂದ ತಿಳಿದುಬಂದಿದೆ.



ಸಮೀಕ್ಷೆ ಕುರಿತು ಎಲ್ಲಾ ಜಾತಿಗಳಲ್ಲೂ ತೀವ್ರ ಗೊಂದಲವಿದೆ. ರಾಜ್ಯದ ಜಾತಿ ಪಟ್ಟಿಯಲ್ಲಿ ಇಲ್ಲದ ಲಿಂಗಾಯತ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್ ಎಂದೆಲ್ಲ 331 ಹೊಸ ಜಾತಿಗಳನ್ನು ಸೇರ್ಪಡೆ ಮಾಡಿದೆ. ಜತೆಗೆ ಲಿಂಗಾಯತರಲ್ಲಿ ಯಾವ ಧರ್ಮ ನಮೂದಿಸಬೇಕು ಎಂಬ ಗೊಂದಲ ಉಂಟಾಗಿದ್ದು, ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡುತ್ತಿದೆ. ರಾಜ್ಯ ಸರ್ಕಾರ ಈ ಗೊಂದಲ ಬಗೆಹರಿಸುವವರೆಗೂ ಸಮೀಕೆಗೆ ಮುಂದಾಗಬಾರದು. ಒಂದೊಮ್ಮೆ ಮುಂದಾದರೆ ಮತ್ತೊಮ್ಮೆ ಜಾತಿ ಸಮೀಕ್ಷೆ ಕಾಂಗ್ರೆಸ್‌ಗೆ ಕಂಟಕವಾಗಲಿದೆ ಎಂದು ಎಚ್ಚರಿಸಿದರು ಎನ್ನಲಾಗಿದೆ. ಆದಾಗ್ಯೂ ಕೆಲ ಸಚಿಚವರು ಸಮೀಕ್ಷೆಯನ್ನು ಮುಂದುವರೆಸುವಂತೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು ಎಂದು ತಿಳಿದುಬಂದಿದೆ. ಏತನ್ಮಧ್ಯೆ, ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿಕೆಶಿವಕುಮಾರ್ ಅವರು, ಮುಖ್ಯಮಂತ್ರಿಗಳ ಪರ ವಾದಿಸಿದ್ದು, ಕಾಂಗ್ರೆಸ್ ಅಥವಾ ಸರ್ಕಾರ ಸಮಾಜವನ್ನು ವಿಭಜಿಸುವುದಿಲ್ಲ.ಜಾತಿ ಸಮೀಕ್ಷೆಯ ಉದ್ದೇಶ ನಾಗರೀಕರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ನಿರ್ಣಯಿಸುವುದು ಮಾತ್ರ. ಬಿಜೆಪಿ ದಾರಿ ತಪ್ಪಿಸುತ್ತಿದೆ. ಸರ್ಕಾರ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಿದೆ.

ಕೆಲವರು ಪ್ರತ್ಯೇಕ ಗುರುತು ಬೇಕು ಎಂದು ಹೇಳಿದರೆ, ಇತರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜಕೀಯ ಉದ್ದೇಶದಿಂದ ಮಾತನಾಡುವವರನ್ನು ನಾವು ಪರಿಗಣಿಸುವುದಿಲ್ಲ ಎಂದು ಹೇಳಿದರು ತಿಳಿದುಬಂದಿದೆ. ಈ ವೇಳೆ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಅಸಮಾಧಾನಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನನಗೆ ಮೇಲ್ವರ್ಗಗಳ ವಿರುದ್ಧ ಎಂಬ ಹಣೆಪಟ್ಟಿ ಕಟ್ಟುತ್ತಿದ್ದೀರಾ.. ಎಂದು ಗರಂ ಆದ ಪ್ರಸಂಗವೂ ನಡೆದಿರುವುದಾಗಿ ತಿಳಿದುಬಂದಿದೆ.

### ಜನರು ಹೇಳಿದಂತೆ ಜಾತಿ ದಾಖಲಾತಿ

ಯಾವುದೇ ಜಾತಿಯನ್ನು ಹೊಸದಾಗಿ ಸೃಷ್ಟಿ ಮಾಡಿಲ್ಲ. ಈ ಹಿಂದೆ ಕಾಂತರಾಜು ಆಯೋಗ ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಜನರೇ ಹೇಳಿದ ಜಾತಿಗಳನ್ನು ಬರೆದುಕೊಳ್ಳಲಾಗಿತ್ತು. ಆಕ್ಷೇಪಗಳನ್ನು ಆಹ್ವಾನಿಸಿದಾಗ ಕೆಲವು ಸಮುದಾಯದವರು ತಮ್ಮ ಜಾತಿಗಳನ್ನು ಹೇಳಿಕೊಂಡಿದ್ದರಿಂದ ಅವುಗಳನ್ನು ಇಲ್ಲಿ ತರಲಾಗಿದೆ. ಇತರ ಕಲಂನಲ್ಲಿರುವ ಜಾತಿಗಳನ್ನು ಜನರು ಪ್ರತ್ಯೇಕವಾಗಿ ಹೇಳಿದ್ದಾರೆ. ಇದನ್ನು ಈ ಸಮೀಕ್ಷೆಯ ಕೈಪಿಡಿಯಲ್ಲೂ ಸೇರಿಸಲಾಗಿದೆ ಎಂದರು.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹11,133/Gram24ct ₹10,205/Gram22ct | ಬೆಳ್ಳಿ: ₹133.70/Gram

# ಮದ್ದೂರು ಶಾಸಕ ಪೋರ್ಕಿ ತರಹ ಮಾತಾಡಿದ್ದಾನೆ: ಪ್ರತಾಪ್ ಸಿಂಹ

## ಸಿದ್ದರಾಮಯ್ಯ ಅವರು ಹಿಂದೂಗಳನ್ನು ಒಡೆಯುತ್ತಿರುವುದರ ವಿರುದ್ಧ ಸ್ವಾಮೀಜಿಗಳು ಧ್ವನಿ ಎತ್ತಬೇಕು

• **ಉದಯವಾಹಿನಿ, ಮೈಸೂರು**

ಮದ್ದೂರು ಶಾಸಕ ಪೋರ್ಕಿ ತರಹ ಮಾತಾಡಿದ್ದಾನೆ. ಚಿಕ್ಕಬಳ್ಳಾಪುರದಲ್ಲಿ ಒಬ್ಬ ಪೋರ್ಕಿ ಶಾಸಕ ಇದ್ದಾನೆ ಈಗ ಮದ್ದೂರಿನಲ್ಲೂ ಒಬ್ಬ ಸೃಷ್ಟಿಯಾಗಿದ್ದಾನೆ ಎಂದು ಮದ್ದೂರು ಶಾಸಕ ಉದಯ್ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ವಯಕ್ತಿಕ ಟೀಕಾಪ್ರಹಾರ ಮುಂದುವರಿಸಿದ್ದಾರೆ. ಪ್ರತಾಪ್ ಸಿಂಹ ಬಗ್ಗೆ ಟೀಕೆ ಮಾಡಿದ್ದ ಶಾಸಕ ಉದಯ್ ಅವರಿಗೆ ಪ್ರತಿಕ್ರಿಯೆಯಾಗಿ ಮೈಸೂರಿನಲ್ಲಿ ಶುಕ್ರವಾರ ತಿರುಗೇಟು ನೀಡಿದರು. ಮದ್ದೂರು ಶಾಸಕ ಪೋರ್ಕಿ ತರಹ ಮಾತಾಡಿದ್ದಾನೆ. ಚಿಕ್ಕಬಳ್ಳಾಪುರದಲ್ಲಿ ಒಬ್ಬ ಪೋರ್ಕಿ ಶಾಸಕ ಇದ್ದಾನೆ. ಈಗ ಮದ್ದೂರಿನಲ್ಲೂ ಒಬ್ಬ ಸೃಷ್ಟಿಯಾಗಿದ್ದಾನೆ. ಪೋರ್ಕಿಗಳು ಮಾತ್ರ ಮಾತಾಡುವ ಭಾಷೆಯನ್ನು ಶಾಸಕರು ಬಳಸಿದ್ದಾರೆ ಎಂದರು. ಬೆಂಗಳೂರಿನ ಗಾಂಧಿನಗರದ ಲಾಡ್ಜ್ ರೂಂ ನಲ್ಲಿ ಇಸ್ಪೀಟ್ ಆಡಿಸಿ ಶಾಸಕ ಉದಯ್ ದುಡ್ಡು ಮಾಡಿದ್ದರು. ಕ್ಯಾಸಿನೋದಲ್ಲಿ ಹೆಣ್ಣು, ಎಣ್ಣೆ ನೀಡಿ ಅದರಲ್ಲಿ ಹಣ ಮಾಡಿ ಶಾಸಕರಾಗಿದ್ದಾರೆ. ಕ್ಯಾಸಿನೋ ಟೇಬಲ್ ನಲ್ಲಿ, ಇಸ್ಪೀಟ್ ಟೇಬಲ್ ನಲ್ಲಿ ಕುಡಿದ ಮತ್ತಿನಲ್ಲಿ ಮಾತಾಡುವ ರೀತಿ ಉದಯ್ ಮಾತಾಡಿದ್ದಾರೆ ಎಂದರು. ಕ್ಯಾಸೀನೋ ಟೇಬಲ್ ಗೂ, ಇಸ್ಪೀಟ್ ಟೇಬಲ್ ಗೂ ಪತ್ರಿಕಾಗೋಷ್ಠಿ ಟೇಬಲ್ ಗೂ ವ್ಯತ್ಯಾಸ ಗೊತ್ತಿಲ್ವಾ ಉದಯ್ ಶಾಸಕ ಉದಯ್ ನಿಮ್ಮ ಹೆಸರಿಗೆ ಮದ್ದೂರು ಬರೆದು ಕೊಟ್ಟಿದ್ದಾರಾ? ಮದ್ದೂರನ್ನು ಜೂಜು ಕೇಂದ್ರ ಅಂದುಕೊಂಡ್ರಾ? ಗಣೇಶಮೂರ್ತಿ ಮೆರವಣಿಗೆ ವೇಳೆ ಅಹಿತಕರ ಘಟನೆ ನಡೆದಾಗ ನೀವು ಅಲ್ಲಿ ಇದ್ದಿದ್ದರೆ ಜನರೇ ನಿಮಗೆ ಪಾಠ ಕಲಿಸುತ್ತಿದ್ದರು. ನನಗೂ ಎಲ್ಲಾ ರೀತಿಯ ಭಾಷೆ ಬರುತ್ತದೆ. ನನ್ನ ತಾಳ್ಮೆ ಪರೀಕ್ಷೆ ಮಾಡಬೇಡಿ. ಟೀಕೆಗಳಿಗೆ ಮನೆಯವರನ್ನು ಯಾಕೆ ಎಳೆದು ತರುತ್ತೀರಾ? ನಿಮ್ಮ ಮನೆಯವರ ಬಗ್ಗೆ ನಾನು ಈ ಮಾತಾಡಿದ್ದರೆ ಹೇಗಿರುತ್ತೆ? ಮದ್ದೂರಿಗೆ ಬಂದು ನಿಮಗೆ ಬೇಕಾದರೆ ಉತ್ತರ ಕೊಟ್ಟು ಹೋಗುತ್ತೇನೆ. ಕರೆಸಿ ನನ್ನನ್ನು ಬೇಕಾದರೆ ಅಲ್ಲಿಗೆ ಎಂದು ಸವಾಲು ಹಾಕಿದರು. ಜೂಜುಕೋರರ ರೀತಿ ಮಾತಾಡುವುದನ್ನು ಮೊದಲು ನಿಲ್ಲಿಸಿ ಎಂದು ಆಗ್ರಹಿಸಿದರು. ಇವರ ಬೇಳೆ ಬೇಯಿಸಲು ಏನೇನೋ ಹೇಳ್ತಾರೆ. ಮಂಡ್ಯದ ಪ್ರಬುದ್ಧ ಜನ ಇದಕ್ಕೆಲ್ಲ ಅವಕಾಶ ಕೊಡುವುದಿಲ್ಲ ಸಮಾಜದಲ್ಲಿರುವವರ ಶಾಂತಿಯನ್ನು ಕಾಪಾಡುವ ಕೆಲಸ ಮಾಡಬೇಕು. ಆದರೆ ಬೆಂಕಿ ಹಚ್ಚುವ ಕೆಲಸ ಮಾಡುವುದನ್ನು ನಾವು ಖಂಡಿಸುತ್ತೇವೆ. ಆದರೆ ರಾಜಕೀಯ ಲಾಭ ಮಾಡಿಕೊಳ್ಳುವ ಕೆಲಸ ಮಾಡಿದ್ದಾರೆ. ನಾನು ಬಂದ ನಂತರ ನಮ್ಮ ದೇವಸ್ಥಾನಗಳಿಗೆ ಅನುದಾನ ಕೊಟ್ಟಿದ್ದೇನೆ. ನಾವೆಲ್ಲ ಹಿಂದೂಗಳಲ್ವಾ. ಇವರು ಬಂದು ನಮ್ಮ ಮದ್ದೂರು ತಾಲ್ಲೂಕು ಜನಕ್ಕೆ ಸರ್ಟಿಫಿಕೇಟ್ ಕೊಡಬೇಕಾ.. ಇದೇನು ತಾಲೀಬಾನಾ? ಇದು ಮಂಡ್ಯ ಜಿಲ್ಲೆ. ನಾವು ಸ್ಟ್ರಾಂಗ್ ಜನ. ಇದನ್ನ ನೆನಪಿಡಲಿ. ಇನ್ನು ಮುಂದೆ ಆದರೂ ಕಚಡಾ ಕೆಲಸ ಬಿಡಬೇಕು. ಶಾಂತಿಗೆ ಬಂಗ ತರುವ ಕೆಲಸ ಬಿಡಬೇಕು ಎಂದು ಆಗ್ರಹಿಸಿದ್ದರು. ಮಲೆನಾಡಿಂದ ಬಂದವರು, ಶಿವಮೊಗ್ಗದಿಂದ ಬಂದವರು ನಮಗೆ ಬುದ್ಧಿ ಹೇಳಬೇಕಾಗಿಲ್ಲ ಎಂದು ಆಕ್ರೋಶ ಹೊರಹಾಕಿದ್ದರು.

**ಮುಸ್ಲಿಮರ ಸಂಖ್ಯೆಯನ್ನು ಹೆಚ್ಚು ತೋರಿಸುವ ಪ್ರಯತ್ನ:** ರಾಜ್ಯದಲ್ಲಿ ಜಾತಿಗಣತಿ ವಿಚಾರವಾಗಿ ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಹಿಂದೂಗಳ ಜಾತಿಗಳನ್ನು ಬಿಡಿ ಬಿಡಿಯಾಗಿ ಒಡೆದಿದ್ದಾರೆ. ಮುಸ್ಲಿಮರ ಸಂಖ್ಯೆಯನ್ನು ಹೆಚ್ಚು ತೋರಿಸುವ ಪ್ರಯತ್ನ ಇದು. ಸಿದ್ದರಾಮಯ್ಯ ಅವರು ಹಿಂದೂಗಳನ್ನು ಒಡೆಯುತ್ತಿರುವುದರ ವಿರುದ್ಧ ಸ್ವಾಮೀಜಿಗಳು ಧ್ವನಿ ಎತ್ತಬೇಕು ಎಂದರು.

ಕುರುಬ ಸಮುದಾಯವನ್ನು ಎಸ್‌ಟಿ ವರ್ಗಕ್ಕೆ ಸೇರಿಸುವ ವಿಚಾರವಾಗಿ ಮಾತನಾಡಿ, ಕುಲಶಾಸ್ತ್ರೀಯ ಅಧ್ಯಯನದಲ್ಲಿ ಕುರುಬ ಸಮುದಾಯ ಮಾನದಂಡವನ್ನು ಪೂರೈಸಲು ಸಾಧ್ಯವಿಲ್ಲ. ಕಾನೂನು ಪದವೀಧರರಾದ ಸಿದ್ದರಾಮಯ್ಯಗೆ ಇದರ ಅರಿವಿದೆ. ಆದರೂ ರಾಜಕೀಯ ಲಾಭಕ್ಕಾಗಿ ಈ ದಾಳ ಉರುಳಿಸಿದ್ದಾರೆ. ಕುರ್ಚಿ ಭದ್ರ ಮಾಡಿಕೊಳ್ಳಲು ಸಿದ್ದರಾಮಯ್ಯ ಮಾಡುತ್ತಿರುವ ತಂತ್ರ ಇದು. ಕುರುಬ ಸಮುದಾಯವನ್ನು ಸಿದ್ದರಾಮಯ್ಯ ದಾರಿ ತಪ್ಪಿಸುತ್ತಿದ್ದಾರೆ. ತಂತ್ರಗಾರಿಕೆಗೆ ಸಿದ್ದರಾಮಯ್ಯ ಹೆಸರುವಾಸಿ. ಕುರ್ಚಿ ಭದ್ರ ಮಾಡಿಕೊಳ್ಳಲು ಈ ರೀತಿಯ ಜಾಣ ಹೆಜ್ಜೆ ಇಟ್ಟಿದ್ದಾರೆ ಎಂದು ಟೀಕಿಸಿದರು.

**ಬೆಂಕಿ ಹಚ್ಚುವ ಕೆಲಸ**



### ಏನಂದಿದ್ದರು ಶಾಸಕ ಉದಯ್?

**ಅವನ್ಯಾರೋ ಪ್ರತಾಪ ಅಂತೆ. ಪ್ರತಾಪ ಸಿಂಹ ಅಂತ ಹೆಸರು ಇಟ್ಟಿದ್ದಾರೆ ಅಪ್ಪಿತಪ್ಪಿ. ನಾಯಿ ಅಂತ ಇಡಬೇಕಿತ್ತು. ಅವನ ಹಿನ್ನೆಲೆ ಗೊತ್ತಾ ಯಾರಿಗಾದ್ರೂ, ಆತನ ಹೆಂಡತಿಯೇ ಸಹಿಸದೇ ಬಿಜೆಪಿ ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆಂದು ಮೊನ್ನೆ ಯಾರೋ ಮೈಸೂರಲ್ಲಿ ಮಾತನಾಡುತ್ತಿದ್ರು. ನಡತೆ ಸರಿ ಇಲ್ಲ. ಕಚ್ಚೆ ಹರುಕು ಎಂದು ಬಹಳಷ್ಟು ಜನ ಮೈಸೂರಲ್ಲಿ ಮಾತಾಡ್ತಾರೆ. ಇದಕ್ಕೇ ಬಿಜೆಪಿಯವರೆ ಟಿಕೆಟ್ ಕೊಡದೆ ಮನೆಯಲ್ಲಿ ಕೂರಿಸಿದ್ದಾರೆ. ಇಂಥವರು ನಮ್ಮ ಜನಕ್ಕೆ ತಿಳುವಳಿಕೆ ಹೇಳೋದು ಎಷ್ಟು ಸರಿ ಎಂದರು.**



## ರೈತರಿಂದ ನೇರವಾಗಿ ಬಾಳೆ ಖರೀದಿ: ಸೌಲಭ್ಯ ಬಳಸಿಕೊಳ್ಳಿ

• **ಉದಯವಾಹಿನಿ, ಚನ್ನಪಟ್ಟಣ**

ರೈತರ ತೋಟದಲ್ಲೇ ಬಾಳೆ ಗೊನೆ ನೇರವಾಗಿ ಖರೀದಿಸುವ ಹಾಪ್ ಕಾಮ್ಸ್ ಯೋಜನೆಗೆ ಚಾಲನೆ ನೀಡಲಾಗಿದೆ. ಈ ಸೌಲಭ್ಯವನ್ನು ರೈತರು ಬಳಸಿಕೊಳ್ಳಬೇಕೆಂದು ಹಾಪ್ ಕಾಮ್ಸ್ ಅಧ್ಯಕ್ಷ ಕೋಡಂಬಹಳ್ಳಿ ಶಿವಮಾದು ಮನವಿ ಮಾಡಿದರು. ತಾಲ್ಲೂಕಿನ ಕೆಂಗಲ್ ಬಳಿ ಹಾಪ್ ಕಾಮ್ಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕಿನ ರೈತರು ಹೆಚ್ಚಾಗಿ ಬಾಳೆ ಬೆಳೆಯುತ್ತಾರೆ. ರೈತರಿಗೆ ಉತ್ತಮ ಬೆಲೆ ನೀಡುವ ಮತ್ತು ಸಾಗಣೆಗೆ ಅನುಕೂಲವಾಗುವ ರೀತಿಯಲ್ಲಿ ಅವರ ತೋಟಕ್ಕೆ ವಾಹನ ಸೌಲಭ್ಯ ಕಲ್ಪಿಸಿ ಬಾಳೆ ಹಣ್ಣು ಖರೀದಿಸಲು ಈ ಯೋಜನೆ ರೂಪಿಸಲಾಗಿದೆ ಎಂದರು.

ಜಿಲ್ಲೆಯ ರೈತರು ಹಾಪ್ ಕಾಮ್ಸ್ ಕಚೇರಿಗೆ ಬಾಳೆ ಹಣ್ಣು ತಂದು ಮಾರಾಟ ಮಾಡಲೂ ಅವಕಾಶವಿದೆ. ಅಲ್ಲದೆ, 100 ಗೊನೆಗಿಂತ ಹೆಚ್ಚು ಇದ್ದರೆ ಒಂದು ದಿನ ಮುಂಚಿತವಾಗಿ ಕಚೇರಿ ಅಧಿಕಾರಿಗಳಿಗೆ ಮಾಹಿತಿ ನೀಡಿ ವಿಳಾಸ ಕೊಟ್ಟರೆ ರೈತರ ಗ್ರಾಮಕ್ಕೆ ಬಂದು ತೋಟದಲ್ಲೇ ನೇರವಾಗಿ ಬಾಳೆ ಖರೀದಿಸಲಾಗುವುದು. ಇದರಿಂದ ರೈತರಿಗೆ ಸಾಗಣೆ ಖರ್ಚು ಉಳಿತಾಯವಾಗಲಿದೆ. ಬಾಳೆ ಹಣ್ಣು ಕೆಡದೆ ಉತ್ತಮ ಗುಣಮಟ್ಟದಲ್ಲಿ ಉಳಿಯುವುದರಿಂದ ಅದರ ಬೆಲೆಯೂ ಹೆಚ್ಚು ಸಿಗುತ್ತದೆ ಎಂದರು.



☛ ಉದಯವಾಹಿನಿ ಚಿತ್ರ

ರೈತರಿಂದ ನೇರವಾಗಿ ಖರೀದಿಸಿದ ಬಾಳೆ ಹಣ್ಣಿನ ಹಣವನ್ನು ಮೂರು-ನಾಲ್ಕು ದಿನಗಳೊಳಗೆ ಆರ್‌ಟಿಜಿಎಸ್ ಮೂಲಕ ರೈತರ ಖಾತೆಗೆ ಪೂರ್ಣ ಪಾವತಿ ಮಾಡಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ಸ್ಥಳದಲ್ಲೇ ಹಣ ಪಾವತಿಸುವ ವ್ಯವಸ್ಥೆ ಜಾರಿಗೊಳಿಸಲು ಯೋಚಿಸಲಾಗಿದೆ. ರೈತರ ಖಾತೆಗೆ ಪೂರ್ಣ ಹಣ ಬರುವುದರಿಂದ ಅವರ ಶ್ರಮಕ್ಕೆ ಸರಿಯಾದ ಫಲ ಸಿಗಲಿದೆ ಎಂದರು.

## ಹಾಸ್ಟೆಲ್ ಅಧ್ವಾನ: ಶಿಥಿಲವಾದ ಕಟ್ಟಡ; ವಿದ್ಯಾರ್ಥಿಗಳಿಗೆ ಜೀವಭಯ

• **ಉದಯವಾಹಿನಿ, ಚೇಳೂರು**

ತಾಲ್ಲೂಕಿನ ಚಿಲಕಲನೇರ್ಪು ಗ್ರಾಮದಲ್ಲಿರುವ ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವು ಅಧ್ವಾನ ಎನ್ನುವಂತಿದೆ.

ಮೂವತ್ತು ವರ್ಷಗಳಷ್ಟು ಹಳೆಯದಾದ ಈ ಕಟ್ಟಡವು ಸಂಪೂರ್ಣ ಶಿಥಿಲವಾಗಿದೆ. ಮಳೆಗಾಲದಲ್ಲಿ ಸೋರುತ್ತದೆ. ಸಿಮೆಂಟ್‌ಗಳು ಮತ್ತು ಗೋಡೆಗಳ ಭಾಗಗಳು ಕಿತ್ತುಬೀಳುತ್ತಿವೆ. ಹೀಗಿದ್ದರೂ ಅಧಿಕಾರಿಗಳು ಮಾತ್ರ ಕಟ್ಟಡ ದುರಸ್ಥಿಗೆ ಮುಂದಾಗಿಲ್ಲ.

ಮಳೆಗಾಲದಲ್ಲಿ ಕಟ್ಟಡದ ಪ್ರತಿ ಕೋಣೆಯ ಚಾವಣಿಯಿಂದ ನೀರು ಸೋರುತ್ತಿದೆ. ವಿದ್ಯಾರ್ಥಿಗಳು ಮಲಗುವ ಕೊಠಡಿಗಳ ಗೋಡೆಗಳಿಂದ ಸಿಮೆಂಟ್ ಮತ್ತು ಪ್ಲಾಸ್ಟಿಂಗ್ ಪದರಗಳು ಕಳಚಿ ಬೀಳುತ್ತಿವೆ. ಯಾವಾಗ ದೊಡ್ಡ ಅನಾಹುತ ಸಂಭವಿಸುತ್ತದೋ ಎಂಬ ಭೀತಿಯಲ್ಲಿ ವಿದ್ಯಾರ್ಥಿಗಳು ಕೊಠಡಿಗಳಲ್ಲಿ ವಾಸಿಸುತ್ತಿದ್ದಾರೆ.

☛ ಉದಯವಾಹಿನಿ ಚಿತ್ರ



ನಾವಿಲ್ಲಿ ಓದಲು ಬಂದಿದ್ದೇವೆ. ಆದರೆ ಪ್ರತಿದಿನವೂ ಜೀವಭಯದಲ್ಲಿ ಇರಬೇಕಾಗಿದೆ. ನಮ್ಮ ಸಮಸ್ಯೆಗಳನ್ನು ಕೇಳುವವರೇ ಇಲ್ಲ. ಹಾಸ್ಟೆಲ್ ಕೊಠಡಿಗಳು ಸೋರುತ್ತಿವೆ. ಸಿಮೆಂಟ್ ಬೀಳುತ್ತಿದೆ. ದಯವಿಟ್ಟು ಮೇಲಧಿಕಾರಿಗಳು ಕೂಡಲೇ ನಮಗೆ ಹೊಸ ಮತ್ತು ಸುರಕ್ಷಿತ ಕೊಠಡಿಗಳ ವ್ಯವಸ್ಥೆ ಮಾಡಬೇಕು ಎಂದು ವಿದ್ಯಾರ್ಥಿಗಳು ಕೋರುವರು.

ಅಡುಗೆ ಕೊಠಡಿ ಮಳೆ ಬಂದರೆ ಪೂರ್ಣ ಜಲಾವೃತವಾಗುತ್ತದೆ. ಮಳೆಗಾಲದಲ್ಲಿ ನೀರಿನ ನಳದಿಂದ ನೀರು ಸುರಿಯುವಂತೆ ನೀರು ಸುರಿಯುತ್ತದೆ' ಎಂದು ಸಿಬ್ಬಂದಿಯೊಬ್ಬರು ಅಸಹಾಯಕತೆ ವ್ಯಕ್ತಪಡಿಸುವರು.

ಊಟದ ಕೋಣೆಯ ಚಾವಣಿಯ ಸಿಮೆಂಟ್ ಕಿತ್ತುಬಿದ್ದಿದ್ದು, ಗೋಡೆಗಳು ತೇವಾಂಶದಿಂದ ಕೂಡಿದೆ. ವಸತಿ ನಿಲಯಕ್ಕೆ ಬರುವ ರಸ್ತೆಯು ಸಂಪೂರ್ಣ ಮಣ್ಣಿನಿಂದ ಕೂಡಿದೆ.


ಮಳೆಗಾಲದಲ್ಲಿ ಕೆಸರು ಗದ್ದೆಯಾಗುತ್ತದೆ. ಇದರಿಂದಾಗಿ ಆಹಾರ ಮತ್ತು ಅಗತ್ಯ ವಸ್ತುಗಳನ್ನು ಹೊತ್ತು ತರುವ ವಾಹನಗಳಿಗೆ ಸಾಧ್ಯವಾಗುತ್ತಿಲ್ಲ. ಹಾಸ್ಟೆಲ್‌ನ ಗೇಟ್ ಮುಂಭಾಗದ ಚರಂಡಿ ಸಂಪೂರ್ಣ ಮುಚ್ಚಿದೆ. ಮೋರಿ ನಿರ್ಮಾಣ ಅಥವಾ ರಸ್ತೆ ಅಭಿವೃದ್ಧಿಯ ಕೆಲಸಗಳು ನಡೆದಿಲ್ಲ.

ಈ ಎಲ್ಲವೂ ಸಂಬಂಧಪಟ್ಟ ಇಲಾಖೆಯ ಉನ್ನತ ಅಧಿಕಾರಿಗಳ ಗಮನಕ್ಕೆ ಬರಬೇಕಿದೆ. ವಿದ್ಯಾರ್ಥಿಗಳ ಜೀವನಕ್ಕೆ ಅಪಾಯ ತರುವ ಈ ಶಿಥಿಲ ಕಟ್ಟಡವನ್ನು ತಕ್ಷಣ ದುರಸ್ಥಿಪಡಿಸಬೇಕು ಅಥವಾ ಸೂಕ್ತ ಸ್ಥಳಕ್ಕೆ ವಸತಿ ನಿಲಯ ವರ್ಗಾಯಿಸಬೇಕು ಎಂದು ಪೋಷಕರು ಸಹ ಆಗ್ರಹಿಸುವರು.

## ಶಾಲೆ, ಆಸ್ಪತ್ರೆಗಳಲ್ಲಿ ಅವ್ಯವಸ್ಥೆ: ಅಮಾನತಿಗೆ ಶಿಫಾರಸು

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ಪ್ರವಾಸ ನಡೆಸಿದ್ದೇವೆ. ಶಾಲೆಗಳು, ಹಾಸ್ಟೆಲ್, ಆಸ್ಪತ್ರೆಗಳು, ಸರ್ಕಾರಿ ಗೋದಾಮುಗಳಿಗೆ ಭೇಟಿ ನೀಡಿದ್ದೇವೆ. ಅವ್ಯವಸ್ಥೆಗಳು ಕಂಡು ಬಂದಿರುವ ಕಡೆ ಸಂಬಂಧಿಸಿದವರ ಅಮಾನತಿಗೆ ಶಿಫಾರಸು ಮಾಡಲಾಗಿದೆ.



ನೋಟಿಸ್ ನೀಡಲಾಗಿದೆ ಎಂದು ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ. ಎಚ್. ಕೃಷ್ಣ ತಿಳಿಸಿದರು. ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರದ ಗೋದಾಮಿಗೆ ಭೇಟಿ ನೀಡಿದಾಗ ಅಲ್ಲಿ ದಾಸ್ತಾನಿನಲ್ಲಿ ವ್ಯತ್ಯಾಸವಾಗಿದೆ. ಇಲ್ಲಿನ ವ್ಯವಸ್ಥಾಪಕರೇ ಶಿಥಿಲಗೊಂಡ ಗೋದಾಮನ್ನು ಸಹ ನೋಡಿಕೊಳ್ಳುವರು. ಆದ್ದರಿಂದ ಅವರ ಮೇಲೆ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗಿದೆ ಎಂದು ಹೇಳಿದರು. ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿ ನ್ಯಾಯಬೆಲೆ ಅಂಗಡಿಯಲ್ಲಿನ ದಾಸ್ತಾನಿನಲ್ಲಿ ಸಣ್ಣ ಮಟ್ಟದ ವ್ಯತ್ಯಾಸವಾಗಿರುವುದು ಕಂಡು ಬಂದಿದೆ. ಅವರಿಗೆ ನೋಟಿಸ್ ನೀಡಿದ್ದೇವೆ ಎಂದರು. ಚಿಕ್ಕಬಳ್ಳಾಪುರದ ಪಂಚಗಿರಿ ಬೋಧನಾ ಪ್ರಾಥಮಿಕ ಶಾಲೆ, ಕರ್ನಾಟಕ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸಂತ ಜೋಸೆಫ್ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸರಿಯಾಗಿ ನೀಡುತ್ತಿಲ್ಲ. ಕಾರಿಡಾರ್‌ನಲ್ಲಿ ಕೂರಿಸಿ ಊಟ ನೀಡುತ್ತಿದ್ದಾರೆ.

ಮಕ್ಕಳಿಗೆ ಪೌಷ್ಟಿಕ ಆಹಾರ ಸಹ ನೀಡುತ್ತಿಲ್ಲ. ನಾವೂ ಅಲ್ಲಿ ಊಟ ಮಾಡಿದ್ದೇವೆ. ಮುಳ್ಳು ಅಕ್ಕಿ ಅನ್ನ ಮಾಡಿದ್ದಾರೆ. ಆದ್ದರಿಂದ ಈ ಶಾಲೆಗಳಲ್ಲಿ ಇದರ ಹೊಣೆ ಹೊತ್ತ ಒಬ್ಬೊರನ್ನು ಅಮಾನತು ಮಾಡಬೇಕು ಎಂದು ಸೂಚಿಸಿದ್ದೇವೆ ಎಂದರು. ಹಾಸ್ಟೆಲ್‌ಗಳಲ್ಲಿ, ಶಾಲೆಗಳಲ್ಲಿ ಆಹಾರ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ರಿಜಿಸ್ಟಾರ್ ಪುಸ್ತಕವನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದರು.

ಗೌರಿಬಿದನೂರಿನ ನಾಲ್ಕು ಹಾಸ್ಟೆಲ್‌ಗಳಿಗೆ ಭೇಟಿ ನೀಡಿದಾಗ ಅಲ್ಲಿ ಸಾಕಷ್ಟು ಅವ್ಯವಸ್ಥೆ ಕಂಡು ಬಂದಿತು. ಅಲ್ಲಿ ರಿಜಿಸ್ಟಾರ್ ಸರಿಯಾಗಿ ನಿರ್ವಹಿಸಿಲ್ಲ. 28 ರಿಜಿಸ್ಟಾರ್ ನಿರ್ವಹಿಸಬೇಕು. ಆದರೆ ದಾಖಲೆಗಳು ಸೂಕ್ತವಾಗಿಲ್ಲ. ಶೌಚಾಲಯ, ಗ್ರಂಥಾಲಯ ಸಮರ್ಪಕವಾಗಿಲ್ಲ. ಸಿಸಿ ಟಿವಿ ದುರಸ್ತಿ ಮಾಡಿಸಿಲ್ಲ. ಆದ್ದರಿಂದ ಈ ಹಾಸ್ಟೆಲ್‌ಗಳಿಗೂ ನೋಟಿಸ್ ನೀಡಿದ್ದೇವೆ ಎಂದು ಹೇಳಿದರು. ಸಮವಸ್ತ್ರ ನೀಡಿಲ್ಲ. ತಟ್ಟೆ, ಲೋಟ, ಜಮಖಾನದ ಹಣ ಡ್ರಾ ಆಗಿದೆ. ಆದರೆ ಅವುಗಳನ್ನು ನೀಡಿಲ್ಲ. ಈ ಇಲಾಖೆಗಳ ಉಪನಿರ್ದೇಶಕರು, ಜಂಟಿ ನಿರ್ದೇಶಕರು ಕಾಲ ಕಾಲಕ್ಕೆ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಸೂಚಿಸಿದ್ದೇವೆ ಎಂದರು.

ಚಿಕ್ಕಬಳ್ಳಾಪುರದ ಎರಡು ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿದಾಗ 1 ಅಂಗಡಿಯಲ್ಲಿ 17.50 ಕ್ವಿಂಟಲ್ ಹೆಚ್ಚುವರಿ ಆಹಾರ ಪದಾರ್ಥ ಇತ್ತು. ಈ ನ್ಯಾಯಬೆಲೆ ಅಂಗಡಿಯನ್ನು ಅಮಾನತಿನಲ್ಲಿ ಇರಿಸಲಾಗಿದೆ ಎಂದರು.

ಕೈವಾರ ಅಂಗವಿಕಲ ಪುನಶ್ಚೇತನ ಸಂಸ್ಥೆ ಸರ್ಕಾರದ ಹಣ, ಅಕ್ಕಿ ಪಡೆಯುತ್ತಿದೆ. ಆದರೆ ಇಲ್ಲಿಯೂ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಿಸಿಲ್ಲ. ಇವರಿಗೆ ನೋಟಿಸ್ ನೀಡಿದ್ದೇವೆ ಎಂದು ಹೇಳಿದರು.

## ಲಂಚಗುಳಿತನ ಆರೋಪ: ಶ್ರೀರಂಗಪಟ್ಟಣದ ಆಸ್ಪತ್ರೆ ಮುಂದೆ ರೈತ ಸಂಘಟನೆಯಿಂದ ಪ್ರತಿಭಟನೆ

☛ ಉದಯವಾಹಿನಿ ಚಿತ್ರ



• **ಉದಯವಾಹಿನಿ, ಶ್ರೀರಂಗಪಟ್ಟಣ**

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲು ಲಂಚ ಪಡೆಯಲಾಗುತ್ತಿದೆ ಎಂದು ಆರೋಪಿಸಿ ರೈತಸಂಘ ಹಾಗೂ ಇತರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಆಸ್ಪತ್ರೆಯ ಎದುರು ಪ್ರತಿಭಟನೆ ನಡೆಸಿ ವೈದ್ಯರ ವಿರುದ್ಧ ಘೋಷಣೆ ಕೂಗಿದರು. 'ಆಸ್ಪತ್ರೆಯಲ್ಲಿ ಹೆರಿಗೆ ಮತ್ತು ಶಸ್ತ್ರಚಿಕಿತ್ಸೆಗೆ ಹಣ ಪಡೆಯುತ್ತಿದ್ದಾರೆ. ರೋಗಿಗಳಿಗೆ ಸಣ್ಣ ಸಮಸ್ಯೆ ಇದ್ದರೂ ಖಾಸಗಿ ಆಸ್ಪತ್ರೆಗಳಿಗೆ ಕರೆದೊಯ್ಯುವಂತೆ ಹೇಳುತ್ತಿದ್ದಾರೆ. ಔಷಧಗಳನ್ನು ಹೊರಗೆ ಖರೀದಿಸಿ ಎಂದು ಚೀಟಿ ಬರೆಯುತ್ತಿದ್ದಾರೆ' ಎಂದು ರೈತ ಸಂಘದ ತಾಲ್ಲೂಕು ಘಟಕದ ಸಂಚಾಲಕ ಪಾಂಡು ಆರೋಪಿಸಿದರು.

ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಸಕಾಲಕ್ಕೆ ಕರ್ತವ್ಯಕ್ಕೆ ಬರುತ್ತಿಲ್ಲ. ಮಹಿಳಾ ವೈದ್ಯರೊಬ್ಬರು ರೋಗಿಗಳನ್ನು ದೂರದಿಂದಲೇ ನೋಡಿ ಕಳುಹಿಸುತ್ತಿದ್ದಾರೆ. ಸಮನ್ವಯತೆ ಇಲ್ಲದ ಕಾರಣ ರೋಗಿಗಳು ಬವಣೆಪಡುತ್ತಿದ್ದಾರೆ' ಎಂದು ಮುಖಂಡ ಮರಳಾಗಾಲ ಕೃಷ್ಣಗೌಡ ದೂರಿದರು.

ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ವಿಜಯಲಕ್ಷ್ಮಿ, 'ಆಸ್ಪತ್ರೆಯಲ್ಲಿ ಲಭ್ಯ ಔಷಧಗಳನ್ನು ರೋಗಿಗಳಿಗೆ ಕೊಡಲಾಗುತ್ತಿದೆ. ಸ್ಕ್ಯಾನಿಂಗ್ ವ್ಯವಸ್ಥೆ ಇಲ್ಲದ ಕಾರಣ ಹೊರಗೆ ಮಾಡಿಸುವಂತೆ ತಿಳಿಸಲಾಗುತ್ತಿದೆ. ವೈದ್ಯರು ಅಥವಾ ವೈದ್ಯಕೀಯ ಸಿಬ್ಬಂದಿ ಲಂಚ ಪಡೆಯುವ ಬಗ್ಗೆ ಖಚಿತ ದಾಖಲೆ ನೀಡಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

## ಅಭಿವೃದ್ಧಿ ವಿಳಂಬಕ್ಕೆ ಅಧಿಕಾರಿಗಳೇ ಹೊಣೆ

• **ಉದಯವಾಹಿನಿ, ಕೆ.ಆರ್.ಪೇಟೆ**

ಕೆಡಿಪಿ ಸಭೆಯ ಉದ್ದೇಶ ತಿರುಚಿದ ಹಳೆಯ ಅಂಕಿ ಅಂಶಗಳನ್ನೇ ಕೇಳಿಸಿಕೊಳ್ಳುವುದಲ್ಲ. ಪ್ರಗತಿಯ ಬಗ್ಗೆ ಮಾತನಾಡಿ, ಪ್ರಗತಿ ಸಾಧಿಸಲು ಸಾಧ್ಯವಾಗದಿದ್ದವರು ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದು ಶಾಸಕ ಎಚ್.ಟಿ.ಮಂಜು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ ಪ್ರಸಂಗ ಕೆಡಿಪಿ ಸಭೆಯಲ್ಲಿ ನಡೆಯಿತು.

ಪಟ್ಟಣದ ಹೊರವಲಯದ ಚಿಕ್ಕೋನಹಳ್ಳಿಯಲ್ಲಿ ನಡೆದ ತಾಲ್ಲೂಕು ಮಟ್ಟದ ತ್ರೈ ಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಾಲ್ಲೂಕಿನಲ್ಲಿ ವಿವಿಧ ಇಲಾಖೆಯಲ್ಲಿ ಕಾಮಗಾರಿಗಳು ನಿಧಾನ ಗತಿಯಲ್ಲಿವೆ. ಕೆಲಸದ ಬಗ್ಗೆ ಬದ್ಧತೆ ಇರಬೇಕು ಎಂದು ತರಾಟೆಗೆ ತೆಗೆದುಕೊಂಡರು. ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳ ಹಿಂದೆ ಆರಂಭವಾದ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳು ಇನ್ನೂ ಮುಕ್ತಾಯವಾಗಿಲ್ಲ. ಈ ಬಗ್ಗೆ ಪ್ರತಿಬಾರಿ ಕೆಡಿಪಿ ಸಭೆಯಲ್ಲಿ ಪ್ರಶ್ನಿಸಿದರೂ ಅದೇ ಉತ್ತರ ಎಂದು ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಹೊಸಹೊಳಲು ಚಿಕ್ಕಕೆರೆ ಕಾಮಗಾರಿ, ಸಂತೇಬಾಚಹಳ್ಳಿ ಕೆರೆ ಕಾಮಗಾರಿ ಚುರುಕುಗೊಳಿಸುವಂತೆ ಸೂಚಿಸಿದರು. ನೀರಾವರಿ ಅಧಿಕಾರಿಗಳು ತಾಲ್ಲೂಕಿನ ಕೆರೆ ಕಟ್ಟೆಗಳನ್ನು ತುಂಬಿಸಿ 15 ದಿನಗಳಲ್ಲಿ ವರದಿ ನೀಡಬೇಕು ಎಂದು ಸೂಚನೆ ನೀಡಿದರು. ಯಂತ್ರಾಗಾರದ ವಿದ್ಯುತ್ ಬಿಲ್ ಪಾವತಿಗೆ ಸೂಕ್ತ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು. ಕಿಕ್ಕೇರಿ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕಿ ರೇವತಿ ಅವರಿಗೆ ಫೋನ್ ಕರೆ ಮಾಡಿದರೆ, ಬಂದೂಕು ಕೊಡಿ ಶಾಸಕರು ಕರೆ ಮಾಡಿದ್ದಾರೆ ಶೂಟ್ ಮಾಡಿಕೊಳ್ಳೋದಾಗಿ ಠಾಣೆಯ ಸಿಬ್ಬಂದಿಯಗೆ ಹೇಳುತ್ತಾರಂತೆ. ಗೃಹ ಇಲಾಖೆಗೆ ವರದಿ ನೀಡುವಂತೆ ನಿರ್ದೇಶನ ನೀಡಿದರು.

☛ ಉದಯವಾಹಿನಿ ಚಿತ್ರ



ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ಮರು ನಿರ್ಮಿಸಲು 16 ಕೋಟಿ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಪ್ರಗತಿ ಬಗ್ಗೆ ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಾರಿಗೆ ಇಲಾಖೆಯ ಎಇಇ ಗಣೇಶ್, ಇಲಾಖೆ, ಎಸ್.ಡಿ.ಆರ್.ಎಫ್.ಸಿ. ಯಿಂದ ತಲಾ 2 ಕೋಟಿ ಅನುದಾನ ಸಿಗಲಿದ್ದು, ಹಣ ಹೊಂದಿಸಿ ನಿಲ್ದಾಣ ಮರು ನಿರ್ಮಿಸುವುದಾಗಿ ತಿಳಿಸಿದರು.

## ಲೋಕ್ ಅದಾಲತ್: ಲಕ್ಷ ಪ್ರಕರಣ ಇತ್ಯರ್ಥ: ನ್ಯಾ.ಜಿ. ಪ್ರಭಾವತಿ

• **ಉದಯವಾಹಿನಿ, ಚಾಮರಾಜನಗರ**

ಸೆ.13ರಂದು ಜಿಲ್ಲೆಯಾದ್ಯಂತ ನಡೆದ ಲೋಕ್ ಅದಾಲತ್‌ನಲ್ಲಿ 1,04,649 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಜಿ.ಪ್ರಭಾವತಿ ಹೇಳಿದರು. ನಗರದ ಜಿಲ್ಲಾ ನ್ಯಾಯಾಲಯದ ವ್ಯಾಜ್ಯಪೂರ್ವ ಪರಿಹಾರ ಕೇಂದ್ರದಲ್ಲಿ ಮಾತನಾಡಿದ ಅವರು, ಕಳೆದ ಬಾರಿಯ ಲೋಕ್ ಅದಾಲತ್‌ನಲ್ಲಿ 1,01,431 ಪ್ರಕರಣಗಳು ಇತ್ಯರ್ಥಗೊಂಡಿದ್ದವು. ಈ ಬಾರಿಯ ಅದಾಲತ್‌ನಲ್ಲಿ 2,672 ನ್ಯಾಯಾಲಯದಲ್ಲಿದ್ದ ಪ್ರಕರಣಗಳು, 1,01,977 ವ್ಯಾಜ್ಯಪೂರ್ವ ಸೇರಿ 1,04,649 ಪ್ರಕರಣಗಳು ಇತ್ಯರ್ಥವಾಗಿವೆ.

ಕಳೆದ ಬಾರಿಗೆ ಹೋಲಿಸಿದರೆ ಹೆಚ್ಚುವರಿ 3,218 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದರು. ರಾಷ್ಟ್ರೀಯ, ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳ ನಿರ್ದೇಶನದ ಮೇರೆಗೆ ಸರ್ವರಿಗೂ ನ್ಯಾಯ ಪರಿಕಲ್ಪನೆಯಡಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಸಿವಿಲ್, ರಾಜಿಯೋಗ್ಯ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಇತರೆ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಪರಿಹರಿಸಲು ಮೆಗಾ ಲೋಕ್ ಅದಾಲತ್ ಮಾಡಲಾಗುತ್ತಿದೆ ಎಂದು ಜಿಲ್ಲಾ ನ್ಯಾಯಾಧೀಶರು ತಿಳಿಸಿದರು.



☛ ಉದಯವಾಹಿನಿ ಚಿತ್ರ

ಈ ಬಾರಿಯ ಅದಾಲತ್‌ನಲ್ಲಿ ಚಾಮರಾಜನಗರ ತಾಲ್ಲೂಕಿನ 440. ಯಳಂದೂರು 308, ಕೊಳ್ಳೇಗಾಲ 1,405, ಗುಂಡ್ಲುಪೇಟೆಯ 519 ಸೇರಿದಂತೆ 2,672 ನ್ಯಾಯಾಲಯದ ಪ್ರಕರಣಗಳು ವಿಲೇವಾರಿಯಾಗಿವೆ. ಚಾಮರಾಜನಗರದ 56,268, ಯಳಂದೂರಿನ 2,849, ಕೊಳ್ಳೆಗಾಲ 17,931 ಹಾಗೂ ಗುಂಡ್ಲುಪೇಟೆಯ 24,929 ಸೇರಿದಂತೆ 1,01,977 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಚೆಕ್ ಅಮಾನ್ಯ, ಎಂ.ಇ.ಸಿ ಹಾಗೂ ವಿಮಾ ಪರಿಹಾರವಾಗಿ 12,72,69,860 ನೀಡಲಾಗಿದೆ.

ವಿವಾಹ ವಿಚ್ಛೇದನ, ಪತಿ, ಪತ್ನಿಯಿಂದ ಜೀವನಾಂಶ ಕೋರಿಕೆ, ವಿಚ್ಛೇದನಾ ಪ್ರಕರಣ ದಾಖಲಾಗುವ ಮುನ್ನ ದೂರುಗಳು ಸೇರಿದಂತೆ 8 ಪ್ರಕರಣಗಳನ್ನು ಇತ್ಯರ್ಥಪಡಿಸಿ ಪತಿ-ಪತ್ನಿಯರನ್ನು ಒಂದುಗೂಡಿಸಿರುವುದು ಅದಾಲತ್‌ನ ವಿಶೇಷ ಎಂದು ಹೇಳಿದರು.

ಕಕ್ಷಿದಾರರು ನ್ಯಾಯಾಧೀಶರು, ವಕೀಲರು, ಸಂಧಾನಕಾರರ ಸಹಕಾರದಿಂದ 10ರಿಂದ 15 ವರ್ಷಗಳಿಂದ ಬಾಕಿ ಇದ್ದ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಗಿದೆ. ಪ್ರಕರಣ ದಾಖಲಾಗುವ ಮುನ್ನವೇ ವ್ಯಾಜ್ಯಪೂರ್ವ ಪ್ರಕರಣಗಳು ಇತ್ಯರ್ಥವಾಗಿರುವುದು ಉತ್ತಮ ಬೆಳವಣಿಗೆಯಾಗಿದ್ದು ಸಾರ್ವಜನಿಕರ ಸಮಯ, ಹಣ, ಉಳಿತಾಯವಾಗಿದೆ. ನ್ಯಾಯಾಲಯದ ಮೇಲಿನ ಪ್ರಕರಣಗಳ ಹೊರೆಯೂ ತಗ್ಗಿದೆ ಎಂದರು.

## ಕೋಲಾರದಲ್ಲಿ 20 ಸಾವಿರ ಬಿಪಿಎಲ್ ಕಾರ್ಡ್ ಅನರ್ಹ, ಗ್ರಾಮಸ್ಥರಿಂದಲೇ ಅಧಿಕಾರಿಗಳಿಗೆ ಮಾಹಿತಿ

# ಆಹಾರ, ನಾಗರಿಕ ಸರಬರಾಜು ಇಲಾಖೆಯು ಅರ್ಹತೆಯಿಲ್ಲದ ಕಾರ್ಡ್‌ಗಳ ರದ್ದಿಗೆ ಮುಂದು

• **ಉದಯವಾಹಿನಿ, ಕೋಲಾರ**

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿಗದಿಪಡಿಸಿದ ಮಾನದಂಡಗಳನ್ನು ಮೀರಿದಂತಹ 20 ಸಾವಿರ ಬಿಪಿಎಲ್ ಪಡಿತರ ಚೀಟಿಗಳು ಜಿಲ್ಲೆಯಲ್ಲಿ ಪತ್ತೆಯಾಗಿದ್ದು, ಶೀಘ್ರವೇ ಕಾರ್ಡ್‌ಗಳು ರದ್ದಾಗುವ ಸಾಧ್ಯತೆಗಳಿವೆ. ಕಾನೂನು ಬಾಹಿರವಾಗಿ ಪಡೆದುಕೊಂಡಿರುವ ಬಿಪಿಎಲ್ ಕಾರ್ಡ್‌ಗಳನ್ನು ಹಿಂತಿರುಗಿಸುವಂತೆ ಸಾಕಷ್ಟು ಬಾರಿ ಅವಕಾಶ ನೀಡಲಾಗಿತ್ತಾದರೂ, ಹೆಚ್ಚಿನ ಸಂಖ್ಯೆಯ ನಾಗರಿಕರು ಬಿಪಿಎಲ್ ಕಾರ್ಡ್ ಹಿಂತಿರುಗಿಸಲು ಮುಂದಾಗಿರಲಿಲ್ಲ. ಆ ಹಿನ್ನೆಲೆಯಲ್ಲಿ ಸದ್ದಿಲ್ಲದೆ ಕಾರ್ಯಾಚರಣೆ ಆರಂಭಿಸಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಅರ್ಹತೆಯಿಲ್ಲದ ಕಾರ್ಡ್‌ಗಳ ರದ್ದಿಗೆ ಮುಂದಾಗಿದೆ.

ಈ ನಡುವೆ ಕೇಂದ್ರ ಸರಕಾರ ಕರ್ನಾಟಕದಲ್ಲಿ 7.76 ಲಕ್ಷ ಶಂಕಾಸ್ಪದ ಪಡಿತರ ಚೀಟಿಗಳಿವೆ ಎಂದು ಗುರುತಿಸಿ, ಅಂತಹ ಪಡಿತರ ಚೀಟಿಗಳನ್ನು ರದ್ದುಪಡಿಸುವಂತೆ ಸೂಚಿಸಿದೆ. ಆ ಹಿನ್ನೆಲೆಯಲ್ಲಿ ಪಡಿತರ ಚೀಟಿಗಳ ಅನರ್ಹ ಕಾರ್ಯಾಚರಣೆಯನ್ನು ಇಲಾಖೆ ಕೈಗೆತ್ತಿಕೊಂಡಿದೆ. ಸರಕಾರ ಮಾನದಂಡಗಳ ಅನ್ವಯ 1.20 ಲಕ್ಷಕ್ಕಿಂತ ಹೆಚ್ಚಿನ ಆದಾಯ ಇರುವವರು ಬಿಪಿಎಲ್ ಪಡಿತರ ಚೀಟಿ ಹೊಂದಲು ಅನರ್ಹರಾಗಿರುತ್ತಾರೆ. ಜತೆಗೆ ಕುಟುಂಬದಲ್ಲೊಬ್ಬರು ಆದಾಯ ತೆರಿಗೆ ಪಾವತಿದಾರರು, ಕಂಪನಿಗಳಲ್ಲಿ ನಿರ್ದೇಶಕರು, ನಾಲ್ಕು ಚಕ್ರಗಳ ವಾಹನ ಹೊಂದಿರುವವರು, ವಾರ್ಷಿಕ 25 ಲಕ್ಷಕ್ಕಿಂತಲೂ ಹೆಚ್ಚಿನ ಜಿಎಸ್‌ಟಿ ವಹಿವಾಟು ನಡೆಸುವವರು ಬಿಪಿಎಲ್‌ಗೆ ಅನರ್ಹರಾಗಿರುತ್ತಾರೆ.



**20 ಸಾವಿರ ಕಾರ್ಡ್‌ಗಳು ಅನರ್ಹ!:** ಜಿಲ್ಲೆಯಲ್ಲಿ 20 ಸಾವಿರಕ್ಕೂ ಹೆಚ್ಚಿನ ಶಂಕಾಸ್ಪದ ಕಾರ್ಡ್‌ಗಳನ್ನು ಗುರುತಿಸಲಾಗಿದ್ದು, ನಾನಾ ಸಂಸ್ಥೆಗಳು ನೀಡಿರುವಂತಹ ವರದಿಯಲ್ಲಿನ ಅಂಶಗಳ ಕುರಿತು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪರಿಶೀಲನೆ ನಡೆಸಲಾಗುತ್ತಿದೆ. ಅದಾದ ಬಳಿಕ ಅನರ್ಹ ಕಾರ್ಡ್‌ಗಳನ್ನು ಎಪಿಎಲ್‌ಗೆ ವರ್ಗಾವಣೆ ಮಾಡಲು ಅಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿದ್ದಾರೆ ಎನ್ನಲಾಗುತ್ತಿದೆ.

**ಕೋಲಾರ ಜಿಲ್ಲೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು 20 ಸಾವಿರ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಗುರುತಿಸಿದ್ದು, ಇವುಗಳನ್ನು ಎಪಿಎಲ್‌ಗೆ ಪರಿವರ್ತಿಸುವ ಕಾರ್ಯ ನಡೆಯಲಿದೆ. ಆದಾಯ ತೆರಿಗೆ ಪಾವತಿಸುವವರು ಮತ್ತು ಹೆಚ್ಚಿನ ಆದಾಯ ಹೊಂದಿರುವವರ ಕಾರ್ಡ್‌ಗಳನ್ನು ರದ್ದುಗೊಳಿಸಲು ಕೋಲಾರ ಸೇರಿ ರಾಜ್ಯದಾದ್ಯಂತ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕ್ರಮಕ್ಕೆ ಗ್ರಾಮೀಣ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದು, ಅರ್ಹರಲ್ಲದವರ ಮಾಹಿತಿಯನ್ನು ಅಧಿಕಾರಿಗಳಿಗೆ ಕೊಡುತ್ತಿದ್ದಾರೆ.**

**ಆದಾಯ ತೆರಿಗೆ ಪಾವತಿದಾರರು, ಜಿಎಸ್‌ಟಿ ಪಾವತಿದಾರರು ಹಾಗೂ ವಾರ್ಷಿಕ 1.20 ಲಕ್ಷಕ್ಕೂ ಹೆಚ್ಚಿನ ಆದಾಯ ಪಡೆಯುವವರ ಮಾಹಿತಿ ಇಲಾಖೆಗೆ ಲಭ್ಯವಾಗಿದೆ. ಆಹಾರ ಇಲಾಖೆ ಅಧಿಕಾರಿಗಳು ಪರಿಶೀಲಿಸುತ್ತಿದ್ದು, ಅರ್ಹತೆಯಿಲ್ಲ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲು ಕ್ರಮಕೈಗೊಳ್ಳಲಾಗುವುದು.**

**-ಲತಾ, ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ**

**ಆಹಾರ ನಿರೀಕ್ಷಕರಿಗೆ ಗುರಿ!:** ಅನರ್ಹ ಬಿಪಿಎಲ್ ಕಾರ್ಡ್‌ಗಳ ರದ್ದತಿಗೆ ಮುಂದು ಆಗಿರುವಂತಹ ಆಹಾರ ಇಲಾಖೆಯು, ಜಿಲ್ಲೆಯಲ್ಲಿರುವ ಪ್ರತಿಯೊಬ್ಬ ಆಹಾರ ನಿರೀಕ್ಷಕರಿಗೆ ಮಾಸಿಕ 1,200 ಅನರ್ಹ ಕಾರ್ಡ್‌ಗಳನ್ನು ರದ್ದುಗೊಳಿಸುವ ಗುರಿಯನ್ನು ನೀಡಲಾಗಿದೆ.

ಬಿಪಿಎಲ್ ಕಾರ್ಡ್‌ಗಳ ರದ್ದು ವಿಚಾರ ಅಧಿಕಾರಿಗಳ ಪಾಲಿಗೆ ನುಂಗಲಾರದ ತುತ್ತಾಗಿದ್ದು, ಸ್ಥಳೀಯ ರಾಜಕೀಯ ನಾಯಕರು ಕಾರ್ಡ್ ರದ್ದುಗೊಳಿಸದಂತೆ ಅಧಿಕಾರಿಗಳ ಮೇಲೆ ಒತ್ತಡ ಹೇರುವುದು ಒಂದೆಡೆಯಾದರೆ, ಸರಕಾರ ಕಾರ್ಡ್‌ಗಳ ರದ್ದತಿಗೆ ಕಟ್ಟುನಿಟ್ಟಿನ ಸೂಚನೆ ನೀಡಿರುವುದರಿಂದ ಒತ್ತಡದಲ್ಲಿ ಕೆಳಹಂತದ ಅಧಿಕಾರಿಗಳು ಕೆಲಸ ಮಾಡುವಂತಾಗಿದೆ.

### ಕೆರಳಿ ಕೆಂಡವಾಗಿರುವ ಗ್ರಾಮೀಣ ಜನ

**ಅನರ್ಹ ಬಿಪಿಎಲ್ ಕಾರ್ಡ್‌ಗಳ ರದ್ದುಗೊಳಿಸಲು ಮುಂದಾದ ಆಹಾರ ಇಲಾಖೆ ಕ್ರಮಕ್ಕೆ ಗ್ರಾಮೀಣ ಭಾಗದ ಜನರು ಕೆರಳಿ ಕೆಂಡವಾಗಿದ್ದು, ಅಧಿಕಾರಿಗಳ ವಿರುದ್ಧ ತಮ್ಮ ಆಕ್ರೋಶ ತೋರುತ್ತಿದ್ದಾರೆ. ಇದರೊಂದಿಗೆ ಅನರ್ಹರ ಮಾಹಿತಿಯನ್ನು ಖುದ್ದು ಗ್ರಾಮಸ್ಥರೇ ನೀಡುತ್ತಿದ್ದು, ನಮ್ಮ ಕಾರ್ಡ್ ರದ್ದುಗೊಳಿಸಿದಂತೆ ಇಂತಹ ವ್ಯಕ್ತಿಗಳ ಕಾರ್ಡ್‌ನ್ನು ರದ್ದುಗೊಳಿಸಿ ಎಂದು ಅಧಿಕಾರಿಗಳ ಬೆನ್ನು ಬಿದ್ದಿದ್ದಾರೆ ಎನ್ನಲಾಗುತ್ತಿದೆ.**

## ಮಿನಿ ನ್ಯೂಸ್

### ಗೊಂದಲ ಸರಿಪಡಿಸಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತೇವೆ: ಡಿಸಿಎಂ

• **ಉದಯವಾಹಿನಿ, ರಾಮನಗರ**

ಸರ್ಕಾರ ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಎದುರಾಗಿರುವ ಕೆಲ ಗೊಂದಲಗಳನ್ನು ಸರಿಪಡಿಸಿಯೇ ಸಮೀಕ್ಷೆ ನಡೆಸುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ನಗರದಲ್ಲಿ ಶುಕ್ರವಾರ ಮಾಜಿ ಸಿಎಂ ಡಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ವರ್ಣಮಾಲೆ ಆಧಾರದ ಮೇಲೆ ಜಾತಿಗಳನ್ನು ಪಟ್ಟಿ ಮಾಡಲಾಗಿದೆ. ಪ್ರತಿ ಮನೆ ಮನೆಗೆ ಹೋಗಿ ಎಲ್ಲರ ಮಾಹಿತಿ ಸಂಗ್ರಹಿಸುತ್ತೇವೆ ಎಂದರು.

ಬಿಜೆಪಿ, ದಳದವರು ಷಡ್ಯಂತ್ರ ರೂಪಿಸಿ ಸಮೀಕ್ಷೆ ವಿರುದ್ಧ ವ್ಯವಸ್ಥಿತವಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಗೊಂದಲಕ್ಕೆ ಆಸ್ಪದವಿಲ್ಲದಂತೆ ನಾವು ಸಮೀಕ್ಷೆ ನಡೆಸಿ, ಕಾನೂನು ಚೌಕಟ್ಟಿನಲ್ಲಿ ಸಾಮಾಜಿಕ ನ್ಯಾಯ ಒದಗಿಸುತ್ತೇವೆ ಎಂದು ಭರವಸೆ ನೀಡಿದರು.

### ಜಿಎಸ್‌ಟಿ ಪರಿಷ್ಕರಣೆಯಿಂದ ಜನರಿಗೆ ನೆರವು: ವಿ.ಸೋಮಣ್ಣ

☛ ಉದಯವಾಹಿನಿ ಚಿತ್ರ



• **ಉದಯವಾಹಿನಿ, ತುಮಕೂರು**

ಕೇಂದ್ರ ಸರ್ಕಾರ ಸರಕು, ಸೇವಾ ತೆರಿಗೆ (ಜಿಎಸ್‌ಟಿ) ದರ ಪರಿಷ್ಕರಣೆ ಮಾಡುವ ಮೂಲಕ ಜನಸಾಮಾನ್ಯರ ಮೇಲಿನ ತೆರಿಗೆ ಭಾರ ಇಳಿಸಿದೆ ಎಂದು ಕೇಂದ್ರ ಜಲಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ನಗರದಲ್ಲಿ ಜಿಲ್ಲಾ ವಾಣಿಜ್ಯ ಕೈಗಾರಿಕಾ ಸಂಸ್ಥೆ ಏರ್ಪಡಿಸಿದ್ದ ಜಿಎಸ್-2.0 ಸುಧಾರಣೆಗಳು-2025 ಕುರಿತು ಮಾಹಿತಿ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹೊಸ ತೆರಿಗೆ ಪದ್ಧತಿ ಸೆ. 22ರಿಂದ ದೇಶದಾದ್ಯಂತ ಜಾರಿಗೆ ಬರಲಿದೆ. ಇದರಿಂದ ಜನಸಾಮಾನ್ಯರ ಬದುಕಿನ ಹೊರೆ ತಗ್ಗಲಿದೆ. ಜನರು ಪ್ರತಿನಿತ್ಯ ಬಳಸುವ ಎಲ್ಲಾ ಉತ್ಪನ್ನಗಳ ಮೇಲೆ ಜಿಎಸ್‌ಟಿ ಸುಧಾರಣೆಗಳ ಪರಿಣಾಮ ಕಾಣಬಹುದಾಗಿದೆ. ಅದೇ ರೀತಿ ವ್ಯಾಪಾರಸ್ಥರ ಕಾರ್ಯ ವಿಧಾನವನ್ನು ಸರಳಗೊಳಿಸಲಾಗಿದೆ ಎಂದು ಹೇಳಿದರು.

ಜಿಎಸ್‌ಟಿ ಮಂಡಳಿಯು 350ಕ್ಕೂ ಹೆಚ್ಚು ಉತ್ಪನ್ನಗಳ ತೆರಿಗೆ ದರಗಳನ್ನು ಪರಿಷ್ಕರಣೆ ಮಾಡಿದೆ. ಪ್ರಸ್ತುತ ಶೇ 5 ಹಾಗೂ ಶೇ 18ರ ಪ್ರಮಾಣದ ಎರಡು ಹಂತದ ಜಿಎಸ್‌ಟಿ ವ್ಯವಸ್ಥೆ ಜಾರಿಗೊಳಿಸಿದೆ ಎಂದರು. ಶಾಸಕ ಬಿ.ಸುರೇಶ್‌ಗೌಡ, ಯಾವುದೇ ದೇಶ ಬಲಿಷ್ಠ, ಪ್ರಗತಿ ಹೊಂದಬೇಕಾದರೆ ಸದೃಢವಾದ, ಸಾಮಾನ್ಯರಿಗೆ ನಿಲುಕುವಂತಹ ತೆರಿಗೆ ಪದ್ಧತಿ ಇರಬೇಕಾಗುತ್ತದೆ ಎಂದು ತಿಳಿಸಿದರು.

### ಬೇಡಿಕೆಗಳ ಈಡೇರಿಕೆಗೆ ಆಗ್ರಹ ಕೆಎಸ್‌ಪಿಡಿಸಿಎಲ್ ನೌಕರರ ಪ್ರತಿಭಟನೆ

☛ ಉದಯವಾಹಿನಿ ಚಿತ್ರ



• **ಉದಯವಾಹಿನಿ, ಪಾವಗಡ**

ತಾಲ್ಲೂಕಿನ ತಿರುಮಣಿ ಸೋಲಾರ್ ಪಾರ್ಕ್ ಆಡಳಿತ ಕಚೇರಿ ಬಳಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕೆಎಸ್‌ಪಿಡಿಸಿಎಲ್ ನೌಕರರು ಪ್ರತಿಭಟನೆ ನಡೆಸಿದರು. ನೌಕರರಿಗೆ ಸಕಾಲಕ್ಕೆ ವೇತನ ನೀಡುತ್ತಿಲ್ಲ. ಇದರಿಂದ ಕುಟುಂಬ ನಿರ್ವಹಣೆಯೂ ಸಮಸ್ಯೆಯಾಗುತ್ತಿದೆ.

ಜಮೀನು ನೀಡಿರುವ ಕುಟುಂಬಗಳಿಗೆ ಇದೇ ಕೆಲಸ ಜೀವನಕ್ಕೆ ಆಧಾರವಾಗಿದೆ. ವೇತನವೂ ಸಕಾಲಕ್ಕೆ ಸಿಗದೆ ಸಮಸ್ಯೆಯಾಗುತ್ತಿದೆ. ವೇತನ ಹೆಚ್ಚಳ, ಎಚ್‌ಆರ್‌ಎ, ಡಿಎ, ವೈದ್ಯಕೀಯ ಭತ್ಯೆ ಸೇರಿದಂತೆ ಯಾವುದೇ ಸವಲತ್ತುಗಳನ್ನು ನೀಡುತ್ತಿಲ್ಲ ಎಂದು ಪ್ರತಿಭಟನನಿರತರು ಆರೋಪಿಸಿದರು. ಕೆಲಸದ ಸ್ಥಳದಲ್ಲಿ ಸೂಕ್ತ ಸುರಕ್ಷತಾ ಸವಲತ್ತುಗಳಿಲ್ಲ. ಹೆಚ್ಚಿನ ಪ್ರಮಾಣದ ವಿದ್ಯುತ್ ಪ್ರವಹಿಸುವ ಸ್ಥಳದಲ್ಲಿ ಜೀವವನ್ನೂ ಲೆಕ್ಕಿಸದೆ ಕೆಲಸ ಮಾಡಲಾಗುತ್ತದೆ. ಹಗಲು, ರಾತ್ರಿ ಕೆಲಸ ಮಾಡುವ ನೌಕರರಿಗೆ ಮೂಲ ಸವಲತ್ತುಗಳನ್ನೂ ಕಲ್ಪಿಸಿಲ್ಲ. ಇದರಿಂದ ತೀವ್ರ ಸಮಸ್ಯೆಯಾಗುತ್ತಿದೆ ಎಂದು ದೂರಿದರು.

ಈ ಕೂಡಲೇ ವೇತನ ಹೆಚ್ಚಿಸಬೇಕು. ಸಕಾಲಕ್ಕೆ ವೇತನ ನೀಡಬೇಕು. ಎಚ್‌ಆರ್‌ಎ, ಡಿಎ, ಸೇರಿದಂತೆ ಎಲ್ಲಾ ವೇತನ ಸವಲತ್ತುಗಳನ್ನೂ ನೀಡಬೇಕು. ಪಿಂಚಣಿ ನೀಡಬೇಕು. ನೌಕರರಿಗೆ ಅಗತ್ಯ ಸುರಕ್ಷತೆ, ಭದ್ರತೆ ಕಲ್ಪಿಸಬೇಕು. ವರ್ಗಾವಣೆ ನೀತಿ, ಸಮಸ್ಯೆ ಪರಿಹಾರ ಕೇಂದ್ರ, ಸಮಾಲೋಚನಾ ಸ್ಥಿತಿ ಆರಂಭಿಸಿ ನೌಕರರ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಒತ್ತಾಯಿಸಿದರು.

### ಬೆಸ್ಕಾಂ ಹೊರಗುತ್ತಿಗೆ ನೌಕರ ಸಾವು ಪರಿಹಾರಕ್ಕಾಗಿ ಶವದೊಂದಿಗೆ ಪ್ರತಿಭಟನೆ

• **ಉದಯವಾಹಿನಿ, ರಾಮನಗರ**

ವಿದ್ಯುತ್ ಕಂಬದಿಂದ ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡು, ವರ್ಷದಿಂದ ಹಾಸಿಗೆ ಹಿಡಿದಿದ್ದ ಹೊರಗುತ್ತಿಗೆ ನೌಕರ ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದಿದ್ದಾರೆ. ನೌಕರನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿ ಕುಟುಂಬದವರು ಮತ್ತು ಗ್ರಾಮಸ್ಥರು ನಗರದಲ್ಲಿರುವ ರಾಮನಗರ ವಿಭಾಗದ ಬೆಸ್ಕಾಂ ಇಇ ಕಚೇರಿ ಎದುರು ಸಂಜೆ ಪ್ರತಿಭಟನೆ ನಡೆಸಿದರು.


ಚನ್ನಪಟ್ಟಣ ತಾಲ್ಲೂಕಿನ ನೀಲಕಂಠನಹಳ್ಳಿ ಗ್ರಾಮದ ಸೂರ್ಯಕುಮಾರ್ (43) ಮೃತರು. ಅವರಿಗೆ ತಂದೆ ತಾಯಿ, ಪತ್ನಿ, ಇಬ್ಬರು ಸಣ್ಣ ಮಕ್ಕಳಿದ್ದಾರೆ. ಹೊರಗುತ್ತಿಗೆ ಏಜೆನ್ಸಿ ಮೂಲಕ ಗ್ಯಾಂಗ್‌ಮನ್ ಆಗಿ ಬಿಡದಿಯಲ್ಲಿ ಕೆಲಸ ಮಾಡುತ್ತಿದ್ದ ಸೂರ್ಯಕುಮಾರ್, ವಿದ್ಯುತ್ ಪರಿವರ್ತಕ ಅಳವಡಿಸುವಾಗ ಕಂಬದಿಂದ ಬಿದಿದ್ದರು. ಇದರಿಂದಾಗಿ, ಸೊಂಟದಿಂದ ಕೆಳಕ್ಕೆ ಸಂಪೂರ್ಣ ಸ್ವಾಧೀನ ಕಳೆದುಕೊಂಡಿದ್ದರು.

**ಈಗಾಗಲೇ ಪರಿಹಾರ ಪಾವತಿ:** ಸೂರ್ಯಕುಮಾರ್ ಅವರು ಕಂಬದಿಂದ ಬಿದ್ದು ಗಾಯಗೊಂಡಾಗಲೇ ಅವರು ಕೆಲಸ ಮಾಡುತ್ತಿದ್ದ ಹೊರಗುತ್ತಿಗೆ ಏಜೆನ್ಸಿಯು ಪರಿಹಾರದ ಜೊತೆಗೆ ಚಿಕಿತ್ಸಾ ವೆಚ್ಚಕ್ಕೂ ಸಹಾಯ ಮಾಡಿದೆ. ಇದೀಗ ಅವರು ಮೃತಪಟ್ಟಿರುವುದರಿಂದ ಮತ್ತಷ್ಟು ಪರಿಹಾರದ ಜೊತೆಗೆ ಕುಟುಂಬದ ಒಬ್ಬರಿಗೆ ಉದ್ಯೋಗಕ್ಕೆ ಬೇಡಿಕೆ ಇಟ್ಟಿದ್ದಾರೆ. ಏಜೆನ್ಸಿಯಿಂದ ಅವರ ಪತ್ನಿಗೆ ಉದ್ಯೋಗ ಕೊಡಿಸುವ ಭರವಸೆ ನೀಡಲಾಗಿದೆ ಎಂದು ಬೆಸ್ಕಾಂ ಮೂಲಗಳು ತಿಳಿಸಿವೆ.

ಅಂತರಾಳದಿಂದ.. EDITORIAL

# ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ ಜನರ ಆಶೋತ್ತರಗಳಿಗೆ ಸ್ಪಂದಿಸಲಿ

ಕಲ್ಯಾಣ ಕರ್ನಾಟಕದಲ್ಲಿ ರಾಜ್ಯ ಸರ್ಕಾರ 'ಪ್ರಗತಿಯ ಹೊಳೆ' ಹರಿಸುತ್ತಿದೆ ಎಂದು ಹೇಳಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯ ಸ್ಥಾಪನೆಗೆ ವಾರದೊಳಗಾಗಿ ಅಧಿಸೂಚನೆ ಹೊರಡಿಸುವುದಾಗಿ ಹೇಳಿದ್ದಾರೆ. 'ಹೈದರಾಬಾದ್ ಕರ್ನಾಟಕ ವಿಮೋಚನಾ ದಿನದ ಅಂಗವಾಗಿ ಕಲಬುರಗಿಯಲ್ಲಿ ನಡೆದ 'ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಆಗದ ಹೊರತು ಸಂಪೂರ್ಣ ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂದೂ ಹೇಳಿದ್ದಾರೆ. ಈ ಭಾಗದ ಜನರ ತಲಾದಾಯ ಹೆಚ್ಚಿಸುವುದರೊಂದಿಗೆ, ಶಿಕ್ಷಣ, ಆರೋಗ್ಯ, ಉದ್ಯೋಗ, ಮೂಲ ಸೌಕರ್ಯ ಸುಧಾರಣೆ ಸೇರಿ ಸರ್ವಾಂಗೀಣ ಅಭಿವೃದ್ಧಿಯೇ ಸರ್ಕಾರದ ಗುರಿ ಎಂದೂ ಮುಖ್ಯಮಂತ್ರಿ, ಹೇಳಿರುವುದನ್ನು ನೋಡಿದರೆ, 'ಕಲ್ಯಾಣ ಕರ್ನಾಟಕ'ದ ಭಾಗ್ಯದ ದಿನಗಳು ಹತ್ತಿರದಲ್ಲೇ ಇವೆ ಎಂದು ಭಾವಿಸಬಹುದಾಗಿದೆ. ಆದರೆ, ಪ್ರತಿ ವರ್ಷದ ಹೈದರಾಬಾದ್ ವಿಮೋಚನಾ ದಿನದ ಆಸುಪಾಸಿನಲ್ಲಿ ಆಯಾ ಕಾಲಘಟ್ಟದ ಮುಖ್ಯಮಂತ್ರಿಗಳು ಇದೇ ಬಗೆಯ ಮಾತುಗಳನ್ನಾಡಿರುವುದು ಹಾಗೂ ಅವುಗಳ ಪರಿಣಾಮವನ್ನು ಗಮನಿಸಿದರೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಮಾತುಗಳ ಹಿಂದೆ ಇಚ್ಛಾಶಕ್ತಿಯ ಬದಲು ಔಪಚಾರಿಕತೆಯಷ್ಟೇ ಇರುವುದು ಸ್ಪಷ್ಟವಾಗುತ್ತದೆ. 1948ರ ಸೆ.17ರಂದು ಭಾರತ ಒಕ್ಕೂಟಕ್ಕೆ ಸೇರ್ಪಡೆಯಾದ ದಿನದಿಂದ ಇಂದಿನವರೆಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೈದರಾಬಾದ್ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ದೊರೆತಿಲ್ಲ ಎನ್ನುವ ದೂರುಗಳು ಕೇಳಿಬರುತ್ತಲೇ ಇವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಹಿಂದುಳಿದಿರುವಿಕೆ, ಬಾಲ್ಯ ವಿವಾಹಗಳ ಹೆಚ್ಚಳ, ಕೃಷಿವಲಯದ ಸಂಕಷ್ಟ, ವ್ಯಾಪಕ ಗುಳೆ ಸೇರಿದಂತೆ ಹಲವು ಸಮಸ್ಯೆಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ತತ್ತರಿಸುತ್ತಿವೆ. ದೇಶದ ಎರಡನೇ ಅತಿ ಶುಷ್ಕ ಪ್ರದೇಶ ಎಂದು ಗುರುತಿಸಲಾಗಿರುವ ಈ ಭಾಗವನ್ನು ಸುಧಾರಿಸುವ ಪ್ರಯತ್ನಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ. ಪ್ರಾದೇಶಿಕ ಅಸಮತೋಲನದ ನಿವಾರಣೆಗಾಗಿ ವಿವಿಧ ಸರ್ಕಾರಗಳ ಅವಧಿಯಲ್ಲಿ ಹಲವು ಯೋಜನೆಗಳು ಜಾರಿಗೆ ಬಂದಿವೆ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯಂತೆ 'ವಿಶೇಷ ಅಭಿವೃದ್ಧಿ ಯೋಜನೆ' ಜಾರಿಗೊಳಿಸಲಾಗಿದೆ. ಸಂವಿಧಾನದ '371 ಜೆ ಕಲಂ'ನಡಿ 'ಕಲ್ಯಾಣ ಕರ್ನಾಟಕ'ಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದ್ದು, 'ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ' ರೂಪುಗೊಂಡಿದೆ. ಪ್ರಸ್ತುತ 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ' ಎಂದು ಕರೆಯಲಾಗುವ ಈ ಮಂಡಳಿಗೆ, 2013ರಿಂದ ಇದುವರೆಗೆ ಒಟ್ಟು 24,780 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, 14,000 ಕೋಟಿ ವೆಚ್ಚ ಮಾಡಲಾಗಿದೆ. ಕಲಬುರಗಿಯಲ್ಲಿ ಕಳೆದ ವರ್ಷ ನಡೆದ ಸಚಿವ ಸಂಪುಟದ ಸಭೆಯಲ್ಲಿ 11,770 ಕೋಟಿ ಮೊತ್ತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿತ್ತು. ಈವರೆಗಿನ ಯೋಜನೆಗಳೆಲ್ಲ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ಬಂದಿದ್ದಲ್ಲಿ ಕಲ್ಯಾಣ ಕರ್ನಾಟಕ ನಂದನದ ತುಣುಕಾಗಿ ಬದಲಾಗುತ್ತಿತ್ತು ಹಾಗೂ ದೇಶಕ್ಕೆ ಮಾದರಿ ಆಗುತ್ತಿತ್ತು. ರಾಜಕೀಯ ಪ್ರಾತಿನಿಧ್ಯದ ಮಾನದಂಡದಿಂದ ನೋಡಿದರೂ, ಈ ಭಾಗದ ಇಬ್ಬರು ನಾಯಕರು ಮುಖ್ಯಮಂತ್ರಿಗಳಾಗಿದ್ದಾರೆ. ಹಲವು ನಾಯಕರು ಕೇಂದ್ರ ರಾಜಕಾರಣದಲ್ಲೂ ಅವಕಾಶ ಪಡೆದಿದ್ದಾರೆ. ಇದೆಲ್ಲದರಿಂದ ಆಗಿರುವುದಾದರೂ ಏನು? ನಗರ ಪ್ರದೇಶಗಳಲ್ಲಿನ ಅಲ್ಪಸ್ವಲ್ಪ ಅಭಿವೃದ್ಧಿಯನ್ನು ಹೊರತುಪಡಿಸಿದರೆ ಗ್ರಾಮೀಣ ಪ್ರದೇಶಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿಯೇ ಇವೆ. ಕುಡಿಯುವ ಶುದ್ಧನೀರು, ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಗುಣಮಟ್ಟದ ಸರ್ಕಾರಿ ಶಾಲೆಗಳು ಕಲ್ಯಾಣ ಕರ್ನಾಟಕದ ಗ್ರಾಮೀಣರಿಗೆ ಐಷಾರಾಮಿಯಾಗಿಯೇ ಉಳಿದಿವೆ. ಆಕರ್ಷಕ ಹಾಗೂ ಸುಂದರ ಹೆಸರುಗಳಿಂದ ಅಭಿವೃದ್ಧಿಯನ್ನು ಮರೆಮಾಚುವುದು ಸಾಧ್ಯವಿಲ್ಲ. 'ಕಲ್ಯಾಣ ಕರ್ನಾಟಕ'ದಲ್ಲಿನ ಕಲ್ಯಾಣ ಎನ್ನುವ ವಿಶೇಷಣ ಆ ಭಾಗದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಂಪರೆಯ ಔನ್ನತ್ಯವನ್ನು ಸೂಚಿಸುತ್ತದೆ; ಅಭಿವೃದ್ಧಿಗೆ ಸಂಬಂಧಿಸಿದಂತೆ ವ್ಯಂಗ್ಯ ಹಾಗೂ ವಿಷಾದದ ಧ್ವನಿಯನ್ನೂ ಒಳಗೊಂಡಿದೆ. ಪ್ರದೇಶವೊಂದರ ಅಭಿವೃದ್ಧಿಗೆ ಬೇಕಿರುವುದು ರಾಜಕೀಯ ಇಚ್ಛಾಶಕ್ತಿ ಹಾಗೂ ಪ್ರಾಮಾಣಿಕತೆ. ಇದೀಗ, ಕಲ್ಯಾಣ ಕರ್ನಾಟಕಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಕಟಿಸಿರುವ ಪ್ರತ್ಯೇಕ ಸಚಿವಾಲಯ ಕಾಗದದ ಮೇಲಿನ ಮತ್ತೊಂದು ಸಾಧನೆಯಷ್ಟೇ ಆಗಬಾರದು. ಈ ಸಚಿವಾಲಯ, ಕಲ್ಯಾಣ ಕರ್ನಾಟಕ ಭಾಗಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳು ಕಾಲಮಿತಿಯೊಳಗೆ ಜಾರಿಗೊಳ್ಳುವಂತೆ ಮಾಡುವ ಬದ್ಧತೆ ಪ್ರದರ್ಶಿಸಬೇಕು; ಆ ಭಾಗದ ಜನರ ಆಶೋತ್ತರಗಳಿಗೆ ತಾಯಿಕರುಳಿನಿಂದ ಸ್ಪಂದಿಸಬೇಕು. ಇದರ ಜೊತೆಗೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹಮ್ಮಿಕೊಂಡ ಯೋಜನೆಗಳ ಫಲಶ್ರುತಿಯ ಬಗ್ಗೆ ಗಂಭೀರ ಪರಾಮರ್ಶೆ ನಡೆಯಬೇಕು.







## ಶೂರ್ಪಣಖಿಯು ಪುನಃ ಖರನಲ್ಲಿ ಮೊರೆಯಿಟ್ಟದ್ದು

• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ಆ ಮೇಲೆ ಅಪಜಯವಾರ್ತೆಯನ್ನು ಹೇಳುವುದಕ್ಕೂ ಚೈತನ್ಯವಿಲ್ಲದೆ ಇದ್ದ ಶೂರ್ಪಣಖಿಯನ್ನು ಕಂಡು ಖರನು ಎಎಲೇ ಶೂರ್ಪಣಖ್ಯಿ, ನಿನ್ನ ನಿಮಿತ್ತವಾಗಿ ಅತಿ ಪರಾಕ್ರಮಿಗಳಾದ ರಾಕ್ಷಸರನ್ನು ಕಳಿಸಿದ್ದೇನೆ. ಆ ರಾಕ್ಷಸರು ನನಗೆ ಭಕ್ತರಾದವರು. ನನ್ನ ಕಾರ್ಯಗಳಲ್ಲಿ ಯಾವಾಗಲೂ ವಿಶ್ವಾಸ ಸವುಳ್ಳವರು. ಒಬ್ಬರನ್ನು ಕೊಲ್ಲುವರಲ್ಲದೆ ಒಬ್ಬರ ಕೈಯಲ್ಲಿ ಕೊಲ್ಲಿಸಿಕೊಳ್ಳುವವರಲ್ಲ. ನನ್ನ ಮಾತನ್ನು ಮೀರುವವರಲ್ಲ. ಅಂಥ ರಾಕ್ಷಸರನ್ನು ನಿನ್ನ ನಿಮಿತ್ತವಾಗಿ ಕಳುಹಿಸಿದಮೇಲೆ ನೀನು ಪುನಃ ಏಕೆ ರೋದನಮಾಡುತ್ತ ದಿಕ್ಕಿಲದ ಸ್ತ್ರೀಯಂತೆ ಭೂಮಿಯಲ್ಲಿ ಹೊರಳಿ ಹಂಬಲಿಸುತ್ತೀಯೆ ? ಏಳು ಏಳು, ಅಂಜಬೇಡ '' ಎಂದು ಹೇಳಿದನು.

ಆ ಮಾತನ್ನು ಕೇಳಿ ಶೂರ್ಪಣಖಿಯಂ ತರಹರಿಸಿಕೊಂಡು ಕಣ್ಣೀರನ್ನು ತೊಡೆದುಕೊಂಡು ಖರನನ್ನು ಕುರಿತು ಹೀಗೆಂದಳು: ಎಲ್ಲೆ ಖರನೇ, ಕಿವಿಮೂಗುಗಳನ್ನು ಕಳೆದುಕೊಂಡ ನನ್ನನ್ನು ಸಂತವಿಟ್ಟು ನನ್ನೊಡನೆ ಹದಿನಾಲ್ಕುಮಂದಿ ರಾಕ್ಷಸರನ್ನು ನೀನು ಕಳುಹಿಸಿದೆ. ಅವರೆಲ್ಲರೂ ಸಮರದಲ್ಲಿ ಬಾ ಶರಗಳಿಂದ ಹತರಾಗಿ ಭೂಮಿಯ ಮೇಲೆ ಬಿದ್ದ ರು. ಹಾಗೆ ಬಿದ್ದ ಮಹಾಬಲವಂತರಾದ ಆ ರಾಕ್ಷಸರನ್ನೂ ರಾಮನ ಪರಾಕ ಕ್ರಮವನ್ನೂ ಕಂಡು ನನ್ನ ಮನಸ್ಸಿ ಗೆ ಬಹು ಭಯವು ಹುಟ್ಟಿದೆ. ಆದಕಾರಣ ನಾನು ನಿನ್ನ ಮರೆಹೊಕ್ಕೆನು. ಶೋಕವೆಂಬ ಸಮುದ್ರದಲ್ಲಿ ಮುಳುಗಿರುವ ನನ್ನ ನ್ನು ರಕ್ಷಿಸು. ಆತನ ಶರಗಳಿಂದ ನೀನು ಕಳುಹಿಸಿದ ರಾಕ್ಷಸರೆಲರೂ ಹತರಾದರು. ನಿನಗೆ ರಾಕ್ಷಸರಲ್ಲಿಯೂ ನನ್ನಲ್ಲಿಯೂ ದಯೆಯೂ ರಾಮನೊಡನೆ ರಣರಂಗದಲ್ಲಿ ಎದುರಾಗಿ ನಿಲ್ಲುವದಕ್ಕೆ ಶಕ್ತಿಯೂ ಇದ್ದಪಕ್ಷದಲ್ಲಿ ದಂಡಕಾರಣ್ಯದಲ್ಲಿರುವ ರಾಕ್ಷಸರ ಕಂಟಕನಾದ ರಾಮನನ್ನು ಸಂಹರಿಸು.

ಹೇಗಾದರೂ ಶತ್ರುಸಂಹಾರಕನಾದ ರಾಮನನ್ನು ಕೊಲ್ಲದಿದ್ದ ರೆ ನಾನು ನಿನ್ನ ಕಣ್ಣಮುಂದೆಯೇ ಪ್ರಾಣಗಳನ್ನು ಬಿಡುವೆನು. ರಾಮನು ರಣರಂಗದಲ್ಲಿ ಬಿಲ್ಲುಗೊಂಡು ನಿಂತರೆ ಆತನಿಗೆದುರಾಗಿ ನೀನು ನಿಲ್ಲಲಾರೆಯೆಂದು ನನ್ನ ಬುದ್ಧಿಗೆ ತೋರುತ್ತದೆ. ನಿನ್ನ ಪರಾಕ್ರಮವು ಮಿಥ್ಯಾಕಲ್ಪಿತವಲ್ಲದೆ ಸ್ವಾಭಾವಿಕವಾದದ್ದ ಲ್ಲ. ರಾಕ್ಷಸನಾಯಕನಾದ ನೀನು ರಣರಂಗದಲ್ಲಿ ಮನುಷ್ಯರಾದ ರಾಮಲಕ್ಷ್ಮಣರನ್ನು ಕೊಲ್ಲುವುದಕ್ಕೆ ಸಮರ್ಥನಲ್ಲದ ಮೇಲೆ ಹೇಡಿಯಾದ ನಿನಗೆ ಈ ಜನಸ್ಥಾನದಲ್ಲಿ ವಾಸವು ಸಲ್ಲದು. ನೀನು ನಿನ್ನ ಬಂಧುಗಳನ್ನು ಕೂಡಿಕೊಂಡು ಈ ಸ್ಥಾನವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗು. ಅಲ್ಲದಿದ್ದರೆ ರಾಮನ ಪರಾಕ್ರಮದಿಂದ ಶೀಘ್ರವಾಗಿ ನಾಶವನ್ನೆದುವೆ. ದಶರಥರಾಜನ ಕುಮಾರರಾದ ರಾಮಲಕ್ಷ್ಮಣರು ಅತಿಪರಾಕ್ರಮಿಗಳಲ್ಲದ ಪಕ್ಷದಲ್ಲಿ ನನ್ನನ್ನು ಹೀಗೆ ವಿಕಾರಮಾಡಲಾರರು ಎಂದು ಹಂಬಲಿಸುತ್ತ ಎದೆಬಡಿದುಕೊಂಡು ದುಃಖಾತಿಶಯದಿಂದ ಗೋಳಾಡತೊಡಗಿದಳು.


### ಖರನು ಶ್ರೀ ರಾಮನ ಮೇಲೆ ಯುದ್ಧಕ್ಕೆ ಹೊರಟಿದ್ದು

ಈ ರೀತಿಯಲ್ಲಿ ಶೂರ್ಪಣಖಿಯಿಂದ ನಿರಾಕರಿಸಿ ನುಡಿಯಲ್ಪಟ್ಟ ಖರನು ಸಮಸ್ತ ರಾಕ್ಷಸರ ಮಧ್ಯದಲ್ಲಿ ಶೂರ್ಪಣಖಿಯನ್ನು ಕುರಿತು ಈ ಪ್ರಕಾರ ಹೇಳಿದನು: ಎಲೇ ಶೂರ್ಪಣಖೆ, ಸಮುದ್ರದಂತೆ ಉಬ್ಬಿದ ನನ್ನ ಪರಾಕ್ರಮವನ್ನು ಸಹಿಸುವುದಕ್ಕೆ ಒಬ್ಬರೂ ಸಮರ್ಥರಲ್ಲ. ಹಾಗಿರುವಲ್ಲಿ ನಾನು ಅಲ್ಪಾಯುಷ್ಯವುಳ್ಳ ಮನುಷ್ಯನಾದ ರಾಮನನ್ನು ಲೆಕ್ಕಿಸುವೆನೆ ? ಆತನು ತನ್ನ ದುಶ್ಚರಿತ್ರಗಳಿಂದ ಗರ್ವಿಸಿ ನನಗಿದಿರಾಗಿ ಸಮರಕ್ಕೆ ನಿಂತು ಪ್ರಾಣಗಳನ್ನು ಬಿಡುವನು. ಎಲೇ ಶೂರ್ಪಣಖಿ, ನೀನು ಕಣ್ಣೀರನ್ನು ಸುರಿಸಬೇಡ. ನಿನ್ನ ಮನಸ್ಸಿನ ಭಯವನ್ನೂ ಚಿಂತೆಯನ ಬಿಡು. ನಾನು ಲಕ್ಷ್ಮಣಸಮೇತನಾದ ರಾಮನನ್ನು ಯಮನ ಮಂದಿರಕ್ಕೆ ಕಳುಹಿಸುತ್ತೇನೆ.

ಮುಂದುವರಿಯುವುದು...


# ಹನುಮಾನ್ ಚಾಲೀಸಾ ಪಠಿಸುವ ಸರಿಯಾದ ವಿಧಾನ...ಮಹತ್ವ..!

ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಭಗವಾನ್ ಹನುಮಂತನು ಶಿಸ್ತನ್ನು ಪ್ರೀತಿಸುತ್ತಾನೆ. ಅದಕ್ಕಾಗಿಯೇ ಹನುಮಂತನ ಭಕ್ತರು ಸಹ ಶಿಸ್ತನ್ನು ಅನುಸರಿಸುತ್ತಾರೆ. ಹನುಮಂತನು ತನ್ನ ಭಕ್ತರ ಎಲ್ಲಾ ತೊಂದರೆಗಳನ್ನು ಬಹುಬೇಗ ಈಡೇರಿಸುತ್ತಾನೆ. ಅಂದರೆ, ಹನುಮಂತನು ತನ್ನ ಭಕ್ತರನ್ನು ಸಂಕಟಗಳಿಂದ ದೂರವಿಡುತ್ತಾನೆ. ಹನುಮಂತನ ತನ್ನೆಲ್ಲಾ ಭಕ್ತರ ಸಂಕಟಗಳನ್ನು ದೂರಾಗಿಸುವುದರಿಂದ ಆತನನ್ನು ಸಂಕಟ ಮೋಚನ ಎಂದು ಕರೆಯುತ್ತಾರೆ. ಹಿಂದೂ ಧರ್ಮದಲ್ಲಿ ಪ್ರತೀ ದಿನವು ತನ್ನದ ಆದ ವಿಶಿಷ್ಟತೆಯನ್ನು ಒಳಗೊಂಡಿದೆ. ಪ್ರತೀ ದಿನವೂ ಒಂದೊಂದು ದೇವರನ್ನು ಪೂಜಿಸಲಾಗುತ್ತದೆ. ಅದೇ ರೀತಿ ಮಂಗಳವಾರ ಮತ್ತು ಶನಿವಾರದ ದಿನದಂದು ಭಗವಾನ್ ಹನುಮಂತನನ್ನು ಪೂಜಿಸಲಾಗುತ್ತದೆ. ಈ ದಿನಗಳಲ್ಲಿ ಭಗವಾನ್ ಹನುಮಂತನನ್ನು ಪೂಜಿಸುವುದರಿಂದ ಶನಿ ಮತ್ತು ಮಂಗಳ ಗ್ರಹಗಳಿಗೆ ಸಂಬಂಧಿಸಿದ ಸಮಸ್ಯೆಗಳು ದೂರಾಗುತ್ತದೆ ಮತ್ತು ಅನೇಕ ರೀತಿಯ ಅಡೆತಡೆಗಳು ನಾಶವಾಗುತ್ತದೆ ಎಂದು ಹೇಳಲಾಗಿದೆ.

ಸಂತ ತುಳಸಿದಾಸರಿಂದ ರಚಿಸಲ್ಪಟ್ಟ ಹನುಮಾನ್ ಚಾಲೀಸಾವನ್ನು ಪ್ರತಿನಿತ್ಯ ಲಕ್ಷಾಂತರ ಮಂದಿ ಪಾರಾಯಣ ಮಾಡುತ್ತಾರೆ. ಹನುಮಾನ್ ಚಾಲೀಸಾ ಕೇವಲ ಶ್ಲೋಕವಲ್ಲ. ಅದರಲ್ಲಿಇಡೀ ಬ್ರಹ್ಮಾಂಡದ ರಹಸ್ಯವೇ ಅಡಗಿದೆ. ಉದಾಹರಣೆಗೆ ಸೂರ್ಯ ಮತ್ತು ಭೂಮಿಯ ನಡುವಿನ ಅಂತರವೆಷ್ಟು ಎಂಬುದನ್ನು ಸಂತ ತುಳಸಿದಾಸರು 15ನೇ ಶತಮಾನದಲ್ಲೇ ಹೇಳಿದ್ದರು.



ಹನುಮಾನ್ ಚಾಲೀಸಾದ ಪಾರಾಯಣದಿಂದ ನಕಾರಾತ್ಮಕ ಶಕ್ತಿಗಳು ಕಳೆದು ಹೋಗಿ, ಸಕಾರಾತ್ಮಕ ಶಕ್ತಿಯ ಪರಿಣಾಮ ಸೃಷ್ಟಿಯಾಗುತ್ತದೆ. ಅದರಲ್ಲಿನ 40 ಶ್ಲೋಕಗಳು 40 ಬಗೆಯ ದೋಷಗಳನ್ನು ನಿವಾರಣೆ ಮಾಡುತ್ತವೆ ಎಂಬ ಉಲ್ಲೇಖವಿದೆ.

**ಹನುಮಾನ್ ಚಾಲೀಸಾ ಪಠಿಸುವ ಸರಿಯಾದ ವಿಧಾನ:** ಹನುಮಾನ್ ಚಾಲೀಸಾಗೆ ಸಂಬಂಧಿಸಿದಂತೆ, ಅದರ ಪಠಣವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಮಾತ್ರ ಪೂರ್ಣ ಲಾಭವನ್ನು ಪಡೆಯಲಾಗುತ್ತದೆ ಎಂಬ ನಂಬಿಕೆ ಇದೆ. ಹನುಮಾನ್ ಚಾಲೀಸಾ ಪಠಿಸಲು ಸರಿಯಾದ ಮಾರ್ಗವನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಹನುಮಾನ್ ಚಾಲೀಸಾವನ್ನು ಪಠಿಸುವ, ಮೊದಲು ಸ್ನಾನ ಮಾಡಿ, ಸ್ವಚ್ಛವಾದ ಬಟ್ಟೆಗಳನ್ನು ಧರಿಸಿದ ನಂತರ, ಹನುಮನ ವಿಗ್ರಹ ಅಥವಾ ಚಿತ್ರದ ಮುಂದೆ ಕುಳಿತು ಹನುಮಾನ್ ಚಾಲೀಸಾವನ್ನು ಪಠಣ ಮಾಡಬೇಕು. ಮಲ್ಲಿಗೆ ಎಣ್ಣೆ ಮತ್ತು ಸಿಂಧೂರವನ್ನು ಹನುಮನಿಗೆ ಅರ್ಪಿಸಿ. ಹನುಮಾನ್ ಚಾಲೀಸಾ ಪಾರಾಯಣವನ್ನು ಪ್ರಾರಂಭಿಸುವ ಮೊದಲು ಪ್ರಭ ಶ್ರೀರಾಮ ದೇವರನ್ನು ಸ್ಮರಿಸಬೇಕು. ಹನುಮಂತ ದೇವರ ಚಿತ್ರ ಅಥವಾ ಮೂರ್ತಿಯ ಮುಂದೆ ಕಮಂಡಲದಲ್ಲಿ ನೀರನ್ನು ಇರಿಸಿ. ಬೆಳಗ್ಗೆ ಮತ್ತು ಸಂಜೆ ಎರಡೂ ಹೊತ್ತು ಹನುಮಾನ್ ಚಾಲೀಸಾ ಪಠಿಸುವುದು ಒಳ್ಳೆಯದು ಎಂದು ಪರಿಗಣಿಸಲಾಗಿದೆ. ಹನುಮಾನ್ ಚಾಲೀಸಾ ಪಠಣದ ನಂತರ, ಆ ನೀರನ್ನು ಪ್ರಸಾದದ ರೂಪದಲ್ಲಿ ಸ್ವೀಕರಿಸಬೇಕು. ಅಲ್ಲದೇ, ಈ ನೀರನ್ನು ಮನೆಯ ಮೂಲೆ ಮೂಲೆಗಳಲ್ಲಿ ಸಿಂಪಡಿಸಬೇಕು. ಇದನ್ನು ಮಾಡುವುದರಿಂದ ಮನೆಯ ಋಣಾತ್ಮಕ ಶಕ್ತಿಯು ನಾಶವಾಗುತ್ತದೆ.

### ಹನುಮಾನ್ ಚಾಲೀಸಾ ಪ್ರಾಮುಖ್ಯತೆ

**ಹನುಮಾನ್ ಚಾಲೀಸಾವನ್ನು ಪ್ರತಿನಿತ್ಯ ಪಠಿಸಬೇಕು. ಅದರಲ್ಲೂ, ಶನಿವಾರ ಹನುಮಾನ್ ಚಾಲೀಸಾ ಪಠಿಸುವುದರಿಂದ ಶನಿ ದೇವನು ಅವರ ಎಲ್ಲಾ ಕಷ್ಟಗಳನ್ನು ತೆಗೆದುಹಾಕುತ್ತಾನೆ. ರಾಮಾಯಣದ ಸಂದರ್ಭದಲ್ಲಿ ಭಗವಾನ್ ಹನುಮಂತನು ರಾವಣನಿಂದ ಶನಿಯನ್ನು ರಕ್ಷಿಸುತ್ತಾನೆ. ಆ ಕಾರಣದಿಂದ ಹನುಮಂತನ ಭಕ್ತರಿಗೆ ಯಾವುದೇ ತೊಂದರೆಯನ್ನು ನೀಡುವುದಿಲ್ಲವೆಂದು ಭರವಸೆಯನ್ನು ನೀಡಿರುತ್ತಾನೆ. ಯಾವ ವ್ಯಕ್ತಿ ಶನಿ ದೋಷವನ್ನು, ಸಾಡೇಸಾತಿ ಶನಿ ದೋಷವನ್ನು ಮತ್ತು ಶನಿ ಮಹಾದಶಾ ಸೇರಿದಂತೆ ಶನಿಗೆ ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ತಮ್ಮ ಜೀವನದಲ್ಲಿ ಎದುರಿಸುತ್ತಿದ್ದರೆ ಅವರು ಪ್ರತಿನಿತ್ಯ ಸಾಧ್ಯವಾಗದಿದ್ದರೆ ಮಂಗಳವಾರ ಮತ್ತು ಶನಿವಾರದಂದು ತಪ್ಪದೇ ಹನುಮಾನ್ ಚಾಲೀಸಾವನ್ನು ಪಠಿಸಬೇಕು.**

# ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗದಿರಲಿ ನಾಡಹಬ್ಬ

ಹರೀಶ್ ಪುತ್ತೂರು
• ಉದಯವಾಹಿನಿ, ವಿಶೇಷ



ವೇದಿಕೆಯಲ್ಲೊಂದು ಕಾರ್ಯ ವಿಧಾನಗಳು, ಅಥವಾ ಉತ್ಸವಗಳು ನಡೆಯಬೇಕೆಂದರೆ ಉದ್ಘಾಟನೆ ಮಾಡುವ ಸಂದರ್ಭಗಳಲ್ಲಿ ಜ್ಯೋತಿ ಬೆಳಗಿಸುವ ಅಥವಾ ಪುಷ್ಪಾರ್ಚನೆ ಮಾಡುವುದು ನಮ್ಮ ವಾಡಿಕೆ. ಅಲ್ಲಿ ಯಾವುದೇ ಜಾತಿ, ಧರ್ಮದ ಲೆಕ್ಕಚಾರವಿರುವುದಿಲ್ಲ ಯಾಕೆಂದರೆ ಶುದ್ಧ ಮನದಿ, ಪರಿಶುದ್ಧ ಸಂಕಲ್ಪದಿ ಎಲ್ಲಾ ವರ್ಗದವರ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮ ಅದಾಗಿರುತ್ತದೆ. ಅದೇ ರೀತಿ ನಾಡಹಬ್ಬವನ್ನು ಯಾಕೆ ಕಾಣಬಾರದು.! ಜ್ಯೋತಿ ಬೆಳಗಿಸಿ, ಪುಷ್ಪಾರ್ಚನೆಗೈದು ಚಾಲನೆಯಷ್ಟೆ ನೀಡುವರು, ಇಲ್ಲಿ ಅಂಬಾರಿಯನ್ನು ಹೊತ್ತು ಸಾಗುವುದಕ್ಕೆ ಗಜಪಡೆಗಳೆ ಬೇಕು ವಿನಃ ಜನರು ಹೊತ್ತು ಸಾಗಿದ ಹಿನ್ನರಿಮೆಗಳಿಲ್ಲ.

ಮೈಸೂರು ದಸರಾ ಏನೋ ಜಗದ್ವಿಖ್ಯಾತವಾಗಿರುವುದು ನಿಜ. ಯಾಕೆಂದರೆ ಈ ಹಬ್ಬ ಎನ್ನುವುದು ಜನಪದರ ದಸರಾ ಹಬ್ಬ. ಈ ಸಮಯಗಳಲ್ಲಿ ಸಂದರ್ಭಗಳಲ್ಲಿ ಪ್ರತಿ ಊರಿನಲ್ಲೂ ಎಷ್ಟೊಂದು ಆಚರಣೆಗಳು, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಭೂಮಿ ಹೆಚ್ಚಾಗಿರುವುದರಿಂದ ಅಲ್ಲೊಂದು ಫಲವಂತಿಕೆಯ ಆಶಯವೂ ಇದೆ. ಹಬ್ಬ ಜಾತ್ರೆಗಳಿಲ್ಲದಿದ್ದರೆ ಹಳ್ಳಿಗಳ ಬಾಳಿನ ಕೊಂಡಿ ಬೆಸೆಯದು ಎಂಬ ಮಾತುಗಳಿವೆ. ಇದು ನಿಸರ್ಗದ ಧರ್ಮವನ್ನು ಕಾಪಿಟ್ಟುಕೊಂಡಿರುವ ಚೆಲುವಿನ ಹಬ್ಬ, ನಾಡಹಬ್ಬ, ಹಾಗಾಗಿ ದಸರಾ ಸುತ್ತ ಸೃಷ್ಟಿಯಾದ ಜಾನಪದ ಜಗತ್ತೊಂದು ಅನಾವರಣಗೊಂಡಿರುವುದು ಬಹಳ ವಿಶೇಷ. ಹಳ್ಳಿನಾಡಿನ ಜೀವನೋತ್ಸಾಹದ ಬನಿಗಳು, ಕುಟುಂಬ, ಗ್ರಾಮ, ನಾಡು, ದೇಶ, ಪ್ರಪಂಚ ಎಂದೆಲ್ಲ ಒಡಮೂಡಿ



ನಿಲ್ಲುವ ಇವುಗಳ ಲೋಕದೃಷ್ಟಿ ಅಪಾರ. ಜಾತಿ, ಧರ್ಮವನ್ನು ಮೀರಿ ಯಾವುದೇ ಭೇದ ಭಾವಗಳಿಲ್ಲದೆ ಆಚರಿಸಲ್ಪಡುತ್ತಿರುವ ಈ ಹಬ್ಬಕ್ಕೆ ಕೇವಲ ಮೈಸೂರು ಮಾತ್ರವಲ್ಲದೆ ದೇಶ ವಿದೇಶಗಳಿಂದಲೂ ಜನ ಸಾಗರವೆ ಹರಿದು ಬರುತ್ತಾರೆ.

ಇಲ್ಲಿ ಹಿಂದೂ ಸಂಸ್ಕೃತಿ, ಸಂಪ್ರದಾಯದಂತೆ ಆಚರಣೆಗಳು ನಡೆದರೂ ಸಹ ಇಲ್ಲಿ ಕೇವಲ ಹಿಂದೂ ಧರ್ಮಕ್ಕೆ ಮಾತ್ರ ಅವಕಾಶವಲ್ಲದೆ ಪುರಾತನದಿಂದಲೂ ಎಲ್ಲಾ ವರ್ಗದ ಜನರ ಸಮ್ಮುಖದಲ್ಲಿ ಆಚರಿಸಿಕೊಂಡು ಬಂದಿರುವ ಪ್ರತೀತಿ ಇದೆ. ಮೈಸೂರು ದಸರಾವನ್ನು ನಾವು ನಾಡ ದಸರಾ ಎಂದು ಹೇಳುವಷ್ಟು ಅದು ಜನಪ್ರಿಯಗೊಂಡಿದೆ. ನಮ್ಮ ಮಾಧ್ಯಮಗಳು, ಸಿನಿಮಾಗಳು ಆನೆ, ಅಂಬಾರಿ, ಪಥಸಂಚಲನ, ಕುಸ್ತಿ, ಕ್ರೀಡೆ, ರಾಜಮನೆತನದ ವೈಭವ, ಸರ್ಕಾರದ ನೇರ ಪಾಲ್ಗೊಳ್ಳುವಿಕೆ ಇವೆಲ್ಲವೂ ಒಂದುಗೂಡಿ ಪ್ರವಾಸೋದ್ಯಮದ ಲಾಭ, ವ್ಯಾಪಾರ ವಹಿವಾಟು ಇವೆಲ್ಲದರ ಭಾಗವಾಗಿ ಅದು ಅಂತರ್ಯದಲ್ಲಿ ಹಬ್ಬದಂತೆ ಕಂಡರೂ ಬಾಹ್ಯದಲ್ಲಿ ಜಾತ್ರೆಯ ಸ್ವರೂಪ ಪಡೆದು ನಿಂತಿದೆ. ಆದರೆ, ಹಳ್ಳಿ ಬಾಳಿನ ಸ್ವರೂಪಕ್ಕೆ ಬಂದಾಗ ಹಬ್ಬಗಳು ಇನ್ನಷ್ಟು ಪವಿತ್ರಗೊಳ್ಳುತ್ತವೆ. ತಮ್ಮ ಕುಲ ದೈವ ಊರದೈವಗಳನ್ನು ಕೂಡಿಕೊಂಡು ಆವರ್ತಗೊಳ್ಳುತ್ತವೆ. ಶಿವ ಮತ್ತು ಶಕ್ತಿ ಪೂಜೆಯೊಂದಿಗೆ ಪಿತೃಪ್ರಧಾನ ವ್ಯವಸ್ಥೆ ಮತ್ತು ಮಾತೃಪ್ರಧಾನ ವ್ಯವಸ್ಥೆಗಳೆರಡು ಸಂಕರಗೊಂಡು ಸಹಬಾಳ್ವೆ ತೋರುವ ವಿಧಾನಗಳಾಗಿಯೂ ಈ ಹಬ್ಬಗಳು ನೆಲೆಗೊಂಡಿವೆ. ನಮ್ಮ ಜನಪದ ದಸರಾ ಅಂದರೆ ಇದಕ್ಕೊಂದು ಒಂದೊಳ್ಳೆಯ ಉದಾಹರಣೆಗಳಿವೆ. ಜೀವನದ ವೈವಿಧ್ಯಮಯ ಪರ್ವವಾಗಿ ತೆರೆದುಕೊಳ್ಳುವ ಈ ಹಬ್ಬ ನಾಡಿನ ಹಬ್ಬವಾಗಿ ಆಚರಿಸಲ್ಪಡುತ್ತಿದ್ದೇವೆ. ಮೈಸೂರಿನ ಅರಸರು ಆಚರಿಸುತ್ತಾ ಬಂದ ಮೈಸೂರು ದಸರಾವಾಗಲಿ, ವಿಜಯನಗರದ ಅರಸರ ಮಹಾನವಮಿ ವೈಭವದ ದಸರಾವಾಗಲಿ, ಸಂಡೂರು, ಜರಿಮಲೆ, ಕನಕಗಿರಿ, ಹರತಿ ಕೋಟೆ, ಸುರಪುರದ ಸ್ಥಳೀಯ ನಾಯಕ ಅರಸರ, ಸಾಮಂತ ಪಾಳೇಗಾರರ ದಸರಾವಾಗಲಿ ಎಲ್ಲವೂ ಜನಮುಖಿ ಹಬ್ಬಗಳನ್ನಾಗಿ ಆಚರಿಸುತ್ತಿದ್ದರು.

ಆದರೆ ಅವುಗಳಿಗೆ ಆಯಾ ಅರಸರಿಂದ, ಸಾಮಂತರರಿಂದ ಚಾಲನೆ ದೊರೆತು ವಿಶೇಷವಾಗಿ ಆಚರಿಸಲ್ಪಡುತ್ತಿದ್ದವು. ಒಂದೊಂದು ದಿನ ಒಂದೊಂದು ದೇವತೆಯನ್ನು ಸಿಂಗರಿಸಿ ಪೂಜಿಸುವ, ಅಷ್ಟದ್ರವ್ಯಗಳ ಶಾಸ್ತ್ರ ಮಾಡುವ, ಕಂಕಣವನ್ನು ಪೂಜಿಸಿ ಧರಿಸುವ ವಿಧಾನಗಳು ಈಗಲೂ ವಂಶಪರಂಪರಾನುಗತವಾಗಿವೆ ಮತ್ತು ಅವು ಜನ ಪಾಲ್ಗೊಳ್ಳುವಿಕೆಯ ಆಚರಣೆಗಳೂ ಆಗಿವೆ. ಹಾಗಾಗಿ ಜಾತಿ, ಧರ್ಮ ಭಾಷೆಯನ್ನು ಮೀರಿ ಎಲ್ಲೂರು ಜೊತೆಯಾಗಿ ಆಚರಿಸುವ ಹಬ್ಬ ನಾಡ ಹಬ್ಬ.

ಮಹಾರಾಜರು ಪಟ್ಟದಲ್ಲಿ ಇಲ್ಲದಿರುವ ಸಂದರ್ಭದಲ್ಲಿ ಹೈದರಾಲಿ, ಟಿಪ್ಪು ದಸರಾ ಹಬ್ಬವನ್ನು ಮುನ್ನಡೆಸಿದ್ದರು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೀಗ ಕೆಲವರು ಇತಿಹಾಸವನ್ನೇ ಮರೆತರಾ, ಅಥವಾ ತಮ್ಮ ಆಚರಣೆಯಲ್ಲಿ ಒಂದಷ್ಟು ಬದಲಾವಣೆ ಬಯಸಿದ್ದಾರೆಯೆ ಎಂಬ ಪ್ರಶ್ನೆ ಭಾಸವಾಗುವುದರಲ್ಲಿ ಎರಡು ಮಾತಿಲ್ಲ. ಅಂದಿನ ಕಾಲದಲ್ಲಿ ನಾಡ ಹಬ್ಬಕ್ಕೆ ಇಲ್ಲದ ಧರ್ಮದಂಗಲ್ ಈಗ ಭಾರೀ ಸದ್ದು ಮಾಡುತ್ತಿದೆ, ಹಾಗಾದರೆ ನಾಡ ಹಬ್ಬ ಎಂಬ ಹೆಸರಿನ ಅರ್ಥವನ್ನೆ ಮರೆತಿರುವುದರ ಇದ್ದೇಶ ಏನಾಗಿರಬಹುದು. ಈ ಹಬ್ಬಕ್ಕೆ ಕೇವಲ ಒಂದು ಧರ್ಮ ಮಾತ್ರ ಸಾಕೆಂಬ ಮನಸ್ಥಿತಿಯೆ..! ಈ ರೀತಿಯ ಹೋರಾಟಗಳಿಗೆ ಚರಿತ್ರೆಯಲ್ಲಿನ ಪುಟಗಳು ಕಾರಣವಲ್ಲ, ಅಂದಿನ ಕಾಲದಲ್ಲಿ ಸದ್ದು ಮಾಡದ ಧರ್ಮ ದಂಗಲ್ ಈಗ ಇದರ ಉದ್ದೇಶ ಮೊಸರಿನಲ್ಲಿ ಕಲ್ಲುಹುಡುಕಿದಂತೆ.

## ಶ್ರೀ ರಮೇಶ್ ಶಿಂದೆ, ರಾಷ್ಟ್ರೀಯ ವಕ್ತಾರರು






ಪಿತೃಪಕ್ಷದಲ್ಲಿ ಶ್ರಾದ್ಧ-ಪಿಂಡದಾನ ಮಾಡುವುದು ಪಿತೃಋಣವನ್ನು ತೀರಿಸುವ ಒಂದು ಮಾರ್ಗವಾಗಿದೆ. ತಂದೆ-ತಾಯಿ ಮತ್ತು ಇತರ ಹತ್ತಿರದ ಸಂಬಂಧಿಕರ ಮರಣಾನಂತರದ ಪ್ರಯಾಣ ಸುಖಮಯವಾಗಿ ಮತ್ತು ಕಷ್ಟರಹಿತವಾಗಿರಲಿ, ಅವರಿಗೆ ಸದ್ಗತಿ ದೊರೆಯಲಿ ಎಂಬ ಉದ್ದೇಶದಿಂದ ಈ ಶ್ರಾದ್ಧ ಕಾರ್ಯವನ್ನು ಮಾಡಲಾಗುತ್ತದೆ. ಶ್ರಾದ್ಧದ ಮಂತ್ರಗಳಲ್ಲಿ ಪಿತೃಗಳಿಗೆ ಗತಿ ನೀಡುವ ಸೂಕ್ಷ್ಮ ಶಕ್ತಿ ಅಡಗಿದೆ. ಆದರೆ ಕೆಲವರು ಶ್ರಾದ್ಧ ಬ್ರಾಹ್ಮಣರ ಹೊಟ್ಟೆ ತುಂಬಿಸುವ ವ್ಯವಸ್ಥೆ, ಮರಣಾನಂತರ ಪಿತೃಗಳಿಗೆ ದಾನ ಮಾಡುವುದಕ್ಕಿಂತ ಬಡವರಿಗೆ ಅನ್ನದಾನ ಮಾಡಿ ಎಂದು ಟೀಕಿಸುತ್ತಾರೆ.

ಪೂರ್ವಜರ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸುವ ಈ ಪರಿಕಲ್ಪನೆ ಕೇವಲ ಭಾರತದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿಯೂ ಕೂಡ ಪಿತೃಗಳ ಶಾಂತಿಗಾಗಿ ವಿವಿಧ ಪದ್ಧತಿಗಳನ್ನು ಆಚರಿಸಲಾಗುತ್ತದೆ. ಅವುಗಳಲ್ಲಿ ಪಿತೃಗಳ ಮುಕ್ತಿಯ ಶಾಸ್ತ್ರೋಕ್ತ ಪರಿಕಲ್ಪನೆ ಇಲ್ಲದಿದ್ದರೂ, 'ಪೂರ್ವಜರ ಬಗ್ಗೆ ಕೃತಜ್ಞರಾಗಿರಬೇಕು' ಎಂಬ ಭಾವನೆ ಖಂಡಿತಾ ಇದೆ. ಅನೇಕ ಪಾಶ್ಚಾತ್ಯರು ತಮ್ಮ ಪೂರ್ವಜರ ಮುಕ್ತಿಗಾಗಿ ಭಾರತಕ್ಕೆ ಬಂದು ಪಿಂಡದಾನ ಮತ್ತು ತರ್ಪಣ ವಿಧಿಗಳನ್ನು ಮಾಡುತ್ತಾರೆ. ಈ ಕಾರಣಕ್ಕಾಗಿ ಶ್ರಾದ್ಧ ವಿಧಿಗಳನ್ನು ಟೀಕಿಸುವವರಿಗೆ ಉತ್ತರ ನೀಡುವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

### ಇತರ ಪಂಥಗಳಲ್ಲಿ ಪೂರ್ವಜರ ಆತ್ಮದ ಶಾಂತಿಗಾಗಿ ಆಚರಿಸಲಾಗುವ ಪದ್ಧತಿಗಳು

**ಪಾರ್ಸಿ ಪಂಥ:** ಪಾರ್ಸಿ ಸಮುದಾಯದ ಪ್ರಮುಖ ಹಬ್ಬವಾದ ಪತೇತಿಯ ನಿಮಿತ್ತ ವರ್ಷದ ಕೊನೆಯ 9 ದಿನಗಳನ್ನು ಪಿತೃಗಳ ಶಾಂತಿಯ ದಿನಗಳೆಂದು ಆಚರಿಸಲಾಗುತ್ತದೆ. ಹತ್ತನೇ ದಿನ 'ಪತೇತಿ' ಹಬ್ಬವನ್ನು ಆಚರಿಸಲಾಗುತ್ತದೆ, ಈ ದಿನದಿಂದಲೇ ಪಾರ್ಸಿ ಹೊಸ ವರ್ಷ ಪ್ರಾರಂಭವಾಗುತ್ತದೆ. ಹಿಂದೂ ಸಂಸ್ಕೃತಿಯಲ್ಲಿ ಆತ್ಮವನ್ನು 'ಅಮರ' ಎಂದು ಪರಿಗಣಿಸುವಂತೆ, ಪಾರ್ಸಿ ಸಮಾಜದಲ್ಲೂ ಇದೇ ನಂಬಿಕೆ ಇದೆ. 'ಅವೆಸ್ತಾ' (ಪಾರ್ಸಿಗಳ ಧರ್ಮಗ್ರಂಥ)ದಲ್ಲಿ ಪಿತೃಗಳನ್ನು 'ಫ್ರಾವಶಿ' ಎಂದು ಕರೆಯಲಾಗಿದೆ ಮತ್ತು 'ಬರಗಾಲದ ಸಮಯದಲ್ಲಿ ಅವರು ಸ್ವರ್ಗದ ಸರೋವರಗಳಿಂದ ತಮ್ಮ ವಂಶಸ್ಥರಿಗಾಗಿ ನೀರನ್ನು ತರುತ್ತಾರೆ' ಎಂದು ನಂಬಲಾಗಿದೆ.

**ಕ್ಯಾಥೋಲಿಕ್ ಪಂಥ:** ಅಮೆರಿಕಾ, ಲ್ಯಾಟಿನ್ ಅಮೆರಿಕಾ ಮತ್ತು ಯುರೋಪ್‌ನ ಅನೇಕ ದೇಶಗಳಲ್ಲಿ ನವೆಂಬರ್ ತಿಂಗಳಲ್ಲಿ ಪಿತೃಗಳನ್ನು ತೃಪ್ತಿಪಡಿಸುವ ಪದ್ಧತಿ ಇದೆ. ಇದು ಪೂರ್ವಜರ ಆತ್ಮಕ್ಕೆ ಸಂಬಂಧಿಸಿದ ದಿನವಾಗಿದ್ದರೂ, ಇದನ್ನು ಒಂದು ಹಬ್ಬದಂತೆ ಆಚರಿಸಲಾಗುತ್ತದೆ. ಅಕ್ಟೋಬರ್ 31ರ ಸಂಜೆಯಿಂದ ನವೆಂಬರ್ 2ರ ರಾತ್ರಿಯವರೆಗೆ ಈ ಉತ್ಸವ ನಡೆಯುತ್ತದೆ. ಅಕ್ಟೋಬರ್ 31ರ ಸಂಜೆ 'ಹ್ಯಾಲೋವೀನ್ ಯಾತ್ರೆ' (ಇಲ್ಲಿ 'ಹ್ಯಾಲೋ' ಎಂದರೆ 'ಹೋಲಿ' ಅಥವಾ ಪವಿತ್ರ ಎಂಬ ಪದದ ಅಪಭ್ರಂಶ) ನಡೆಸಲಾಗುತ್ತದೆ. ನವೆಂಬರ್ 1 ರಂದು 'ಆಲ್ ಸೇಂಟ್ಸ್ ಡೇ' (ಎಲ್ಲಾ ಸಂತರುಗಳ ದಿನ) ಮತ್ತು ನವೆಂಬರ್ 2ರಂದು 'ಆಲ್ ಸೋಲ್ಸ್ ಡೇ' (ಎಲ್ಲಾ ಆತ್ಮಗಳ ದಿನ) ಇರುತ್ತದೆ.

**ಬೌದ್ಧ ಪಂಥ:** ಚೀನಾದ ಬೌದ್ಧ ಮತ್ತು ಟಾವೊ ಸಂಪ್ರದಾಯದ ಪ್ರಕಾರ, ಚೀನೀ ಕ್ಯಾಲೆಂಡರ್‌ನ 7 ನೇ ತಿಂಗಳ 15ನೇ ದಿನದಂದು ಪೂರ್ವಜರಿಗೆ ಸಂಬಂಧಿಸಿದ 'ಘೋಸ್ಟ್ ಫೆಸ್ಟಿವಲ್' (ಭೂತಗಳ/ಮೃತರ ಹಬ್ಬ) ಅಥವಾ 'ಯುಲಾನ್ ಫೆಸ್ಟಿವಲ್' ಅನ್ನು ಆಚರಿಸಲಾಗುತ್ತದೆ. ಇದು ಆಗಸ್ಟ್‌ನಿಂದ ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ಬರುತ್ತದೆ. ಈ 7ನೇ ತಿಂಗಳನ್ನು 'ಘೋಸ್ಟ್ ಮಾಸ್' (ಭೂತಗಳ/ಮೃತರ ತಿಂಗಳು) ಎಂದು ಕರೆಯಲಾಗುತ್ತದೆ. ಈ ಸಮಯದಲ್ಲಿ 'ಸ್ವರ್ಗ ಮತ್ತು ನರಕದಲ್ಲಿರುವ ಪೂರ್ವಜರ ಆತ್ಮಗಳು ಭೂಮಿಗೆ ಬರುತ್ತವೆ' ಎಂದು ಅಲ್ಲಿ ನಂಬಲಾಗಿದೆ.

### ವಿವಿಧ ದೇಶಗಳಲ್ಲಿ ಪೂರ್ವಜರ ಆತ್ಮಕ್ಕಾಗಿ ಆಚರಿಸಲಾಗುವ ಸಾಂಪ್ರದಾಯಿಕ ಪದ್ಧತಿಗಳು

**ಯುರೋಪ್ ದೇಶಗಳಲ್ಲಿ ಪಿತೃಗಳ ಶಾಂತಿಗಾಗಿ ವಿವಿಧ ಆಚರಣೆಗಳು**

**ಬೆಲ್ಜಿಯಂ:** ನವೆಂಬರ್ 2ರಂದು 'ಆಲ್ ಸೋಲ್ಸ್ ಡೇ'ಗೆ ರಜೆ ಇರದ ಕಾರಣ, ಹಿಂದಿನ ದಿನ ಅಂದರೆ 'ಆಲ್ ಸೇಂಟ್ಸ್ ಡೇ'ಯಂದು ಸ್ಮಶಾನಕ್ಕೆ ಹೋಗಿ ಪ್ರಾರ್ಥನೆ ಮಾಡುತ್ತಾರೆ ಮತ್ತು ಮೃತದೇಹಗಳ ಸಮಾಧಿಗಳ ಮೇಲೆ ದೀಪವನ್ನು ಹಚ್ಚುತ್ತಾರೆ.



**ಪೋರ್ಚುಗಲ್:** ನವೆಂಬರ್ 2ರಂದು ಇಡೀ ಕುಟುಂಬ ಸ್ಮಶಾನಕ್ಕೆ ಹೋಗಿ ಪ್ರಾರ್ಥನೆ ಮಾಡುತ್ತದೆ. ಸಂಜೆ ಮಕ್ಕಳು ಸೇರಿ ಪ್ರತಿ ಮನೆಯ ಪ್ರವೇಶದ್ವಾರದ ಬಳಿ ನಿಲ್ಲುತ್ತಾರೆ. ಅಲ್ಲಿ ಅವರಿಗೆ ಕೇಕ್ ಮತ್ತು ಇತರ ಸಿಹಿ ತಿಂಡಿಗಳನ್ನು ನೀಡಲಾಗುತ್ತದೆ.

**ಜರ್ಮನಿ:** ಜರ್ಮನಿಯಲ್ಲಿ ಸಮಾಧಿಗಳನ್ನು ಬಣ್ಣಗಳಿಂದ ಅಲಂಕರಿಸಲಾಗುತ್ತದೆ, ನೆಲದ ಮೇಲೆ ಇದ್ದಿಲು ಹರಡಿ ಅದರ ಮೇಲೆ ಕೆಂಪು ಹಣ್ಣುಗಳಿಂದ ಚಿತ್ರಗಳನ್ನು ಬರೆಯಲಾಗುತ್ತದೆ ಮತ್ತು ಸಮಾಧಿಗಳನ್ನು ಹೂವಿನ ಮಾಲೆಗಳಿಂದ ಅಲಂಕರಿಸಲಾಗುತ್ತದೆ. ಕೊನೆಯಲ್ಲಿ ಎಲ್ಲರೂ ಸೇರಿ ಪ್ರಾರ್ಥನೆ ಮಾಡುತ್ತಾರೆ.

**ಫ್ರಾನ್ಸ್ :** ಫ್ರಾನ್ಸ್‌ನಲ್ಲಿ ಚರ್ಚ್‌ನ ರಾತ್ರಿ ಪ್ರಾರ್ಥನೆಯ ಕೊನೆಯಲ್ಲಿ ಜನರು ತಮ್ಮ ಪಿತೃಗಳ ಬಗ್ಗೆ ಚರ್ಚಿಸುವುದು ಅಗತ್ಯವೆಂದು ಪರಿಗಣಿಸಲಾಗುತ್ತದೆ. ನಂತರ ಅವರು ತಮ್ಮ ಮನೆಯ ಭೋಜನಗೃಹದಲ್ಲಿ ಒಂದು ಹೊಸ ಬಿಳಿ ಬಟ್ಟೆಯನ್ನು ಹರಡಿ ಅದರ ಮೇಲೆ ಶರಬತ್ತು, ಮೊಸರು, ಸಿಹಿತಿಂಡಿಗಳು ಇತ್ಯಾದಿಗಳನ್ನು ಇಟ್ಟು ಅಲಂಕರಿಸುತ್ತಾರೆ. ಅಲ್ಲದೆ, ಹತ್ತಿರದಲ್ಲಿ ಒಂದು ಅಗ್ನಿಪಾತ್ರೆಯಲ್ಲಿ ದೊಡ್ಡ ಕಟ್ಟಿಗೆಯ ತುಂಡನ್ನು ಉರಿಯಲು ಇಡುತ್ತಾರೆ. ನಂತರ ಜನರು ಮಲಗಲು ಹೋಗುತ್ತಾರೆ. ಸ್ವಲ್ಪ ಸಮಯದ ನಂತರ ವೃತ್ತಿಪರ ವಾದಕರು ವಾದ್ಯಗಳನ್ನು ನುಡಿಸಿ ಅವರನ್ನು ನಿದ್ರೆಯಿಂದ ಎಬ್ಬಿಸಿ ಮೃತ ಆತ್ಮಗಳ ಪರವಾಗಿ ಅವರಿಗೆ ಆಶೀರ್ವಾದ ನೀಡುತ್ತಾರೆ.

**ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಆಚರಿಸಲಾಗುವ ಸಾಂಪ್ರದಾಯಿಕ ಪದ್ಧತಿಗಳು:** ಲ್ಯಾಟಿನ್ ಅಮೆರಿಕಾದ ಬ್ರೆಜಿಲ್, ಅರ್ಜೆಂಟೀನಾ, ಬೊಲಿವಿಯಾ, ಚಿಲಿ, ಇಕ್ವೆಡಾರ್, ಪೆರು, ಉರುಗ್ವೆ ಮುಂತಾದ ದೇಶಗಳಲ್ಲಿ ನವೆಂಬರ್ 2ರಂದು ಜನರು ಸ್ಮಶಾನಕ್ಕೆ ಹೋಗಿ ತಮ್ಮ ಪೂರ್ವಜರು ಮತ್ತು ಸಂಬಂಧಿಕರಿಗೆ ಹೂವುಗಳನ್ನು ಅರ್ಪಿಸುತ್ತಾರೆ.

**ಮೆಕ್ಸಿಕೋ:** ಈ ದೇಶದಲ್ಲಿ ಇದನ್ನು 'ಮೃತರ ದಿನ' ಎಂದು ಕರೆಯಲಾಗುತ್ತದೆ. ಇದನ್ನು ಸ್ಥಳೀಯ ಭಾಷೆಯಲ್ಲಿ 'ಅಲ್ ದೆಒ ದೆ ಲಾಸ್ ಮುರ್ತಾಸ್' ಎಂದು ಕರೆಯುತ್ತಾರೆ. ಈ ಮೂಲ ಹಬ್ಬವು ಕ್ರಿಸ್ತ ಪೂರ್ವ 3000 ವರ್ಷಗಳ ಹಿಂದಿನ 'ಅಜ್ಟೆಕ್' ಮೂರ್ತಿಪೂಜಕರದ್ದೆಂದು ನಂಬಲಾಗಿದೆ. ಸ್ಪೇನ್ ಆಕ್ರಮಣ ಮಾಡಿ ಈ ಸಂಸ್ಕೃತಿಯನ್ನು ನಾಶಮಾಡಿತು. ಈಗಿನ ಸಮಯದಲ್ಲಿ ಇದು ಮೂಲ ಮೆಕ್ಸಿಕನ್, ಯುರೋಪಿಯನ್ ಮತ್ತು ಸ್ಪಾನಿಷ್ ಸಂಸ್ಕೃತಿಗಳ ಮಿಶ್ರ ಸಂಪ್ರದಾಯದಿಂದ ಆಚರಿಸಲ್ಪಡುತ್ತದೆ. ಇದರಲ್ಲಿ ನವೆಂಬರ್ 1ರಂದು ಬಾಲ್ಯದಲ್ಲಿ ಮೃತಪಟ್ಟವರಿಗಾಗಿ, ಮತ್ತು ನವೆಂಬರ್ 2 ರಂದು ವಯಸ್ಕ ಮೃತರಿಗಾಗಿ ಪ್ರಾರ್ಥನೆ ಮಾಡಲಾಗುತ್ತದೆ.

**ಏಷ್ಯಾ ಖಂಡದ ದೇಶಗಳಲ್ಲಿಯೂ ಪಿತೃಪೂಜೆಯ ಪದ್ಧತಿ:** ಏಷ್ಯಾ ಖಂಡದಲ್ಲಿ ಭಾರತವನ್ನು ಹೊರತುಪಡಿಸಿ ಇತರ ದೇಶಗಳಲ್ಲಿಯೂ ಪಿತೃಪೂಜೆಯ ಈ ಪದ್ಧತಿ ಒಂದಲ್ಲ ಒಂದು ರೂಪದಲ್ಲಿ ಪ್ರಚಲಿತದಲ್ಲಿದೆ. ಹೆಚ್ಚಿನ ಎಲ್ಲಾ ಸ್ಥಳಗಳಲ್ಲಿ ಪಿತೃಗಳನ್ನು ಆಹ್ವಾನಿಸುವಾಗ ವಿಶೇಷ ಆಚರಣೆಗಳನ್ನು ಮಾಡಲಾಗುತ್ತದೆ.

**ಚೀನಾ:** ಚೀನಾದ 'ಹಾನ್' ಸಂಪ್ರದಾಯದ ಪ್ರಕಾರ, ಕಳೆದ 2500 ವರ್ಷಗಳಿಂದ 'ಕ್ವಿಂಗ್ ಮಿಂಗ್', 'ಚಿಂಗ್ ಮಿಂಗ್' ಉತ್ಸವವನ್ನು ಪೂರ್ವಜರ ಸ್ಮರಣಾರ್ಥವಾಗಿ ಆಚರಿಸಲಾಗುತ್ತದೆ. ಚೀನಾದ ಸೂರ್ಯ ಪಂಚಾಂಗದ ಪ್ರಕಾರ ಈ ಕಾಲವನ್ನು ನಿರ್ಧರಿಸಲಾಗುತ್ತದೆ. ಸಾಮಾನ್ಯವಾಗಿ ಏಪ್ರಿಲ್ 4 ರಿಂದ 6ರ ಅವಧಿಯಲ್ಲಿ ಈ ಉತ್ಸವ ನಡೆಯುತ್ತದೆ.

**ಜಪಾನ್:** ಜಪಾನ್‌ನಲ್ಲಿ ಇದನ್ನು ಬಾನ್ ಫೆಸ್ಟಿವಲ್ ಎಂದು ಕರೆಯಲಾಗುತ್ತದೆ. 'ಬೌದ್ಧ-ಕನ್ಫ್ಯೂಷಿಯಸ್' ಸಂಪ್ರದಾಯದಲ್ಲಿ ಇದು ಪೂರ್ವಜರ ಗೌರವದ ಹಬ್ಬವಾಗಿ ಆಚರಿಸಲ್ಪಡುತ್ತದೆ. ಈ ಸಮಯದಲ್ಲಿ ಪೂರ್ವಜರ ಆತ್ಮಗಳು ಮೂಲ ಮನೆಯ ಪೂಜಾ ಸ್ಥಳಕ್ಕೆ ಬರುತ್ತವೆ ಎಂದು ನಂಬಲಾಗಿದೆ. ಆದ್ದರಿಂದ ಇಡೀ ಕುಟುಂಬವು ಮೂಲ ಮನೆಯಲ್ಲಿ ಸೇರಿ ಪೂರ್ವಜರ ಸಮಾಧಿಗಳನ್ನು ಸ್ವಚ್ಛಗೊಳಿಸಿ ಧೂಪಬತ್ತಿ ಹಚ್ಚುತ್ತಾರೆ. ಪ್ರತಿ ವರ್ಷ ಆಗಸ್ಟ್ 8 ರಿಂದ ಸೆಪ್ಟೆಂಬರ್ 7ರವರೆಗೆ ಈ ಹಬ್ಬವನ್ನು 3 ದಿನಗಳ ಕಾಲ ಆಚರಿಸಲಾಗುತ್ತದೆ.

**ಕಾಂಬೋಡಿಯಾ:** ಬೌದ್ಧ ಸಂಪ್ರದಾಯದ 'ಪಚೂಮ್ ಬೆನ್' ಅನ್ನು 'ಪೂರ್ವಜರ ದಿನ' ಎಂದೂ ಕರೆಯಲಾಗುತ್ತದೆ. ಖ್ಮೆರ್ ಸಂಪ್ರದಾಯದ ಕ್ಯಾಲೆಂಡರ್‌ನ 10ನೇ ತಿಂಗಳ 15ನೇ ದಿನದಂದು ಈ ವಿಧಿಯನ್ನು ಮಾಡಲಾಗುತ್ತದೆ. ಈ ದಿನ ಸಾರ್ವಜನಿಕ ರಜೆ ಘೋಷಿಸಲಾಗುತ್ತದೆ. ಧರ್ಮಶಾಸ್ತ್ರವನ್ನು ಅಧ್ಯಯನ ಮಾಡದೆ ಹಿಂದೂ ವಿರೋಧಿಗಳು ಶ್ರಾದ್ಧದಂತಹ ಪ್ರಮುಖ ವಿಧಿಗಳ ಮೇಲೆ ಆರೋಪ ಮಾಡುವುದು ಅಜ್ಞಾನದಿಂದ ಕೂಡಿದೆ ಹಿಂದೂ ವಿರೋಧಿಗಳು ಶ್ರಾದ್ಧದ ಬಗ್ಗೆ ಬ್ರಾಹ್ಮಣರನ್ನು ಗುರಿಯಾಗಿಸಿಕೊಂಡು ವಿವಿಧ ಆರೋಪಗಳನ್ನು ಮಾಡುತ್ತಾರೆ. ಶ್ರಾದ್ಧಾದಿ ವಿಧಿಗಳನ್ನು ಮಾಡಿಸಿಕೊಳ್ಳುವ ವಿಷಯದಲ್ಲಿ ಬ್ರಾಹ್ಮಣರ ಬಗ್ಗೆ ಉಲ್ಲೇಖವಿರುವುದನ್ನು ತಿಳಿದುಕೊಂಡರೆ ಈ ಆರೋಪಗಳ ಸುಳ್ಳುತನ ಬಯಲಾಗುತ್ತದೆ.

35 ಸಾವಿರ ಹಾಲು ಉತ್ಪಾದಕ ಸದಸ್ಯರಿಗೂ ಸಹ ಶೇ.75 ರ ಅನುದಾನದಲ್ಲಿ ವಿಮಾ ಸೌಲಭ್ಯವನ್ನು ಕಲ್ಪಿಸಿಕೊಡಲಾಗುವುದು

# ಹಾಲು ಹಾಕುವ ಕುಟುಂಬಗಳಿಗೆ 1 ಲಕ್ಷ ವಿಮೆ: ಬಾಲಚಂದ್ರ ಜಾರಕಿಹೊಳಿ

• ಉದಯವಾಹಿನಿ ಬೆಳಗಾವಿ

ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ದಿನನಿತ್ಯ ಹಾಲು ಪೂರೈಕೆ ಮಾಡುತ್ತಿರುವ ಹೈನುಗಾರ ರೈತರು ಮೃತಪಟ್ಟರೆ ಅವರ ಕುಟುಂಬ ವರ್ಗಕ್ಕೆ 1 ಲಕ್ಷ ಜೀವವಿಮಾ ಸೌಲಭ್ಯ ಜಾರಿ ಮಾಡಲು ತೀರ್ಮಾನಿಸಲಾಗಿದೆ' ಎಂದು ಬೆಮುಲ್ ಅಧ್ಯಕ್ಷ, ಶಾಸಕ ಬಾಲಚಂದ್ರ ಜಾರಕಿಹೊಳಿ ಪ್ರಕಟಿಸಿದರು.

ನಗರದಲ್ಲಿ ಬೆಳಗಾವಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ ಜರುಗಿದ 2024–25 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಒಕ್ಕೂಟಕ್ಕೆ ಹಾಲು ಪೂರೈಸುವ 35 ಸಾವಿರ ಹಾಲು ಉತ್ಪಾದಕ ಸದಸ್ಯರಿಗೂ ಸಹ ಶೇ.75ರ ಅನುದಾನದಲ್ಲಿ ವಿಮಾ ಸೌಲಭ್ಯವನ್ನು ಕಲ್ಪಿಸಿಕೊಡಲಾಗುವುದು.

ಈ ಹೊಸ ಯೋಜನೆಯ ಅನುಷ್ಠಾನದಿಂದ ಒಕ್ಕೂಟಕ್ಕೆ ವಾರ್ಷಿಕವಾಗಿ ಸುಮಾರು 50 ಲಕ್ಷದಿಂದ 60 ಲಕ್ಷ ಹೊರೆಯಾಗಲಿದೆ' ಎಂದು ಹೇಳಿದರು. ಒಕ್ಕೂಟದ ವ್ಯಾಪ್ತಿಯಲ್ಲಿ ಸುಮಾರು 609 ಸಂಘಗಳಿಂದ ದಿನಾಲು 2 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಇದನ್ನು 3 ಲಕ್ಷ ಲೀಟರ್‌ಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಕಳೆದ ಸಾಲಿನಲ್ಲಿ ಸುಮಾರು 13 ಕೋಟಿ ಲಾಭವಾಗಿದ್ದು, ಈ ಲಾಭಾಂಶವನ್ನು ಶೇ 60ರಷ್ಟು ರೈತರಿಗೆ ಕೃಷಿ ಸಲಕರಣೆಗಾಗಿ ಅನುದಾನವನ್ನು ಒಕ್ಕೂಟದಿಂದ ನೀಡಲಾಗುತ್ತಿದೆ. ರಬ್ಬರ್ ಮ್ಯಾಟ್, ಮೇವು ಕತ್ತರಿಸುವ ಯಂತ್ರ, ಹಾಲು ಕರೆಯುವ ಯಂತ್ರಗಳನ್ನು ರೈತರಿಗೆ ವಿತರಣೆಯನ್ನು ಮಾಡಲಾಗಿದೆ' ಎಂದು ಅವರು ಹೇಳಿದರು. 'ಪ್ರಸ್ತುತ ಸಾಲಿನಲ್ಲಿ ಒಕ್ಕೂಟದ ಪರವಾಗಿ ನೂರು ಪ್ರಾಂಚೈಸಿ ಮತ್ತು ಮಾರಾಟ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟು ಹಬ್ಬದ ದಿನವಾಗಿದ್ದ ಒಂದೇ ದಿನದಲ್ಲಿ 33 ನೂತನ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಿರುವುದು ಒಕ್ಕೂಟದ ಮೈಲುಗಲ್ಲಾಗಿದೆ' ಎಂದರು.

ಬೆಮುಲ್ ಆಡಳಿತ ಮಂಡಳಿಯ ಸದಸ್ಯರಾದ ಬಾಬು ಕಟ್ಟಿ, ಮಲ್ಲಪ್ಪ ಪಾಟೀಲ, ಡಾ.ಬಸವರಾಜ ಪರವಣ್ಣವರ, ಬಾಬುರಾವ ವಾಘಮೋಡೆ, ವಿರೂಪಾಕ್ಷಿ ಈಟಿ, ರಾಯಪ್ಪ ಡೂಗ, ಪ್ರಕಾಶ ಅಂಬೋಜಿ, ಮಹಾದೇವ ಬಿಳಿಕುರಿ, ಸಂಜಯ ಶಿಂತ್ರೆ, ರಮೇಶ ಅಣ್ಣಿಗೇರಿ, ಸದಪ್ಪ ವಾರಿ, ನಾಮ ನಿರ್ದೇಶಿತ ಸದಸ್ಯರು ವೇದಿಕೆ ಮೇಲಿದ್ದರು. ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀಕಾಂತ್ ವಾರ್ಷಿಕ ವರದಿ ಮಂಡಿಸಿದರು.


ಉದಯವಾಹಿನಿ ಚಿತ್ರ

ವಾರ್ಷಿಕ ಸಾಮಾನ್ಯ ಸಭೆ

**ಬ್ಯಾಂಕ್ ಆಡಳಿತ ಚುಕ್ಕಾಣಿ ಶತಸಿದ್ಧ**

**ಬಿಡಿಸಿಸಿ ಬ್ಯಾಂಕಿನ ಚುನಾವಣೆಯಲ್ಲಿ ನಾವು ಸ್ಪಷ್ಟ ಬಹುಮತ ಸಾಧಿಸುವ ಮೂಲಕ ಬ್ಯಾಂಕಿನ ಆಡಳಿತದ ಚುಕ್ಕಾಣಿ ಹಿಡಿಯುತ್ತೇವೆ' ಎಂದು ಬಾಲಚಂದ್ರ ಜಾರಕಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಬಿಡಿಸಿಸಿ 16ರ ಪೈಕಿ 12 ನಿರ್ದೇಶಕರನ್ನು ಗೆಲ್ಲಿಸಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ. ಆದಷ್ಟು ಅವಿರೋಧ ಆಯ್ಕೆಗೆ ಪ್ರಯತ್ನಿಸಲಾಗುವುದು' ಎಂದರು. ಹುಕ್ಕೇರಿ ತಾಲ್ಲೂಕಿನಲ್ಲಿ ಕೆಲ ಕಡೆಳಲ್ಲಿ ಗಲಾಟೆಯಾಗುತ್ತಿದೆ. ಅಲ್ಲಿ ಚುನಾವಣೆಯಾಗಲೇಬೇಕು ಎಂದು ನಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಗುತ್ತಿದೆ. ಸಹಕಾರ ಕ್ಷೇತ್ರದಲ್ಲಿ ರಾಜಕಾರಣ ಬರಬಾರದು. ಬಂದರೆ ಇಂತಹ ಗಲಾಟೆಗಳಾಗುತ್ತವೆ. ಹುಕ್ಕೇರಿ ಕಿತ್ತೂರು ಮತ್ತು ರಾಮದುರ್ಗದಲ್ಲಿ ಯಾರ ಮೇಲೆ ಪ್ರೀತಿ ಇದೆಯೋ ಅವರು ಗೆಲುವು ಸಾಧಿಸುತ್ತಾರೆ. ನಮ್ಮ ವಿರುದ್ಧ ರಮೇಶ ಕತ್ತಿ ಮಾಡಿರುವ ಆರೋಪಕ್ಕೆ ಹುಕ್ಕೇರಿಯಲ್ಲೇ ಉತ್ತರ ನೀಡುತ್ತೇನೆ. ಚುನಾವಣೆ ಬಂದ ಬಳಿಕ ರಾಜಕಾರಣ ಸರ್ಕಸ್ಸು ಇದ್ದೇ ಇರುತ್ತದೆ. ಹುಕ್ಕೇರಿ ತಾಲ್ಲೂಕಿನಲ್ಲಿ ಉಸ್ತುವಾರಿ ಸಚಿವರು ಹೋರಾಟ ಮಾಡುತ್ತಿದ್ದಾರೆ. ನಾವು ಸಮಾಧಾನದಿಂದ ಚುನಾವಣೆ ಮಾಡುತ್ತೇವೆ' ಎಂದರು.**

**ಬೆಮುಲ್ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ 400 ಕೋಟಿ ವಹಿವಾಟು ನಡೆಸಿದ್ದು ಮುಂದಿನ ಸಾಲಿನಲ್ಲಿ 500 ಕೋಟಿ ವ್ಯಾಪಾರ ವಹೀವಾಟು ನಡೆಸುವ ಗುರಿ ಹೊಂದಿದ್ದೇವೆ.**
**–ಬಾಲಚಂದ್ರ ಜಾರಕಿಹೊಳಿ ಅಧ್ಯಕ್ಷಬೆಮುಲ್**

## ಇಂದು ವಕೀಲರ ಸಂಘದ ಚುನಾವಣೆ ಅಧ್ಯಕ್ಷಸ್ಥಾನಕ್ಕೆ ತ್ರಿಕೋನ ಸ್ಪರ್ಧೆ: ಭಾರಿ ಪೈಪೋಟಿ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ವಕೀಲರ ಸಂಘದ ಅಧ್ಯಕ್ಷ ಚುನಾವಣೆಯು ಭಾರಿ ಪೈಪೋಟಿಯಿಂದ ಜಿದ್ದಾಜಿದ್ದಿನಿಂದ ತ್ರಿಕೋನ ಸ್ಪರ್ಧೆಯು ನಡೆಯಲಿದ್ದು ಶನಿವಾರ ಸೆ.20ರಂದು ಬೆಳಿಗ್ಗೆ 10ಗಂಟೆಯಿಂದ ಸಾಯಂಕಾಲ 04ಗಂಟೆಯವರೆಗೆ ವಕೀಲರ ಸಂಘದ ಸಭಾಂಗಣದಲ್ಲಿ ನಡೆಯಲಿದೆ, 4–30ರಿಂದ ಮತ ಎಣಿಕೆ ನಡೆಯಲಿದೆ,ವಕೀಲ ಮತದಾರರ ಸಂಖ್ಯೆ 91ಜನವಿದ್ದು ಮತದಾನಕ್ಕೆ ಗುರುತಿನ ಚೀಟಿ ತಪ್ಪದೆ ತಂದು ಮತದಾನ ಪ್ರಕ್ರಿಯಲ್ಲಿ ಪಾಲ್ಗೊಳಬೇಕು, ಮತದಾನದ ಸಮಯ ಮೊಬೈಲ್ ಫೋನ್ ಒಳಗಡೆ ಪ್ರವೇಶವಿಲ್ಲ ಎಂದು ಚುನಾವಣಾಧಿಕಾರಿ ರವೀಂದ್ರ, ಹೂವಿನಭಾವಿ ಮತ್ತು ಶಾಮರಾವ ದೇಗಲಮಡಿ ತಿಳಿಸಿದ್ದಾರೆ.

**ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆಯ ಅಭ್ಯರ್ಥಿಗಳು :-**
1) ಶರಣುಪಾಟೀಲ ಮೋತಕಪಳ್ಳಿ,2) ಶಶಿಕಾಂತ ಅಡಕಿ,3) ಸಂಜುಕುಮಾರ ಮೇತ್ರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡುತ್ತಿದ್ದಾರೆ ಈ ಮೂವರಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ಬಹಳಷ್ಟು ಜಿದ್ದಾಜಿದ್ದಿನಿಂದ ಕೂಡಿದೆ, ಹಗಲಿರುಳು ಎನ್ನದೆ ಮತದಾರರು ವಕೀಲರಿಗೆ ಭೇಟಿಯಾಗಿ ಮತಯಾಚನೆ ಮಾಡುತ್ತಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಿಕಾರ್ಜುನ ರಾಮತೀರ್ಥ ಅವಿರೋಧವಾಗಿ ಆಯ್ಕೆಯಾಗಿದ್ದಾರೆ,ಸಹ ಕಾರ್ಯದರ್ಶಿ ಸ್ಥಾನಕ್ಕೆ ದೇವೀಂದ್ರಪ್ಪ ಜಾಬೀನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ಖಜಾಂಚಿ ಸ್ಥಾನಕ್ಕೆ ಸುನೀಲಕುಮಾರ ಸೋಲಾಪೂರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಎರಡು ನಾಮಪತ್ರ ಸಲ್ಲಿಕೆಯಾಗಿದ್ದು ಹಣಮಂತ ಹಿರೇಮನಿ ಮತ್ತು ಸೂರ್ಯಕಾಂತ ಕರಣಿಕರ್ ಇಬ್ಬರ ಮಧ್ಯೆದಲ್ಲಿ ಚುನಾವಣೆ ನಡೆಯಲಿದೆ ಅಧ್ಯಕ್ಷ ಸ್ಥಾನಕ್ಕೆ ಮತ್ತು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು ಉಳಿದ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿರುವ ಅಭ್ಯರ್ಥಿಗಳಿಗೆ ವಿದ್ಯಾವಂತರು,ಪ್ರಜ್ಞಾವಂತ ವಕೀಲ ಮತದಾರರು ಯಾರಿಗೆ ಗೆಲುವಿನ ಮಾಲೆ ಹಾಕಲಿದ್ದಾರೆ ಎಂಬುವುದು ಕಾದುನೋಡಬೇಕಾಗಿದೆ.



## ಮಕ್ಕಳ ಶಿಕ್ಷಣ, ಶಾಲೆ ಅಭಿವೃದ್ಧಿಗೆ ಪಾಲಕರ ಕಾಳಜಿ ಮುಖ್ಯ

• ಉದಯವಾಹಿನಿ ಕುನ್ನಟಗಿ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುನ್ನಟಗಿ ಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಅಂಗವಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕುನ್ನಟಗಿ. ಕಲ್ಯಾಣ ಕರ್ನಾಟಕ ವಿಮೋಚನಾ ದಿನದಂದು ರಮೇಶ ಕುನ್ನಟಗಿ ಇವರಿಂದ ಶಾಲೆಯ ಅಭಿರುದ್ದಿಗೆ ಬ್ಯಾಟರಿ ಇನ್ವೆಟರ್ ಸ್ಪೀಕರ್ ಮೈಕ್ ದೇಣಿಗೆಯಾಗಿ ಶಾಲೆಗೆ ನೀಡಿದ್ದಾರೆ.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ರಮೇಶ ಕುನ್ನಟಗಿ ಯವರು ಮಾತನಾಡಿ ಶಾಲೆ ಶಿಕ್ಷಣ ಚನ್ನಾಗಿದೆ ಶಿಕ್ಷಕರು ಚನ್ನಗಿದ್ದಾರೆ ಆದರೆ ಮಕ್ಕಳ ತಂದೆ ತಾಯಿಗಳು ಮಕ್ಕಳ ಮೇಲೆ ಕಾಳಜಿ ವಹಿಸಬೇಕು ಆಗಿದ್ದಲ್ಲಿ ಮಾತ್ರ ಶಿಕ್ಷಣ ಮತ್ತು ಶಾಲೆ ಅಭಿರುದ್ದಿ ಆಗುವುದಕ್ಕೆ ಸಾಧ್ಯ ಎಂದರು. ಶಾಲೆಯ ಮುಖ್ಯ ಶಿಕ್ಷಕರು ಸಿಸ್ತಿನ ಕಾಪಾಡಿಕೊಳ್ಳಲು ಮುಂದಾಗಬೇಕು ಎಂದು ಮಾತನಾಡಿದರು. ಜ್ಯೋತಿ ಶಿಕ್ಷಕಿ ಮಾತನಾಡಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು, ಈ ಕಾರ್ಯಕ್ರಮದಲ್ಲಿ ಪೀರ್ ಹುಸೇನ್ ಸಾಬ್.ಗ್ರಾಂ ಪಂಚಾಯಿತಿ ಸದಸ್ಯರು . ಪರಸಪ್ಪ ಗ್ರಾಂ ಪಂ ಸದಸ್ಯರು ನಿರುಪಾದಿ ಹೊರಗಿನ ಮನೆ ಸದಸ್ಯಸರು, ಪಂಪಪತಿ ಮಡಿವಾಳ ಉಪಾಧ್ಯಕ್ಷರು, ರಫೀಕ್ ತೋಟದ ಸದಸ್ಯರು ನಾಗರಾಜ ಸದಸ್ಯರು ಹನುಮಂತ ದೊಡ್ಡಮನಿ ಶಿಕ್ಷಣ ಪ್ರೇಮಿಗಳು ಸಣ್ಣ ಹನುಮಂತ ಇನ್ನಿತರರು ಇದ್ದರು.


ಉದಯವಾಹಿನಿ ಚಿತ್ರ

## ಸಿಎಂ ಜಿಲ್ಲಾ ಪ್ರವಾಸ: ಪೂರ್ವಸಿದ್ಧತಾ ಸಭೆ

• ಉದಯವಾಹಿನಿ ಗದಗ

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೆಪ್ಟೆಂಬರ್ 20 ರಂದು ಗದಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳದ್ದು ಶಿಷ್ಟಾಚಾರದನ್ವಯ ನೋಡಲ್ ಅಧಿಕಾರಿಗಳನ್ನು ನಿಯಮಿಸಲಾಗಿದ್ದು, ಅಧಿಕಾರಿಗಳು ತಮಗೆ ವಹಿಸಿದ ಕಾರ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೆಪ್ಟೆಂಬರ್ 20 ರ ಜಿಲ್ಲಾ ಪ್ರವಾಸ ಕಾರ್ಯಕ್ರಮದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಪೂರ್ವ ಸಿದ್ಧತಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖ್ಯಮಂತ್ರಿಗಳು ಸೆಪ್ಟೆಂಬರ್ 20 ರಂದು ಬೆಳಿಗ್ಗೆ 11.25 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಆವರಣ ಹೆಲಿಪ್ಯಾಡ್‌ಗೆ ಆಗಮಿಸುವರು. ನಂತರ ಅಲ್ಲಿಂದ ಗದಗ ತಾಲ್ಲೂಕು ಕುರುಬರ ಸಂಘ ( ರಿ) ಗದಗ ವತಿಯಿಂದ ಆಯೋಜಿಸಿರುವ ತಾಲ್ಲೂಕು ಸಂಘದ ರಜತ ಮಹೋತ್ಸವ ಸವಿನೆನಪಿಗಾಗಿ ಸ್ಮರಣ ಸಂಚಿಕೆ ಬಿಡುಗಡೆ ರಾಜ್ಯ ಮಟ್ಟದ ಕನಕೋತ್ಸವ ಹಾಗೂ ಸಂಘ ಜೀವಿ ಶ್ರೀ ಫಕೀರಪ್ಪ ಹೆಬಸೂರ ಅವರ ಅಭಿನಂದನಾ ಗ್ರಂಥಾ ಸಮರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ನಂತರ ಶ್ರೀ ರಾಕೇಶ ಸಿದ್ಧರಾಮಯ್ಯ ಐಟಿಐ ಕಾಲೇಜ್, ಅಲ್ಲಿಂದ ಜವಳ ಗಲ್ಲಿಯ ಇಂದಿರಾವನಕ್ಕೆ ಭೇಟಿ ನೀಡುವ ಕಾರ್ಯಕ್ರಮವಿದೆ. ನಂತರ ಮುಖ್ಯಮಂತ್ರಿಗಳು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ಕಾರ್ಯಕ್ರಮವಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು. ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಅವರು ಮಾತನಾಡಿ ಮುಖ್ಯಮಂತ್ರಿಗಳ ಪ್ರವಾಸ ಕಾರ್ಯಕ್ರಮದಲ್ಲಿ ಇಲಾಖೆಯಿಂದ ಸೂಕ್ತ ಬಂದೋಬಸ್ತ್‌ಗೆ ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ಅಗ್ನಿಶಾಮಕ ವಾಹನ, ವಿದ್ಯುತ್ ಪೂರೈಕೆ, ಊಟದ ವ್ಯವಸ್ಥೆ, ವಾಹನಗಳ ಪೂರೈಕೆ, ವೇದಿಕೆ ಸುರಕ್ಷತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು.


ಉದಯವಾಹಿನಿ ಚಿತ್ರ

## ಗರ್ಭಿಣಿ ಮತ್ತು ಬಾಣಂತಿಯರು ಉತ್ತಮ ಆರೋಗ್ಯಕ್ಕಾಗಿ ಆಯುಷ್ ಪದ್ಧತಿ ಅಳವಡಿಸಿಕೊಳ್ಳುವಂತೆ ಡಾ. ವಿಜಯಲಕ್ಷ್ಮಿ, ಆಯುಷ್ ಆಡಳಿತ ವೈದ್ಯಾಧಿಕಾರಿ ಸಲಹೆ.

• ಉದಯವಾಹಿನಿ, ಚಿತ್ರದುರ್ಗ

ಗರ್ಭಿಣಿ, ಬಾಣಂತಿಯರ ಆರೈಕೆಗಾಗಿ ಆಯುರ್ವೇದವು ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. ಆಯುರ್ವೇದದ ಪ್ರಕಾರ, ಆರೋಗ್ಯಕರ ಗರ್ಭಧಾರಣೆ ಎಂದರೆ ಕೇವಲ ದೈಹಿಕ ಆರೋಗ್ಯ ಮಾತ್ರವಲ್ಲ, ಮಾನಸಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಅಂಶಗಳ ಸಮತೋಲನ ಕೂಡ ಆಗಿದೆ.ಎಂದು ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ವಿಜಯಲಕ್ಷ್ಮಿ ತಿಳಿಸಿದ್ದಾರೆ.

ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆ ಅಡಿಯಲ್ಲಿ ಜಿಲ್ಲಾಡಳಿತ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ ವತಿಯಿಂದ ಇತ್ತೀಚಿಗೆ ನಗರದ ಒನಕೆ ಓಬವ್ವ ಸ್ಟಡಿಯಂ ಹತ್ತಿರದ ಬಾಲ ಭವನದಲ್ಲಿ ಹಮ್ಮಿಕೊಂಡಿದ್ದ 8ನೇ ವರ್ಷದ ಪೋಷಣ್ ಮಾಸಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಆಯುರ್ವೇದ ಗರ್ಭಿಣಿಯರಿಗೆ ಮತ್ತು ಮಗುವಿಗೆ ಉತ್ತಮ ಆರೋಗ್ಯ ಮತ್ತು ಬೆಳವಣಿಗೆಗಾಗಿ ಆಯುಷ್ ಪದ್ಧತಿಯಲ್ಲಿ ನೀಡುವ ಒಂದು ವಿಶೇಷ ಆರೈಕೆಯ ಕ್ರಮವಾಗಿದೆ ಇದರಲ್ಲಿ ಪೌಷ್ಟಿಕ ಆಹಾರ, ಯೋಗ ಮತ್ತು ಪ್ರಾಣಾಯಾಮ, ಮನಸ್ಸಿಗೆ ಶಾಂತಿ ನೀಡುವ ಆರಾಮದಾಯಕ ಜೀವನಶೈಲಿಯಾಗಿದೆ.

ಆರೋಗ್ಯಕರ ಗರ್ಭಧಾರಣೆಗೆ ಸರಿಯಾದ ಆಹಾರ ಪದ್ಧತಿ ಮುಖ್ಯ. ಆಯುರ್ವೇದವು ಪ್ರತಿ ತಿಂಗಳಿಗನುಗುಣವಾಗಿ ಯಾವ ಆಹಾರ ಸೇವಿಸಬೇಕು ಎಂಬುದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಹಾಲು, ತುಪ್ಪ, ಬೆಣ್ಣೆ, ತಾಜಾ ಹಣ್ಣು ಮತ್ತು ತರಕಾರಿಗಳನ್ನು ಸೇವಿಸಲು ಸಲಹೆ ನೀಡಲಾಗುತ್ತದೆ.

ನುರಿತ ವೈದ್ಯರ ಸಲಹೆಯ ಮೇರೆಗೆ ನಿಯಮಿತವಾಗಿ ಮಸಾಜ್ ಮಾಡಿಸಿಕೊಳ್ಳುವುದರಿಂದ ಗರ್ಭಿಣಿಯ ಸ್ನಾಯುಗಳು ವಿಶ್ರಾಂತಿ ಪಡೆಯುತ್ತವೆ ಮತ್ತು ರಕ್ತ ಪರಿಚಲನೆ ಸುಧಾರಿಸುತ್ತದೆ. ಇದಕ್ಕೂ ಮೊದಲು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರಶ್ಮಿ ಎಸ್ ಮರಡಿ ಗರ್ಭಿಣಿ, ಬಾಣಂತಿಯರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ವೈದ್ಯರ ಸೂಚನೆ ಮೇರೆಗೆ ಉತ್ತಮ ಆರೋಗ್ಯ ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು. ವಕೀಲರ ಸಂಘದ ಅಧ್ಯಕ್ಷ ಎಚ್.ಎಸ್.ಮಹೇಶ್ವರಪ್ಪ,ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಅಭಿನವ್,ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆರ್.ಪ್ರಕಾಶ್, ಜಿಲ್ಲಾ ನಿರೂಪಣಾಧಿಕಾರಿ ಡಿ.ಮಂಜುನಾಥ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪ್ರೇಮ್ ಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೀಣಾ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಮಂಜುಳಾ, ಅನುರಾಧ, ಅಂಗನವಾಡಿ ಕಾರ್ಯಕರ್ತರು ಇದ್ದರು.



ಉದಯವಾಹಿನಿ ಚಿತ್ರ

**ಆಯುರ್ವೇದದ ಅಡುಗೆಗಳು ಬಾಣಂತಿಯರ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ. ಗರ್ಭಿಣೆಯರು ಹೆರಿಗೆ ನಂತರ ಕಳೆದುಕೊಂಡ ಶಕ್ತಿಯನ್ನು ಮರಳಿ ಪಡೆಯಲು ಮತ್ತು ಗರ್ಭಕೋಶವನ್ನು ಶುದ್ಧೀಕರಿಸಲು ಔಷಧಿಗಳನ್ನು ನೀಡಲಾಗುತ್ತದೆ. ಅದಕ್ಕೆ ಯಾವುದೇ ಅಡ್ಡ ಪರಿಣಾಮಗಳು ಇಲ್ಲದ ಆಯುಷ್ ಪದ್ಧತಿಯನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆರೋಗ್ಯಕರ ಜೀವನ ಸಾಗಿಸಬಹುದಾಗಿದೆ.**
**–ಡಾ. ವಿಜಯಲಕ್ಷ್ಮಿ**

## ಮೆಕ್ಕೆಜೋಳ: 4 ಸಾವಿರ ಹೆಕ್ಟೇರ್ ಇಳಿಕೆ

• ಉದಯವಾಹಿನಿ, ಶಿರಸಿ

ಉ. ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಮಳೆಯ ಪ್ರಮಾಣ ಅಧಿಕವಾಗಿರುವ ಕಾರಣಕ್ಕೆ ಪ್ರಸಕ್ತ ವರ್ಷ ಮೆಕ್ಕೆಜೋಳ ಬಿತ್ತನೆಗೆ ಬೆಳೆಗಾರರು ಉತ್ಸಾಹ ತೋರದ ಕಾರಣ 4 ಸಾವಿರ ಎಕರೆಗೂ ಹೆಚ್ಚಿನ ಮೆಕ್ಕೆಜೋಳ ಕ್ಷೇತ್ರ ತೋಟಗಾರಿಕೆ ಹಾಗೂ ಇನ್ನಿತರ ಬೆಳೆಗಳ ಪ್ರದೇಶವಾಗಿ ಮಾರ್ಪಾಟಾಗಿದೆ.

ಜಿಲ್ಲೆಯಲ್ಲಿ ಅಡಿಕೆ ಹಾಗೂ ಶುಂಠಿಗೆ ಪೂರಕ ವಾತಾವರಣ ಇರುವುದರಿಂದ ತೋಟಗಾರಿಕೆ ಬೆಳೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಭತ್ತ, ಮೆಕ್ಕೆಜೋಳಕ್ಕೆ ಸರಿಯಾಗಿ ಬೆಲೆ ಸಿಗದೇ ಇರುವುದರಿಂದ ಹತಾಶರಾಗಿರುವ ಬಹುಪಾಲು ರೈತರು ಇತ್ತೀಚಿನ ವರ್ಷಗಳಲ್ಲಿ ಇವುಗಳೆಡಗಿನ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಪ್ರಸ್ತುತ ವರ್ಷ ಮಳೆಗಾಲ ವ್ಯಾಪಕವಾಗಿದ್ದ ಕಾರಣ ಮೆಕ್ಕೆಜೋಳ ಬೆಳೆಗಾರರು ಕೂಡ ಈ ಬೆಳೆಯಿಂದ ಹಿಂದೆ ಸರಿದಿದ್ದಾರೆ. ಕೆಲವು ಬೆಳೆಗಾರರು ಅಡಿಕೆಯನ್ನು ನಾಟಿ ಮಾಡಿದರೆ, ಬಹುತೇಕ ಬೆಳೆಗಾರರು ಶುಂಠಿ ನಾಟಿಗೆ ಭೂಮಿಯನ್ನು ಬಾಡಿಗೆ ಆಧಾರದಲ್ಲಿ ನೀಡಿದ್ದಾರೆ.

'ಶಿರಸಿಯ ಬನವಾಸಿ ಹೋಬಳಿಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವರ್ಷ ಶೇಕಡ 65ರಷ್ಟು ಮೆಕ್ಕೆಜೋಳ ಕ್ಷೇತ್ರ ಇಳಿಕೆಯಾಗಿದೆ. ಸಿದ್ದಾಪುರದಲ್ಲಂತೂ ಒಬ್ಬ ರೈತ ಕೂಡ ಈ ಬೆಳೆ ಬೆಳೆಸಲು ಆಸಕ್ತಿ ತೋರಿಲ್ಲ. ಅತಿ ಹೆಚ್ಚು ಮೆಕ್ಕೆಜೋಳ ಬೆಳೆಯುವ ಹಳಿಯಾಳ ತಾಲ್ಲೂಕೊಂದರಲ್ಲೇ 1,200 ಹೆ. ಪ್ರದೇಶ ಇಳಿಕೆಯಾಗಿದ್ದು, ಬಹುತೇಕ ಬೆಳೆಗಾರರು ಕಬ್ಬು ಬೆಳೆಯತ್ತ ಆಕರ್ಷಿತರಾಗಿದ್ದಾರೆ. ಮುಂಡಗೋಡದಲ್ಲಿ ಅಂದಾಜು 200 ಹೆ. ಇಳಿದಿದೆ. ದಾಂಡೇಲಿಯಲ್ಲಿ ಮಾತ್ರ ಕಳೆದ ಸಾಲಿನಷ್ಟೇ ಕ್ಷೇತ್ರ ಉಳಿದುಕೊಂಡಿದೆ ಎಂಬುದು ಕೃಷಿ ಇಲಾಖೆ ಅಧಿಕಾರಿಗಳ ಮಾಹಿತಿ.


ಉದಯವಾಹಿನಿ ಚಿತ್ರ

**ಮಲೆನಾಡು ವಾತಾವರಣ ಮೆಕ್ಕೆಜೋಳ ಬೆಳೆಗೆ ಪೂರಕವಾಗಿದ್ದರೂ ಕಳೆದ 5 ವರ್ಷಕ್ಕೆ ಹೋಲಿಸಿದರೆ ಇಳುವರಿಯಲ್ಲಿ ಕುಸಿತ ಉಂಟಾಗಿದೆ. ವಿವಿಧ ರೋಗವೂ ಕಾಡುತ್ತಿದ್ದು, ವಾರಕ್ಕೆ 3 ಬಾರಿ ಔಷಧ ಸಿಂಪಡಣೆ ಮಾಡಬೇಕು. ಇದು ಕೂಡ ರೈತರಿಗೆ ಹೊರೆಯಾಗಿ ಪರಿಣಮಿಸುತ್ತಿದೆ. ಇದೆಲ್ಲದರ ನಡುವೆ ಸರಿಯಾದ ಬೆಂಬಲ ಬೆಲೆ ಸಿಗುತ್ತಿಲ್ಲ. ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ನಡುವೆ ಮಳೆಯೂ ಹೆಚ್ಚಾದ ಕಾರಣ ಮೆಕ್ಕೆಜೋಳ ಬಿತ್ತನೆಯ ಆಸಕ್ತಿ ಕಡಿಮೆ ಆಗಿದೆ. –ರೈತ ವೀರಭದ್ರ ಗೌಡ**

## ನಗರಸಭೆಯಿಂದ 12 ಗೂಡಂಗಡಿಗಳ ತೆರವು


ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾರವಾರ

ನಗರದಲ್ಲಿನ ಮುಖ್ಯ ರಸ್ತೆಗಳ ಬದಿಯಲ್ಲಿ ಬಳಕೆ ಮಾಡದೆ ಖಾಲಿ ಬಿಡಲಾಗಿದ್ದ 12 ಗೂಡಂಗಡಿಗಳನ್ನು ನಗರಸಭೆ ಅಧಿಕಾರಿಗಳು ತೆರವುಗೊಳಿಸಿದರು. ಇಲ್ಲಿನ ಎಂ.ಜಿ.ರಸ್ತೆ, ಗ್ರೀನ್ ಸ್ಟ್ರೀಟ್ ಸೇರಿದಂತೆ ವಿವಿಧೆಡೆಯಲ್ಲಿ ಹಲವು ತಿಂಗಳಿಂದ ಬಾಗಿಲು ತೆರೆಯದೆ ಇದ್ದ ಗೂಡಂಗಡಿಗಳನ್ನು ನಗರಸಭೆ ವಾಹನದ ಮೂಲಕ ತಂದು ನಗರಸಭೆ ಆವರಣದಲ್ಲಿ ಇರಿಸಲಾಯಿತು.

ಸ್ವಚ್ಛತೆ ಕಾಯ್ದುಕೊಳ್ಳವ ಸಲುವಾಗಿ ಗೂಡಂಗಡಿಗಳ ಮೇಲೆ ಕ್ರಮ ಕೈಗೊಳ್ಳಬೇಕು, ಅನಧಿಕೃತ ಗೂಡಂಗಡಿಗಳನ್ನು ತೆರವುಗೊಳಿಸಬೇಕು ಎಂದು ಈಚೆಗೆ ನಡೆದಿದ್ದ ನಗರಸಭೆ ಸಾಮಾನ್ಯ ಸಭೆಯಲ್ಲಿ ಸದಸ್ಯರು ಒತ್ತಾಯಿಸಿದರು. ಮಧ್ಯಪ್ರದೇಶ ರಾಜ್ಯದ ಇಂಧೋರ್ ಮಾದರಿಯಲ್ಲಿ ನಗರದಲ್ಲಿಯೂ ಸ್ವಚ್ಛತೆ ಕ್ರಮಗಳನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ. ಕೆಲವು ಅಂಗಡಿಕಾರರು ಪರವಾನಗಿ ಪಡೆಯದೆ ಗೂಡಂಗಡಿ ಇಟ್ಟಿದ್ದಾರೆ. ಕೆಲವು ಕಡೆ ಗೂಡಂಗಡಿ ಅಳವಡಿಸಿ ಅದನ್ನು ಬಳಸದೆ ಹಾಗೆಯೇ ಬಿಡಲಾಗಿದೆ. ಅವುಗಳನ್ನು ಮೊದಲ ಹಂತದಲ್ಲಿ ತೆರವುಗೊಳಿಸಲಾಗಿದೆ. ಹಂತ ಹಂತವಾಗಿ ಉಳಿದ ಗೂಡಂಗಡಿಕಾರರಿಗೂ ಎಚ್ಚರಿಕೆ ನೀಡಲಾಗುವುದು' ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

## ಮಿನಿ ನ್ಯೂಸ್

### ನೀರಾವರಿ, ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ

• ಉದಯವಾಹಿನಿ ಹಂದಿಗುಂದ

ಕುಡಚಿ ಮತಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಅನೇಕ ಸವಾಲುಗಳನ್ನು ಎದುರಿಸಿ ಕ್ಷೇತ್ರದ ಅಭಿವೃದ್ಧಿಗೆ ಗಮನ ಹರಿಸಲಾಗುವುದು. ನೀರಾವರಿ ಹಾಗೂ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದ್ದೇನೆ' ಎಂದು ಶಾಸಕ ಮಹೇಂದ್ರ ತಮ್ಮಣ್ಣವರ ಹೇಳಿದರು.

ಸಮೀಪದ ಮರಾಕುಡಿಯಲ್ಲಿ ರೈತ ಸಭಾಭವನ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಠಡಿ ಮತ್ತು ಲಕ್ಷ್ಮೀ ದೇವಸ್ಥಾನದ ಮುಂದೆ ಸಮುದಾಯ ಭವನ ನಿರ್ಮಾಣಕ್ಕೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಗ್ರಾಮ ಪಂಚಾಯಿತಿ ಸದಸ್ಯ ತಿಮ್ಮಣ್ಣ ಪಾಟೀಲ, ಕೆಂಪಣ್ಣ ಬಳಗಾರ, ನಾಡಗೌಡ ಪಾಟೀಲ, ಮಲ್ಲಪ್ಪ ಅಂಗಡಿ, ಕುಡಚಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರದೀಪ ಹಾಲ್ಗುಣಿ, ಪಿಡಿಒ ಬರಮು ನಾಗನೂರ, ನೀರಾವರಿ ಇಲಾಖೆಯ ಎಂಜಿನಿಯರ್ ಮಹಾಂತೇಶ ಯಡಪ್ಪನವರ, ಶಿರಹಟ್ಟಿ ಇದ್ದರು.

### ಶರಾವತಿ ಪಂಪ್ಸ್ ಸ್ಟೋರೇಜ್‌ಗೆ ವಿರೋಧ: ಪ್ರತಿಭಟನೆ

• ಉದಯವಾಹಿನಿ ತ್ಯಾಗರ್ತಿ

ಶರಾವತಿ ಪಂಪ್ಸ್ ಸ್ಟೋರೇಜ್ ಯೋಜನೆ ಅನುಷ್ಠಾನದಿಂದ ಅರಣ್ಯ ನಾಶದ ಜೊತೆಗೆ ರೈತರಿಗೂ ಸಂಕಷ್ಟ ಉಂಟಾಗುತ್ತದೆ ಎಂದು ಬಿಜೆಪಿ ಮುಖಂಡ ಮತ್ತು ಜಿ.ಪಂ. ಮಾಜಿ ಸದಸ್ಯ ರತ್ನಾಕರ ಹೊನಗೋಡು ಹೇಳಿದರು. ಆನಂದಪುರದ ಮುಖ್ಯ ಬಸ್ ನಿಲ್ದಾಣದ ವೃತ್ತದಲ್ಲಿ ಮಂಗಳವಾರ ಶರವಾತಿ ಪಂಪ್ಸ್ ಸ್ಟೋರೇಜ್ ಯೋಜನೆ ವಿರುದ್ಧ ನೆಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಇದೊಂದು ಅವೈಜ್ಞಾನಿಕ ಯೋಜನೆಯಾಗಿದ್ದು, ಈ ಯೋಜನೆಯಿಂದ ರೈತರು ಫಲವತ್ತಾದ ಕೃಷಿ ಭೂಮಿಯನ್ನು ಕಳೆದುಕೊಂಡು ಬೀದಿಗೆ ಬೀಳುವಂತಾಗುತ್ತದೆ. ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕಾಮಗಾರಿ ನೆಪದಲ್ಲಿ ದೊಡ್ಡ ಮೊತ್ತದ ಹಣ ಲೂಟಿ ಮಾಡಲು ರೂಪಿಸಿದ ತಂತ್ರವಾಗಿದೆ.

ಇದೊಂದು ನಿಷ್ಪ್ರಯೋಜಕ ಯೋಜನೆಯಾಗಿದ್ದು, ನೂರಾರು ರೈತರೊಂದಿಗೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುತ್ತೇವೆ ಎಂದರು.

ಬಿಜೆಪಿ ಶಕ್ತಿಕೇಂದ್ರದ ಅಧ್ಯಕ್ಷ ಶಾಂತಕುಮಾರ ಗೌಡ, ಪ್ರಮುಖರಾದ ಜಿ.ಪಂ. ಮಾಜಿ ಸದಸ್ಯ ಧರ್ಮಪ್ಪ ಅಂದಾಸುರ, ಹಿರಣ್ಯಪ್ಪ ಸಂಗಣ್ಣನಕೆರೆ, ರವಿಕುಮಾರ ಗೌತಮಪುರ, ಧನರಾಜ್ ಭೈರಾಪುರ, ಗಂಗಾಧರ ಕೆಂಜಗಾಪುರ ಇನ್ನಿತರರು ಇದ್ದರು.

### ಗಾಂಜಾ ಪ್ರಕರಣ: ಆರೋಪಿ ಬಂಧನ

• ಉದಯವಾಹಿನಿ ಭದ್ರಾವತಿ

ಗಾಂಜಾ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯದ ಆದೇಶದಂತೆ ನಗರದ ಕೂಲಿ ಬ್ಲಾಕ್ ಶೆಡ್ ನಿವಾಸಿ ಆದಿಲ್ ಬಾಷಾನನ್ನು ಬಂಧಿಸಲಾಗಿದೆ. ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ ಕಾಯ್ದೆ ಅಡಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹೊರಡಿಸಿದ್ದ ಸ್ಪೆಷಲ್ ಸಿ 248 /22 ಕಲಂ 90(20)(9)(20) ಪ್ರಕರಣದಲ್ಲಿ ಆರೋಪಿ ಎಳಿ ಆದಿಲ್ ಬಾಷಾನನ್ನು ಬಂಧಿಸಲು ವಾರೆಂಟ್ ಹೊರಡಿಸಲಾಗಿತ್ತು.


ಈ ಹಿನ್ನೆಲೆಯಲ್ಲಿ ನ್ಯೂ ಟೌನ್ ಪೊಲೀಸ್ ಠಾಣೆ ಉಪನಿರೀಕ್ಷಕ ರಮೇಶ್ ರವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆರೋಪಿಯನ್ನು ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಹಸ್ತಾಂತರ ಮಾಡಲಾಗಿದೆ.

### ಬೇಡಿಕೆ ಈಡೇರಿಕೆಗೆ ರೈತ ಸಂಘ ಆಗ್ರಹ

• ಉದಯವಾಹಿನಿ ಕನಕಗಿರಿ

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹಸಿರು ಸೇನೆ ಹಾಗೂ ರೈತ ಸಂಘಟನೆಯ ಪದಾಧಿಕಾರಿಗಳು ಸಾವಿತ್ರಿ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ಅಧ್ಯಕ್ಷ ಗಣೇಶ ರೆಡ್ಡಿ ಮಾತನಾಡಿ ಎಪಿಎಂಸಿಯ ನೀಲ ನಕಾಶೆ ಪ್ರಕಾರವಾಗಿ ಎಪಿಎಂಸಿ ಸುತ್ತಲೂ ನಿರ್ಮಿಸಬೇಕು. ಹಳೆಯ ಎಪಿಎಂಸಿ ಹೊರಗೋಡೆಯನ್ನು ತೆರವುಗೊಳಿಸಿದವರ ವಿರುದ್ಧ ಕಾನೂನು ಪ್ರಕಾರ ಶಿಸ್ತು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಬ್ಲೂ ಪ್ರಿಂಟ್ ನಿಯಮ ಉಲ್ಲಂಘನೆ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ, ಎಂದು ದೂರಿದರು. ಎಪಿಎಂಸಿಯ ಪರವಾನಿಗಿ ಪಡೆದು ಕೃಷಿಯೇತರ ಚಟುವಟಿಕೆಗಳಿಗೆ ಮಳಿಗೆಗಳನ್ನು ಬಾಡಿಗೆ ನೀಡಿರುವವರ ವಿರುದ್ಧ ಏಕೆ ಕ್ರಮ ಜರುಗಿಸಿಲ್ಲ ಎಂದು ಪ್ರಶ್ನಿಸಿದರು.


ಉದಯವಾಹಿನಿ ಚಿತ್ರ

## 24 ಬೈಕ್ ಕದ್ದಿದ ಕಳ್ಳನ ಬಂಧನ

• ಉದಯವಾಹಿನಿ, ಜಮಖಂಡಿ

ರಾಜ್ಯ ವಿವಿಧೆ ಜಿಲ್ಲೆಗಳಲ್ಲಿ ಬೈಕ್ ಕಳ್ಳತನ ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಜಮಖಂಡಿ ಶಹರ ಠಾಣೆ ಪೋಲಿಸರು ಆತನಿಂದ 24 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಜಮಖಂಡಿ ನಗರದಲ್ಲಿ ದಿನಾಂಕ: 07.08.2025 ರಂದು ಸಿದ್ದಾಪುರ ಗ್ರಾಮದ ಯಲ್ಲಪ್ಪ ಕಾಗವಾಡ ತನ್ನ ಬೈಕ ಕಳತನ ಆಗಿದೆ ಎಂದು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆದಾರದ ಮೇಲೆ ಪೊಲೀಸ್ ತಂಡವು ತನಿಖೆ ಪ್ರಾರಂಬಿಸಿ ಆಪಾದಿತನಾದ ತಾಲ್ಲೂಕಿನ ಮಧರಖಂಡಿ ಗ್ರಾಮದ ನಿವಾಸಿ ಲಕ್ಕಪ್ಪ ಮಾದರ ಈತನನ್ನು ವಶಕ್ಕೆ ಪಡೆದು ಜಮಖಂಡಿ ಸೇರಿದಂತೆ, ಮುಧೋಳ, ಲೋಕಾಪೂರ, ಬನಹಟ್ಟಿ ಹಾಗೂ ಬೆಳಗಾವಿ ಜಿಲ್ಲೆ ಮೂಡಲಗಿ, ಮುರಗೋಡ, ಸವದತ್ತಿ ಮತ್ತು ವಿಜಯಪೂರ ಜಿಲ್ಲೆಯ ಗಾಂಧಿಚೌಕ್, ಬಬಲೇಶ್ವರ, ಬಸವನ ಬಾಗೇವಾಡಿ ಠಾಣಾ ವ್ಯಾಪ್ತಿಯಲ್ಲಿ ಕಳುವಾದ ಅಂದಾಜು 11 ಲಕ್ಷ ಕಿಮ್ಮತ್ತಿನ, ವಿವಿಧ ಕಂಪನಿಯ ಒಟ್ಟು 24 ಮೋಟಾರ ಸೈಕಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



ಉದಯವಾಹಿನಿ ಚಿತ್ರ

ಮುಂದಿನ ವಿಧಾನಸಭೆ ಚುನಾವಣೆಯ ಸಿದ್ಧತೆಯ ಭಾಗವಾಗಿ ಸತೀಶ್ ಜಾರಕಿಹೊಳಿ ಸ್ವಂತ ಹೆಲಿಕಾಪ್ಟರ್ ಖರೀದಿಸಿದ್ದಾರೆ

# ಸಂಚಾರಕ್ಕೆ ಸ್ವಂತ ಹೆಲಿಕಾಪ್ಟರ್ ಖರೀದಿಸಿದ ಸತೀಶ್ ಜಾರಕಿಹೊಳಿ

• ಉದಯವಾಹಿನಿ, ಬೆಳಗಾವಿ

ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ನೂತನ ಬೆಂಗಳೂರು ಸಮೀಪದ ಜಕ್ಕೂರು ಏರೋಡ್ರೋಮ್‌ನಲ್ಲಿ ನೂತನ ಹೆಲಿಕಾಪ್ಟರ್ ಪರಿಶೀಲಿಸಿದ ಅವರು, ಶೀಘ್ರ ನೂತನ ಹೆಲಿಕಾಪ್ಟರ್ ನಮ್ಮೊಂದಿಗೆ ಹಾರಾಟಕ್ಕೆ ಸಿದ್ಧವಾಗಲಿದೆ, ಎಂದು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ, ಫೋಟೋ ಹಾಗೂ ವಿಡಿಯೋ ಹಂಚಿಕೊಂಡಿದ್ದಾರೆ. ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸುನೀಲ್ ಹನಮಣ್ಣರ, ಅಲಿ ಗೊರವನಕೊಳ್ಳ ಇದ್ದರು.

**ವಿಶೇಷ ಹೆಲಿಕಾಪ್ಟರ್:** ಆಧುನಿಕ ಸುರಕ್ಷಾ ವ್ಯವಸ್ಥೆ ಹೊಂದಿರುವ ಡಬಲ್ ಎಂಜಿನ್‌ನ ಹೆಲಿಕಾಪ್ಟರ್ ಇದಾಗಿದ್ದು, ಐವರು ಪ್ರಯಾಣಿಕರು ಮತ್ತು ಇಬ್ಬರು ಪೈಲಟ್ ಪ್ರಯಾಣಿಸಬಹುದಾಗಿದೆ. ಚಾಪರ್ ಸೀಟ್ ಸೌಲಭ್ಯವಿದ್ದು ಅಪಘಾತದ ಸಂದರ್ಭದಲ್ಲಿ ಪ್ರಯಾಣಿಕರಿಗೆ ಸುರಕ್ಷತೆ ಒದಗಿಸುತ್ತದೆ. ಸುಧಾರಿತ ವೈರ್‌ಲೆಸ್ ಸಂವಹನ ವ್ಯವಸ್ಥೆ ಹೊಂದಿದೆ.

**ಮುಂದಿನ ಚುನಾವಣೆಗೆ ಸಿದ್ಧತೆ?:** ಉತ್ತರ ಕರ್ನಾಟಕದಲ್ಲಿ ಸ್ವಂತ ಹೆಲಿಕಾಪ್ಟರ್ ಹೊಂದಿರುವ ಮೊದಲ ರಾಜಕಾರಣಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸತೀಶ ಜಾರಕಿಹೊಳಿ, ಸಿಎಂ ಸಿದ್ದರಾಮಯ್ಯ ಆಪ್ತ ಬಳಗದಲ್ಲಿ, ಅದರಲ್ಲೂ ಅಹಿಂದ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ರಾಜ್ಯಾದ್ಯಂತ ಪಕ್ಷ ಸಂಘಟನೆ ಸೇರಿದಂತೆ ಮುಂಬರುವ ವಿಧಾನಸಭೆ ಚುನಾವಣೆ ಸಿದ್ಧತೆಗೆ ಅವರು ನೂತನ ಹೆಲಿಕಾಪ್ಟರ್ ಖರೀದಿಸಿದ್ದಾರೆ ಎನ್ನಲಾಗುತ್ತಿದೆ.

**ಸಿದ್ದರಾಮಯ್ಯ ಸ್ವಾಗತಕ್ಕೆ ವೇದಿಕೆ ಸಜ್ಜು:** ಗದಗ ತಾಲ್ಲೂಕು ಕುರುಬರ ಸಂಘದ ರಜತ ಮಹೋತ್ಸವ ಸಮಾರಂಭಕ್ಕೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗುವ ಕಾರ್ಯಕ್ರಮದ ಮುಖ್ಯ ವೇದಿಕೆ ಭವ್ಯವಾಗಿ ಸಜ್ಜುಗೊಂಡಿದೆ. ಇಲ್ಲಿನ ಕನಕ ಭವನದಲ್ಲಿರುವ ನೂತನವಾಗಿ ನಿರ್ಮಿಸಿರುವ 'ರಾಕೇಶ ಸಿದ್ದರಾಮಯ್ಯ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಕೊನೆಯ ಹಂತದ ಸಿದ್ಧತೆಗಳು ಪೂರ್ಣಗೊಂಡಿವೆ. ಪೊಲೀಸರು ಸಹ ಭದ್ರತಾ ತಪಾಸಣೆ ಕೈಗೊಂಡಿದ್ದಾರೆ.

ಸಿಎಂ ಸಿದ್ದರಾಮಯ್ಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನಿಂದ ಹುಬ್ಬಳ್ಳಿಗೆ ಆಗಮಿಸಿ, ರಸ್ತೆ ಮಾರ್ಗವಾಗಿ ಗದಗ ನಗರದ ಕನಕ ಭವನಕ್ಕೆ ಆಗಮಿಸಲಿದ್ದಾರೆ. ಗದಗದಲ್ಲಿ ಮುಖ್ಯಮಂತ್ರಿ ಸಾಗುವ ರಸ್ತೆಗಳ ದುರಸ್ತಿ, ಸ್ವಚ್ಛತೆಗೆ ನಗರಸಭೆ ಅಧಿಕಾರಿಗಳು ಮುಂದಾಗಿದ್ದು, ಪೌರ ಕಾರ್ಮಿಕರು ಹಗಲಿರುಳು ಶ್ರಮಿಸುತ್ತಿದ್ದಾರೆ. ಕುರುಬರ ಸಂಘದ ರಜತ ಮಹೋತ್ಸವ ಜೊತೆಗೆ ಸ್ಮರಣ ಸಂಚಿಕೆ ಬಿಡುಗಡೆ, ಸಂಘಜೀವಿ ಫಕೀರಪ್ಪ ಹೆಬಸೂರ ಅವರ ಅಭಿನಂದನಾ ಗ್ರಂಥ ಬಿಡುಗಡೆ, ರಾಜ್ಯಮಟ್ಟದ ಕನಕೋತ್ಸವ ಸಹ ನಡೆಯಲಿದೆ.

ಮುಖ್ಯಮಂತ್ರಿಗಳ ಜೊತೆಗೆ ಕಾನೂನು ಸಚಿವ ಎಚ್.ಕೆ. ಪಾಟೀಲ್, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಕಾರ್ಮಿಕ ಸಚಿವ ಸಂತೋಷ ಲಾಡ್, ರಾಜ್ಯ ಪಂಚ ಯೋಜನಾ ಗ್ಯಾರಂಟಿ ಅನುಷ್ಠಾನ ಸಮಿತಿಯ ರಾಜ್ಯಾಧ್ಯಕ್ಷ ಎಚ್.ಎಂ. ರೇವಣ್ಣ, ರೋಣ ಶಾಸಕ ಜಿ.ಎಸ್ . ಪಾಟೀಲ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಸಚಿವರು, ಶಾಸಕರು ಮತ್ತು ಗಣ್ಯರು ಭಾಗವಹಿಸಲಿದ್ದಾರೆ.


ಉದಯವಾಹಿನಿ ಚಿತ್ರ

ಮುಂದಿನ ಚುನಾವಣೆಗೆ ಸಿದ್ಧತೆ?

**• ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯಿಂದ ಹೊಸ ಹೆಲಿಕಾಪ್ಟರ್ ಖರೀದಿ**
**• ಈ ಹೆಲಿಕಾಪ್ಟರ್ ಡಬಲ್ ಎಂಜಿನ್ ಹೊಂದಿದ್ದು, ಐವರು ಪ್ರಯಾಣಿಕರು, ಇಬ್ಬರು ಪೈಲಟ್‌ಗಳನ್ನು ಸಾಗಿಸುವ ಸಾಮರ್ಥ್ಯ ಹೊಂದಿದೆ**
**• ಮುಂದಿನ ವಿಧಾನಸಭೆ ಚುನಾವಣೆಯ ಸಿದ್ಧತೆಯ ಭಾಗವಾಗಿ ಸತೀಶ್ ಜಾರಕಿಹೊಳಿ ಸ್ವಂತ ಹೆಲಿಕಾಪ್ಟರ್ ಖರೀದಿಸಿದ್ದಾರೆ**

## ದಿನ ಭವಿಷ್ಯ

| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ:** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು.

**ವೃಷಭ:** ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ, ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

**ಮಿಥುನ:** ಕೌಟುಂಬಿಕ ಒತ್ತಡ ನಿಮ್ಮ ಗಮನ ಬೇರೆಡೆಗೆ ಸೆಳೆಯದಿರಲಿ. ಕೆಟ್ಟ ಸಮಯಗಳು ನಮಗೆ ಇನ್ನೂ ಹೆಚ್ಚನ್ನು ನೀಡುತ್ತವೆ. ಸ್ವಾನುಕಂಪದಲ್ಲಿ ಸಮಯ ವ್ಯರ್ಥ ಮಾಡದೇ ಜೀವನದ ಪಾಠ ಕಲಿಯಲು ಪ್ರಯತ್ನಿಸಿ.

**ಕರ್ಕಾಟಕ:** ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ನಿಮಗೆ ಅರ್ಥವಾಗಬಹುದು.

**ಸಿಂಹ:** ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ.

**ಕನ್ಯಾ:** ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದ ಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆಯುಂಟು ಮಾಡುತ್ತದೆ. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

**ತುಲಾ:** ಉತ್ತಮ ಆರೋಗ್ಯ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ನಿಮ್ಮನ್ನು ಸಕ್ರಿಯಗೊಳಿಸುತ್ತದೆ. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ.

**ವೃಶ್ಚಿಕ:** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಸುತ್ತಲಿನವರನ್ನು ಆಕರ್ಷಿಸಬಹುದು. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ.

**ಧನಸ್ಸು:** ನಿಮ್ಮ ಮಗುವಿನಂಥ, ಮುಗ್ಧ ವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ನಿಮ್ಮ ಕಿಟಕಿಯಲ್ಲಿ ಹೂವಿಡುವ ಮೂಲಕ ನಿಮ್ಮ ಪ್ರೀತಿಯನ್ನು ತೋರಿಸಿ.

**ಮಕರ:** ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇತರರಿಗೆ ನಿಮ್ಮ ಸಮಯ ನೀಡಲು ಒಳ್ಳೆಯ ದಿನ. ಕಣ್ಣುಗಳು ಎಂದಿಗೂ ಸುಳ್ಳು ಹೇಳುವುದಿಲ್ಲ.

**ಕುಂಭ:** ನಿಮ್ಮ ಅನಿರೀಕ್ಷಿತ ಸ್ವಭಾವ ನಿಮ್ಮ ವೈವಾಹಿಕ ಸಂಬಂಧವನ್ನು ಹಾಳು ಮಾಡಲು ಬಿಡಬೇಡಿ. ಇದನ್ನು ತಡೆಯುವುದನ್ನು ಖಚಿತಪಡಿಸಿಕೊಳ್ಳಿ, ಇಲ್ಲದಿದ್ದಲ್ಲಿ ನೀವು ನಂತರ ವಿಷಾದಪಡಬಹುದು.

**ಮೀನ:** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ, ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ – ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ.

### ಇತರೆಡೆಗಳಲ್ಲಿ ಇಂಥ ಘಟನೆ ನಡೆದಿದ್ದು, ಅದನ್ನು ಪತ್ತೆ ಹಚ್ಚುವ ಕೆಲಸ ಕಾಂಗ್ರೆಸ್ ಸಮಿತಿಯ ಪ್ರಚಾರ ಸಮಿತಿ ಮಾಡಲಿದೆ

# ಮತಕಳ್ಳತನ ಪತ್ತೆ ಹಚ್ಚಲು ಕಾಂಗ್ರೆಸ್ ಪ್ರಚಾರ ಸಮಿತಿ ಸಿದ್ಧ: ಸೊರಕೆ

• ಉದಯವಾಹಿನಿ ಬೀದರ್

ರಾಜ್ಯದಲ್ಲಿ ಮತಕಳ್ಳತನ ನಡೆದಿರುವುದು ಜಗಜ್ಜಾಹಿರವಾಗಿದ್ದು, ಇದಕ್ಕೆ ಕಳೆದ ವರ್ಷ ನಡೆದ ಲೋಕಸಭೆ ಚುನಾವಣೆಯಲ್ಲಿ ಮಹಾದೇವಪುರ ವಿಧಾನಸಭೆ ಕ್ಷೇತ್ರದಲ್ಲಿ ಒಂದು ಲಕ್ಷಕ್ಕೂ ಅಧಿಕ ಮತದಾರರು ಪತ್ತೆ ಹಚ್ಚಲಾಗಿದೆ.

ರಾಜ್ಯದ ಇತರೆಡೆಗಳಲ್ಲಿ ಇಂಥ ಘಟನೆ ನಡೆದಿದ್ದು, ಅದನ್ನು ಪತ್ತೆ ಹಚ್ಚುವ ಕೆಲಸ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಚಾರ ಸಮಿತಿ ಮಾಡಲಿದೆ ಎಂದು ಕೆ.ಪಿ.ಸಿ.ಸಿ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷರು ಹಾಗೂ ಮಾಜಿ ಸಚಿವ ವಿನಯಕುಮಾರ ಸೊರಕೆ ತಿಳಿಸಿದರು.


☛ ಉದಯವಾಹಿನಿ ಚಿತ್ರ

**ಕಡಿವಾಣಕ್ಕಾಗಿ ಜನರಲ್ಲಿ ಜಾಗೃತಿ**

> ನಾವು ಗ್ಯಾರಂಟಿ ಯೋಜನೆ ಜಾರಿಗೆ ತಂದಾಗ ವಿರೋಧ ಪಕ್ಷದವರು ಬಹಳಷ್ಟು ಟೀಕೆ ಟಿಪ್ಪಣಿ ಮಾಡಿದರು. ಆದರೆ ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯನವರು 4.9 ಲಕ್ಷ ಕೋಟಿ ಬಜೆಟ್ ಮಂಡಿಸುವ ಮೂಲಕ ವಿರೋಧ ಪಕ್ಷದವರಿಗೆ ಉತ್ತರ ನೀಡಿದ್ದಾರೆ. ಅದರಲ್ಲಿ 55 ಸಾವಿರ ಕೋಟಿ ಗ್ಯಾರಂಟಿಗಾಗಿ ವಿನಿಯೋಗಿಸಿ, ಉಳಿದ ಹಣ ಅಭಿವೃದ್ಧಿಗಾಗಿ ವಿನಿಯೋಗಿಸಲಾಗಿದೆ. ಕೇಂದ್ರ ಸರ್ಕಾರ ಘೋಷಿಸಿರುವಂತೆ ತಲಾ ಆದಾಯದಲ್ಲಿ 2.4 ಲಕ್ಷ ತಲಾ ಆದಾಯ ತೋರಿಸಿದೆ. ಇದು ಇಡೀ ದೇಶದಲ್ಲೆ ನಂರ್ವನ್ ಆಗಿ ಕಂಡು ಬಂದಿದೆ. ಜಿ.ಡಿ.ಪಿಯಲ್ಲಿ 8, ವಿದೇಶಿ ಬಂಡವಾಳ ಹುಡಿಕೆಯಲ್ಲಿ ಇಡೀ ದೇಶದಲ್ಲಿ ಮೂರನೇ ಸ್ಥಾನದಲ್ಲಿರುವುದು ಹೆಮ್ಮೆ ಹಾಗೂ ಅಭಿಮಾನದ ಸಂಗತಿ. ಇಷ್ಟೆಲ್ಲ ಬೆಳವಣಿಗೆ ಕಂಡರೂ ಬಿಜೆಪಿಯವರಿಗೆ ನಮ್ಮನ್ನು ವಿರೋಧಿಸುವುದೇ ಒಂದು ಕೆಲಸವಾಗಿ ಬಿಟ್ಟಿದೆ ಎಂದು ಕುಟುಕಿದರು. –ವಿನಯಕುಮಾರ ಸೊರಕೆ, ಮಾಜಿ ಸಚಿವ

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಕಳೆದ ವರ್ಷ ಮಹಾರಾಷ್ಟ್ರದಲ್ಲಿ ನಡೆದ ವಿಧಾನ ಸಭೆ ಚುನಾವಣೆಯಲ್ಲಿ ಮತಗಳ್ಳತನ ನಡೆದಿರುವುದಕ್ಕೆ ಅನೇಕ ಸಾಕ್ಷಾಧಾರಗಳು ದೊರೆತಿವೆ. ತಾನು ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಚುನಾವಣೆ ಉಸ್ತುವಾರಿ ಆಗಿದ್ದಾಗೂ ಅಲ್ಲಿ ಬೋಗಸ್ ಮತದಾರರ ಯಾದಿ ಕಂಡು ಬಂದಿತ್ತು. ಈ ವರ್ಷ ಬಿಹಾರದಲ್ಲಿ ಚುನಾವಣೆ ನಡೆಯುತ್ತಿದ್ದು, ನಮ್ಮ ನಾಯಕರಾದ ರಾಹುಲ ಗಾಂಧಿಯವರು ಸುಮಾರು 800 ಕಿ.ಮೀಟರ್ ಪಾದಯಾತ್ರೆ ಹಮ್ಮಿಕೊಂಡು ಮತಗಳ್ಳತನದ ಕಡಿವಾಣಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆಂದು ಸ್ಪಷ್ಟಪಡಿಸಿದರು.

ನಮ್ಮ ರಾಜ್ಯದಲ್ಲಿ ಮುಂಬರುವ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಎಲೆಕ್ಟ್ರಾನಿಕ್ ಮತಯಂತ್ರ ಬದಲು ಬ್ಯಾಲೆಟ್ ಪೇಪರ್ ಮೂಲಕವೇ ಮತದಾನ ಮಾಡಲು ನಮ್ಮ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಜಿಲ್ಲಾ ಹಾಗೂ ಬ್ಲಾಕ್ ಮಟ್ಟದಲ್ಲಿ 23 ಜನ ಕಾರ್ಯಕರ್ತರ ತಂಡ ರಚಿಸಲಾಗುತ್ತಿದೆ. ಬ್ಲಾಕ್ ಮಟ್ಟದ ಸಮಿತಿಗಳಲ್ಲಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಎಲ್ಲಾ ಸಮುದಾಯಗಳ ಕಾರ್ಯಕರ್ತರನ್ನು ನೇಮಿಸಿಕೊಳ್ಳಲಾಗುತ್ತದೆ. ಅದರಲ್ಲಿ ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದವರಿಗೆ ಆದ್ಯತೆ ನೀಡಲಾಗುತ್ತದೆ. ಪ್ರಾಂತವಾರು ಕಾರ್ಯಕರ್ತರನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ರಾಜ್ಯದಲ್ಲಿ ಒಟ್ಟು 59 ಸಾವಿರ ಬುತ್‌ಗಳಿದ್ದು, ಪ್ರತಿ ಬೂತ್‌ನಿಂದ ತಲಾ ಇಬ್ಬರು ಕಾರ್ಯಕರ್ತರನ್ನು ನೇಮಿಸಿ ಅವರನ್ನು ಡಿಜಿಟಲ್ ಯುತ್ ಎಂದು ಕರೆಯಲಾಗುತ್ತದೆ. ರಾಜ್ಯದಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕ ಡಿಜಿಟಲ್ ಯುತ್‌ಗಳು ಪಕ್ಷದ ಸಾಮಾಜಿಕ ಜಾಲತಾಣ ಕಾರ್ಯನಿರ್ವಹಿಸುವರು. ಕೆ.ಪಿ.ಸಿ.ಸಿ ಪ್ರಚಾರ ಸಮಿತಿಯ ಉಪಾಧ್ಯಕ್ಷ ಭೀಮಣ್ಣ ಮೇಟಿ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಅಮೃತರಾವ ಚಿಮಕೊಡೆ, ಭಾಲ್ಕಿ ಬ್ಲಾಕ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹಣಮಂತರಾವ ಚವ್ಹಾಣ, ಬೂಡಾ ಸದಸ್ಯ ಮಹಮ್ಮದ್ ಸಮಿ, ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಾರ್ಜ್ ಫನಾರ್ಂಡಿಸ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

**ಜಿಲ್ಲಾ ಮಟ್ಟದಲ್ಲಿ ವಿಶೇಷ ತರಬೇತಿ**

ಪ್ರಚಾರ ಸಮಿತಿಯಿಂದ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ವಿಶೇಷ ತರಬೇತಿ ನೀಡುವ ಉದ್ದೇಶ ಹೊಂದಿದ್ದೇವೆ. ಒಟ್ಟಾರೆ ನಮ್ಮ ಸಮಿತಿ ಕೇವಲ ಚುನಾವಣೆಗೆ ಸೀಮಿತವಾಗಿರದೆ ಇಡೀ 5 ವರ್ಷ ಪ್ರಚಾರ ಕಾರ್ಯ ಮಾಡುತ್ತದೆ. ಈಲ್ಲಾ ಮಟ್ಟದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರೆ ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಜಿಲ್ಲೆಯಲ್ಲಿ ಹಾಗೂ ಆಯಾ ಬ್ಲಾಕ್ ಮಟ್ಟದಲ್ಲಿ ಸಾರ್ವಜನಿಕರಿಗೆ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಚಾರ ಹಾಗೂ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದ್ದೇವೆ ಎಂದರು.

## ಒಳಮೀಸಲಾತಿ ವಿಚಾರದಲ್ಲಿ ತಾರತಮ್ಯ: ರಾಮಕೃಷ್ಣ ಭಜಂತ್ರಿ


☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಸಿಂಧನೂರು

ಸಿದ್ದರಾಮಯ್ಯ ಸರ್ಕಾರದ ಒಳ ಮೀಸಲಾತಿ ಅವೈಜ್ಞಾನಿಕ ಯಿಂದ ಕೂಡಿದ್ದು ಎಂದು ಬಂಜಾರ. ಭೋವಿ. ಮತ್ತು ಕೊರಮ. ಕೊರಚ ಮೀಸಲಾತಿ ಒಕ್ಕೂಟದ ತಾಲ್ಲೂಕು ವತಿಯಿಂದ ನ್ಯಾಯಕ್ಕಾಗಿ ನಗರದ ಎಪಿಎಂಸಿ ಗಣೇಶ ದೇವಸ್ಥಾನದಿಂದ ಕಾಲು ಜಾಥಾ ಮೂಲಕ ಗಾಂಧಿ ಸರ್ಕಲ್ ಮಾನವ ಸರಪಳಿ ಹಾಕಿ ಸರ್ಕಾರದ ವಿರುದ್ಧ ಧಿಕ್ಕಾರ ಧಿಕ್ಕಾರ ಎಂದು ಘೋಷಣೆ ಕೂಗುತ್ತ ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟಿಸಿದರು. ನಂತರ ಪ್ರತಿಭಟನೆ ಒಕ್ಕೂಟದ ಸಂಚಾಲಕರು ರಾಮಕೃಷ್ಣ ಭಜಂತ್ರಿ ಅವರು ನಮ್ಮ ಬಂಜಾರ. ಭೋವಿ ಕೊರಮ. ಕೊರಚ. ಸಮುದಾಯ ಶತಮಾನಗಳಿಂದ ಶೋಷಣೆಗೆ ಒಳಗಾಗಿರುವ ಸಮುದಾಯಗವೆ ಈಗಾಗಿ ಸಾಮಾಜಿಕ ಆರ್ಥಿಕ ಮುಖ್ಯವಾಹಿನಿಗೆ ಬಾರದೆ ವಂಚನೆ ಗೊಳಗಾಗಿದ್ದಾರೆ. ರಾಜ್ಯ ಸರ್ಕಾರ ವಿರುದ್ಧ ಆಗ್ರಹಿಸಿದರು. ರಾಜ್ಯ ಸರ್ಕಾರವು ಮೇಲ್ಕಂಡ ನಾಲ್ಕು ಸಮುದಾಯಗಳ ಜೊತೆಗೆ ಅಲೆಮಾರಿ ಸಮುದಾಯದ 59 'ಜಾತಿಗಳನ್ನು ಒಗ್ಗೂಡಿಸಿ ಒಟ್ಟಾರೆ 63 ಜಾತಿಗಳಿಗೆ ಕೇವಲ ಶೇ. 5 ರಷ್ಟು ಮೀಸಲಾತಿ ನೀಡಿ ಸ್ಪಷ್ಟ ಜಾತಿಗಳು ಎಂದು ಹಣೆಪಟ್ಟಿ ಕಟ್ಟಿರುವದು ಅಸಂವಿಧಾನಿಕ ವಾಗಿದ್ದು, ಮೀಸಲಾತಿಯಿಂದ ಹೊರದಬ್ಬುವ ಹುನ್ನಾರ ನಡೆಸಿದ್ದಾರೆ ಎಂದು ದೂರಲಾಗಿದೆ.

ಈ ಸಂದರ್ಭದಲ್ಲಿ. ರವಿ ಚವ್ಹಾಣ ಹೊಳೆಯಪ್ಪ. ಶ್ರೀನಿವಾಸ. ಹನಮಂತ ಕೃಷ್ಣಪ್ಪ ರಾಠೋಡ. ಲಕ್ಷ್ಮಣ ಸಾಲುಗಂದ. ಹಾಗೂ ಮಹಿಳೆಯರು ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

> ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಸರಕಾರವು ಹಿಂದಿನ ಮಾಧುಸ್ವಾಮಿಯವರ ಉಪ ಸಮಿತಿಯ ಶಿಫಾರಸ್ಸುಗಳನ್ನು ಕೈಬಿಟ್ಟು, ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ಸಮಿತಿಯನ್ನು ರಚನೆ ಮಾಡಿತು. ನಂತರ ನಾಗಮೋಹನ ದಾಸ್ ಸಮಿತಿಯ ಶಿಫಾರಸ್ಸನ್ನು ಕೈಬಿಟ್ಟು ಸಚಿವರ ಸಂಪುಟ ಸಮಿತಿಯಲ್ಲಿ ಮೇಲಿನ ಎರಡು ಪ್ರವರ್ಗಗಳ ಗುಂಪುಗಳನ್ನು ಒಗ್ಗೂಡಿಸಿ ಕೇವಲ ಶೇ 5 ರನ್ನು ( ಹಿಂದಿನ ಸರ್ಕಾರದ ಶಿಫಾರಸ್ಸಿನಿಂದ ಶೇ. 5.5. ರಷ್ಟು ಆಗುತ್ತಿತ್ತು) ಮೀಸಲಾತಿಯನ್ನು ಒದಗಿಸಿರುವದು ಈ ನಾಲ್ಕೂ ಸಮುದಾಯಕ್ಕೆ ಮಾಡಿರುವ ಘೋರ ಅನ್ಯಾಯವಾಗಿದೆ ಎಂಬ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.
> –ಭಾಗ್ಯ ಮುಖೇಶ್ ಒಕ್ಕೂಟದ ಮಹಿಳಾ ಸಂಚಾಲಕಿ

## ರಸ್ತೆಗುಂಡಿಗಳಿಗೆ ಮಣ್ಣು ತುಂಬಿಸಲೂ ದುಡ್ಡಿಲ್ಲ

• ಉದಯವಾಹಿನಿ ಪುತ್ತೂರು

ಪುತ್ತೂರು ವಿಧಾನಸಭಾ ವ್ಯಾಪ್ತಿಯಲ್ಲಿ 1650 ಕಿಮೀ ಗ್ರಾಮೀಣ ರಸ್ತೆಗಳಿವೆ. ಇದರಲ್ಲಿ 99 ಕಿಮೀ ರಸ್ತೆ ಸಂಚಾರಕ್ಕೆ ಯೋಗ್ಯವಾಗಿಲ್ಲ. ಲೋಕೋಪಯೋಗಿ ಇಲಾಖೆಯಡಿ 174 ಕಿಮೀ ಹಾಗೂ 85 ಕಿಮೀ ರಾಜ್ಯ ಹೆದ್ದಾರಿ ಇದೆ. ಈ ರಸ್ತೆಗಳು ಹೊಂಡಮಯವಾಗಿವೆ. ರಾಜ್ಯ ಸರ್ಕಾರ ದಿವಾಳಿಯಾಗಿದ್ದು, ಈ ರಸ್ತೆ ಹೊಂಡಗಳಿಗೆ ಮಣ್ಣು ಹಾಕಲೂ ದುಡ್ಡಿಲ್ಲ ಎಂದು ಮಾಜಿ ಶಾಸಕ ಸಂಜೀವ ಮಠಂದೂರು ಹೇಳಿದರು.



ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಈ ರಸ್ತೆಗಳ ದುರಸ್ಥಿಗಾಗಿ ವಿಧಾನಸಭೆಯಲ್ಲಿ 8 ಕೋಟಿ ಅನುದಾನ ಕೇಳಲಾಗಿದ್ದರೂ ಚಿಕ್ಕಾಸು ಬಿಡುಗಡೆಗೊಂಡಿಲ್ಲ. ಪ್ರತೀ ವರ್ಷದಂತೆ ನಿರ್ವಹಣಾ ವೆಚ್ಚ ಕಿಮೀಗೆ 1 ಲಕ್ಷ ಮಾತ್ರ ಬಂದಿದೆ. ಅದನ್ನು ಹೊರತುಪಡಿಸಿದರೆ ಯಾವುದೇ ವಿಶೇಷ ಅನುದಾನ ಬಂದಿಲ್ಲ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಪ್ರಾಕೃತಿಕ ವಿಕೋಪನಿಧಿಯಲ್ಲೂ ಅನುದಾನ ಬಂದಿಲ್ಲ. ಪುತ್ತೂರು–ಉಪ್ಪಿನಂಗಡಿ ರಸ್ತೆಗೆ 10 ಲಕ್ಷ ಬಂದಿದೆ. ಆದರೆ ಇದರಲ್ಲಿ ಈ ರಸ್ತೆಯನ್ನು ದುರಸ್ಥಿ ಮಾಡಲು ಸಾಧ್ಯವಾ ಎಂದವರು ಪ್ರಶ್ನಿಸಿದರು.

ದ.ಕ ಜಿಲ್ಲೆಯಲ್ಲಿ 4ರಿಂದ 5 ಸಾವಿರ ಮಿಮೀ ಮಳೆಯಾಗುವುದು ಸರ್ವೇಸಾಮಾನ್ಯ. ಹಾಗಾಗಿ ಸಹಜವಾಗಿ ರಸ್ತೆಗಳಲ್ಲಿ ಹೊಂಡಗಳ ನಿರ್ಮಾಣವಾಗುತ್ತದೆ. ಇಂತಹ ನಾದುರಸ್ಥಿಯ ರಸ್ತೆಗಳಲ್ಲಿ ತಾತ್ಕಾಲಿಕವಾಗಿ ಗುಂಡಿಮುಚ್ಚುವ ಕಾಯಕವನ್ನು ಸರ್ಕಾರ ಹಾಗೂ ಸ್ಥಳೀಯಾಡಳಿತಗಳು ಮಾಡಬೇಕು. ಇದಕ್ಕೆ ಪ್ರಾಕೃತಿಕ ವಿಕೋಪ ನಿಧಿಯನ್ನು ಬಳಕೆ ಮಾಡಬೇಕು. ಆದರೆ ಕಳೆದ ಎರಡು ವರ್ಷಗಳಿಂದ ಪ್ರಾಕೃತಿಕ ವಿಕೋಪನಿಧಿಯಲ್ಲಿ ಯಾವುದೇ ಅನುದಾನ ಬಂದಿಲ್ಲ. ಹಿಂದಿನ ಎಲ್ಲಾ ಸರ್ಕಾರಗಳೂ ಈ ಅನುದಾನವನ್ನು ನೀಡುತ್ತಿದ್ದವು ಎಂದವರು ತಿಳಿಸಿದರು.

**ಗುಂಡಿಮುಚ್ಚಲೂ ಯೋಗ್ಯತೆ ಇಲ್ಲ:** ಪುತ್ತೂರಿನ ಶಾಸಕರು ಮಳೆಬಿಟ್ಟ ತಕ್ಷಣ ಟೆಂಡರ್ ಆಗಿ ರಸ್ತೆ ದುರಸ್ಥಿ ನಡೆಯುತ್ತದೆ ಎಂದು ಪತ್ರಿಕಾ ಹೇಳಿಕೆ ನೀಡಿದ್ದರು. ಆದರೆ ಸರ್ಕಾರದ ಈಗಿನ ಪರಿಸ್ಥಿತಿಯಲ್ಲಿ ರಸ್ತೆಗಳ ಹೊಂಡಗಳಿಗೆ ಪ್ಯಾಚ್ ವರ್ಕ್ ಮಾಡಲೂ ದುಡ್ಡಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಹೇಳಿದರು.

## ಬೆಳೆ ಪರಿಹಾರ ನೀಡಬೇಕು ಎಂದು ಭಾರತೀಯ ಭೀಮ್ ಸೇನೆ ಆಗ್ರಹ

• ಉದಯವಾಹಿನಿ ಬೆಂಗಳೂರು

ರಾಜ್ಯಾದ್ಯಂತ ಕಳೆದ ನಾಲ್ಕು ವರ್ಷದಿಂದ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಮತ್ತು ಪ್ರಸ್ತುತ ವರ್ಷದಲ್ಲಿ ಅತಿಯಾದ ಮಳೆಯಿಂದಾಗಿ ರೈತರು ಸಂಕಷ್ಟದಲ್ಲಿದ್ದಾರೆ. ರೈತರು ಬೆಳೆದ ಎಲ್ಲಾ ಬೆಳೆಗಳು ಸಂಪೂರ್ಣವಾಗಿ ಹಾನಿಯಾಗಿವೆ. ಮಳೆಯಿಂದ ಅನೇಕ ರೈತರ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿನ ಆಹಾರ ಸಾಮಗ್ರಿಗಳು ನೀರು ಪಾಲಾಗಿವೆ. ಮತ್ತು ರೈತರ ಜಮೀನುಗಳ ಡೋಣಗಳು ಹಾಗೂ ಚೆಕಡ್ಯಾಮಗಳು ನೀರಲ್ಲಿ ಕೊಚ್ಚಿಕೊಂಡು ಹೋಗಿವೆ. ರೈತರ ಜೀಮಿನುಗಳಿಗೆ ಹೋಗುವ ರಸ್ತೆಗಳು ಗ್ರಾಮಗಳಿಗೆ ತೆರಳುವ ರಸ್ತೆಗಳು ಮುಖ್ಯ ರಸ್ತೆಗಳು, ಹಾನಿಯಾಗಿವೆ. ಕೂಡಲೆ ಹಾಳಾದ ರಸ್ತೆಗಳ ರಿಪೇರಿ ಮಾಡಿಸಿ ರೈತರಿಗೆ ಗ್ರಾಮಸ್ಥರಿಗೆ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಭಾರತೀಯ ಭೀಮ್ ಸೇನೆ ಆಗ್ರಹಿಸಿದರು. ರೈತರ ಸಾಲವನ್ನು ಸಂಪೂರ್ಣ ಸರಕಾರ ಮನ್ನಾ ಮಾಡಬೇಕು, ರೈತರು ಕಳೆದ ವರ್ಷ ಕಟ್ಟಿದ ಬೆಳೆ ವಿಮೆ ಹಣವನ್ನು ಕೂಡಲೆ ಬಿಡುಗಡೆಗೊಳಿಸಬೇಕು, ಎಕರೆಗೆ 25 ಸಾವಿರ ಬೆಳೆ ಪರಿಹಾರ ನೀಡಬೇಕು, ಕಳಪೆ ರಸ ಗೊಬ್ಬರ ಮತ್ತು ಬಯೋ ಕ್ರಿಮಿನಾಶಕ ಔಷದಿಗಳ ಮಾರುವ ಆಗ್ರೋ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು, ಕೂಡಲೆ ಸರಕಾರ ರೈತರು ಕಳೆದ ವರ್ಷ ಕಟ್ಟಿದ ತಾಲ್ಲೂಕಿನ ವಿದ್ಯುತ್ ಇಲಾಖೆಯ ಸಿಬ್ಬಂದಿಯ ಕೊರತೆಯನ್ನು ಕೂಡಲೆ ಸರಿ ಪಡಿಸಬೇಕು, ಬಾರಿ ಪ್ರಮಾಣದ ಮಳೆಯಿಂದ ಗ್ರಾಮೀ ಣ ಭಾಗಗಳಲ್ಲಿ ರಸ್ತೆಗಳು ಗುಂಡಿಗಳಾಗಿ ವೆ . ಕೆಲವು ಭಾಗಗಳಲ್ಲಿ ಜನಸಾಮಾನ್ಯರಿ ಗೆ ತಿರುಗಾಡಲು ಸರಿಯಾದ ರಸ್ತೆಗಳಿಲ್ಲ ಮತ್ತು ಎಲ್ಲಾ ಗ್ರಾಮದ ರಸ್ತೆಗುಳ ಮುಚ್ಚಿ ಹೋಗಿವೆ ರೈತರ ಜಮೀನಿನಲ್ಲಿ ಅತಿಯಾದ ಮಳೆಯಿಂದಾಗಿ ಬೆಳೆದ ಪಸಲು ಕೈ ಬಂದ ತುತ್ತು ಬಾಯಿಗೆ ಬರದಂತ ಪರಸ್ಥಿ ತಿ ರೈತರ ಪಲಾಗಿದೆ ಮತ್ತು ಅನೇಕ ಗ್ರಾಮಗಳಲ್ಲಿ ಮನೆಗಳು ಸಹ ಬಿದ್ದುಹೋಗಿವೆ ಇದನ್ನೆಲ್ಲ ಜಿಲ್ಲಾಧಿಕಾರಿಗಳು ಗ್ರಾಮ ಲೆಕ್ಕಧಿಕಾರಿಗಳಿಂದ ಮಾಹಿತಿ ತರಿಸಿಕೊಂ ಡು ಕೂಡಲೇ ರೈತರಿಗೆ ಪರಿಹಾರ ನೀಡಬೇಕು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಪ್ರತಿಯೊಂದು ಗ್ರಾಮಕ್ಕೆ ಹೋಗಿ ರೈತರ ಜಮೀನಲ್ಲಿ ನಿಂತು ಫೋಟೋ ಹಾಗೂ ಬಿದ್ದಿರುವ ಮನೆಗಳನ್ನು ವೀಕ್ಷಣೆ ಮಾಡಿಬೇಕಾಗಿದೆ.



> ರೈತರಿಗೆ ತುಂಬಾ ಅನಾನುಕೂಲವಾಗಿದೆ ಕಚೇರಿಗೆ ಅಲೆದು ಬೇಸತ್ತು ಹೋಗಿದೆ ತಿ ರುಗಾಡುವಂತೆ ಮಾಡಿದ್ದಾರೆ ಕೂಡಲೇ ಜಿಲ್ಲಾಧಿಕಾರಿಗಳು ಎಲ್ಲಾ ಗ್ರಾಮದ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿನ ಮಳೆಯಿಂದಾಗಿ ಉಂಟಾದ ಸಮಸ್ಯೆಗಳನ್ನು ಗ್ರಾಮ ಲೆಕ್ಕಾಧಿಕಾರಿಗಳು ಕಂದಾಯ ನಿರೀಕ್ಷಕರು ಭೇಟಿ ನೀಡಬೇಕು ಶೀಘ್ರದಲ್ಲಿಯೇ ಪರಿಹಾರ ಘೋಷಣೆ ಮಾಡದಿದ್ದರೆ ಉಗ್ರ ಹೋರಾಟ ಮಾಡಲಾಗುವುದು.
> –ಪ್ರಕಾಶ ಕಪನೂರ, ಭಾರತೀಯ ಭೀಮ್ ಸೇನೆ ರಾಜ್ಯ ಉಪಾಧ್ಯಕ್ಷರು, ಬೆಂಗಳೂರು

## ಗರ್ಭಿಣಿಯರು ಪೌಷ್ಟಿಕ ಆಹಾರ ಸೇವನೆ ಅವಶ್ಯಕ

• ಉದಯವಾಹಿನಿ ಸವದತ್ತಿ

ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಉಗರಗೋಳದಲಿ ಸ್ವಸ್ಥನಾರಿ ಸಶಕ್ತ ಪರಿವಾರ ಅಭಿಯಾನ ಕುರಿತು ಕಾರ್ಯಕ್ರಮಕ್ಕೆ ಡಾ: ಕಾರ್ತಿಕ್ ಕಡಕೋಳ ಚಾಲನೆ ನೀಡಿದರು.

ಈ ಒಂದು ಸದರಿ ಕಾರ್ಯಕ್ರಮದ ಕುರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ರಾಜೇಂದ್ರ ಚಿಟ್ನಿಸ್ ಅವರು ಮಾತನಾಡಿ ತಾಯಿ ಕಾರ್ಡ್, ಹೊಸ ಗರ್ಭಿಣಿಯರ ನೋಂದಣಿ, ರಕ್ತ ಪರೀಕ್ಷೆಯ ಬಗ್ಗೆ, ಹಾಗೂ ಪೌಷ್ಟಿಕ ಆಹಾರದ ಕುರಿತು ಮಾಹಿತಿಯನ್ನು ಗರ್ಭಿಣಿಯರ ಆರೋಗ್ಯಕ್ಕೆ ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರ ಸೇವನೆ ಕುರಿತು ಮಾಹಿತಿ ತಿಳಿಸಿದರು.

ಮುಂದುವರೆದು ಮಾತನಾಡಿದ ಸಮುದಾಯ ಆರೋಗ್ಯ ಅಧಿಕಾರಿಗಳಾದ ನಿಂಗಣ್ಣ ಗರ್ಭ ವ್ಯವಸ್ಥೆಯಲ್ಲಿ ಆಗುವ ಬದಲಾವಣೆಗಳ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ಹಾಗು ಆರೋಗ್ಯ ಇಲಾಖೆ ಸೇವೆಗಳ ಕುರಿತು ಗೃಹ ಆರೋಗ್ಯ ಕಾರ್ಯಕ್ರಮ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಲ್ಯಾಬ್ ಟೆಕ್ನಿಕಲ್ ಆಫೀಸರ ಎ ಕೆ ಮುಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಎನ ಎ ಪೂಜೇರ ಆರೋಗ್ಯ ಅಧಿಕಾರಿಗಳಾದ ಮಂಜುಳಾ ಪವಾರ್ ಶ್ರೀದೇವಿ ಪತ್ತಾರ್ ವೈಶಾಲಿ ಕೊಳ್ಳಾರ ಈರಣ್ಣಾ ದಿಗಂಬರಮಠ ಆರೋಗ್ಯ ಇಲಾಖೆ ಸಿಬ್ಬಂದಿಯವರು ಆಶಾ ಕಾರ್ಯಕರ್ತೆಯರು ರಘು ತಾರೀಹಾಳ ಗರ್ಭಿಣಿ ಸ್ತ್ರೀಯರು ಗ್ರಾಮಸ್ಥರು ಮುಂತಾದವರು ಉಪಸ್ಥಿತರಿದ್ದರು.


☛ ಉದಯವಾಹಿನಿ ಚಿತ್ರ

## ಅಧಿಕಾರಿಗಳ ಮುಖಕ್ಕೆ ಮಸಿ 11 ಜನರ ವಿರುದ್ಧ ಪ್ರಕರಣ

• ಉದಯವಾಹಿನಿ ಕಲಬುರಗಿ

ನಗರದ ಎಂ.ಎಸ್.ಕೆ ಮಿಲ್ ಹತ್ತಿರ ನಿರ್ಮಿಸುತ್ತಿರುವ ನೂತನ ಕಣ್ಣಿ ತರಕಾರಿ ಮಾರುಕಟ್ಟೆ ಕಟ್ಟಡದ ನಾಮಫಲಕ ತೆರವುಗೊಳಿಸಿದ ವಿಚಾರವಾಗಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಗಂಗಾಧರ ಮಳಗಿ ಹಾಗೂ ಲೋಕೋಪಯೋಗಿ ಇಲಾಖೆ ಎಸ್.ಇ.ಮುಖಕ್ಕೆ ಮಸಿ ಬಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆ ವಿಲಾಸ ಬಳಿರಾಮ ರಾಠೋಡ್, ರವೀಂದ್ರ ಲಕ್ಷ್ಮೀಪುತ್ರ, ರಾಜು ಮಠಪತಿ, ಪೃಥ್ವಿ ಮರೆಪ್ಪ, ಸಚಿನ್ ಲೋಕಣೆ, ಸಾಹಿರ್ ಚವ್ಹಾಣ್, ಅಪ್ಪಾರಾವ ಕ್ಷೇತ್ರಿ, ಚನ್ನವೀರ ಬಿರಾದಾರ, ಪ್ರವೀಣ್ ಕಟ್ಟಿಮನಿ, ಆನಂದ ದೊಡ್ಡಮನಿ, ಮೈತಾಬ್ ಲಾಡ್ಲೆಸಾಬ್ ವಿರುದ್ಧ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಚಿನ್ನಾಭರಣ ಕಳವು

• ಉದಯವಾಹಿನಿ ಭಾಲ್ಕಿ

ಪಟ್ಟಣದ ಬಾಲಾಜಿ ನಗರದ ಜಾಲೆಂದ್ರ, ಭೀಮಣ್ಣ ಮೇತ್ರೆ ಅವರ ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಲಾಗಿದೆ.

ಕುಟುಂಬ ಸದಸ್ಯರು ಕಾರ್ಯಕ್ರಮ ನಿಮಿತ್ತ ಮನೆಗೆ ಬೀಗ ಹಾಕಿ ಹೋದಾಗ ಕಳ್ಳರು ಮನೆ ಬೀಗ ಮುರಿದು ಮನೆಯಲ್ಲಿದ್ದ ಸುಮಾರು 14 ತೊಲೆ ಬಂಗಾರ, 40 ತೊಲೆ ಬೆಳ್ಳಿ ದೋಚಿ ಪರಿಯಾಗಿದ್ದಾರೆ. ಕಳ್ಳರ ಪತ್ತೆ ಕಾರ್ಯದ ತನಿಖೆ ಪ್ರಗತಿಯಲ್ಲಿದ್ದು, ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಸಿಪಿಐ ಬಿ. ಅಮರೇಶ ತಿಳಿಸಿದ್ದಾರೆ.

## ಸಾಲ ವಸೋಲಾತಿಯಲ್ಲಿ ಜಿಲ್ಲೆಗೆ ಪ್ರಥಮ: ಬಿ ಕೆ ಬಿರಾದಾರ

• ಉದಯವಾಹಿನಿ ಮುದ್ದೇಬಿಹಾಳ

ಸಾಲವಸೋಲಾತಿಯಲ್ಲಿ ಮುದ್ದೇಬಿಹಾಳ ತಾಲ್ಲೂಕ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಜಿಲ್ಲೆಗೆ ಹಲವು ಬಾರಿ ಪ್ರಥಮ ಸ್ಥಾನ ಬಂದರೆ ರಾಜ್ಯದಲ್ಲಿ ಸಾಲ ವಸೂಲಾತಿಯಲ್ಲಿ 5ನೇ ಸ್ಥಾನವನ್ನು ಪಡೆದಿದ್ದೇವೆಂದು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಕೆ ಬಿರಾದಾರ ಹೇಳಿದರು ಅವರು ಶುಕ್ರವಾರ ಬ್ಯಾಂಕಿನ 61 ನೇ ವಾರ್ಷಿಕ ಮಹಾಸಭೆ ಉದ್ದೇಶಿಸಿ ಮಾತನಾಡಿದರು. ಕೃಷಿ ಚಟುವಟಿಕೆ ಹಾಗೂ ಕೃಷಿ ವಾಹನ ಸಾಲ ಹಾಗೂ ಜಮೀನಿನ ಒಡ್ಡಿನ ಲೇವಲಿಂಗ್ ಸಾಲ ನೀಡಿದ್ದೇವೆ ಸಂಘದ ಸದಸ್ಯರಿಗೆ ಶೇ3% ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತದೆ. ಸಂಘದಲ್ಲಿ 4351 ಸದಸ್ಯರಿದ್ದು ಕಳೆದ. 3 ವರ್ಷಗಳಲ್ಲಿ ಅತಿಹೆಚ್ಚು ಸಾಲವನ್ನು ರೈತರಿಗೆ ನೀಡಲಾಗಿದೆ ಕೃಷಿ ಬ್ಯಾಂಕ್ ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಾಗೂ ಶಾಸಕ ಸಿ.ಎಸ್ ನಾಡಗೌಡರ ಸಹಾಯ ಸಹಕಾರ ಮರೆಯಲಾಗದು ಎಂದರು. ವಾರ್ಷಿಕ ವರದಿವಾಚನ ವ್ಯವಸ್ಥಾಪಕ ಎ.ಜಿ ಲಮಾಣಿ ಮಾಡಿದರು ಸಭೆಯಲ್ಲಿ ಉಪಾಧ್ಯಕ್ಷ ಜಿ .ಬಿ ಕಮರಿ ನಿರ್ದೇಶಕರಾದ ಡಾ.ಎಸ್ ಎಸ್ ದೇಶಮುಖ, ಎಂ.ಎಸ್ ಮೇಟಿ, ಎಚ್ ಎಂ ಮಠ, ಎಸ್ ಎಸ್ ಬಪ್ಪರಗಿ, ಬಿ.ಎಸ್ ಬಗಲಿ, ಎಸ್ ಎಸ್ ಸೋಮನಾಳ, ಬಿ.ಜಿ ನರೋಡಿ, ಎ.ಬಿ ನಡಹಳ್ಳಿ, ಎಲ್ ಜಿ ಪೂಜಾರಿ, ಆರ್ ಎಚ್ ಬಿರಾದಾರ, ಉಪಸ್ಥಿತರಿದ್ದರು.


☛ ಉದಯವಾಹಿನಿ ಚಿತ್ರ

> ಪ್ರಕೃತಿ ವಿಕೋಪ ನರೆ ಹಾವಳಿ ಅತಿವೃಷ್ಟಿ ಅನಾವೃಷ್ಟಿ ವಸೋಲಾತಿಯಲ್ಲಿ ಏರುಪೇರು ಕಂಡಿದ್ದರು ಸಹ ತಾಲ್ಲೂಕಿನ ರೈತ ಬಾಂದವರಿಗೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಸಾಲಸೌಲಭ್ಯಗಳನ್ನು ಒದಗಿಸಲು ಬ್ಯಾಂಕ್ 61 ವರ್ಷಗಳಿಂದ ಶ್ರಮಿಸುತ್ತಿದೆ –ಬಿ ಕೆ ಬಿರಾದಾರ

## ಗಣತಿಯಲ್ಲಿ ನಿಖರ ಮಾಹಿತಿ ತುಂಬಿಸಿ ತಹಶೀಲ್ದಾರ್ ಜಮಖಂಡಿ

• ಉದಯವಾಹಿನಿ, ಚಿಂಚೋಳಿ

ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ಗಣತಿದಾರರು ಮನೆ ಮನೆಗೆ ಹೋಗಿ ಸಂಬಂಧಿಸಿದ ಕುಟುಂಬದ ಮುಖ್ಯಸ್ಥರಿಂದ ನಿಖರವಾದ ಮಾಹಿತಿ ಪಡೆದು ಮೊಬೈಲ್ ನಲ್ಲಿ ದಾಖಲಿಸಬೇಕು ಎಂದು ಗಣತಿದಾರರಿಗೆ ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ಸೂಚಿಸಿದರು.

ಪಟ್ಟಣದ ಚಂದಾಪೂರದ ಸ. ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಗಣತಿಗಾಗಿ ನೇಮಿಸಲಾದ ಗಣತಿದಾರರ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ಈ ಗಣತಿಯು ಆನ್‌ಲೈನ್‌ನಲ್ಲಿ ಮೋಬೈಲ್ ಆ್ಯಪ್ ಮೂಲಕ ನಡೆಯಲಿದೆ.

60 ಪ್ರಶ್ನಾವಳಿಗಳಿಗೆ ಉತ್ತರವನ್ನು ಪಡೆದುದಾಖಲಿಸಬೇಕಾಗುತ್ತೆ,150ಮನೆಗಳಿಗೆ ಒಬ್ಬ ಗಣತಿದಾರರು,20 ಗಣತಿದಾರರಿಗೆ ಒಬ್ಬರು ಮೇಲ್ವಿಚಾರಕರನ್ನು ನೇಮಿಸಲಾಗಿದೆ, ಯಾವುದೇ ಲೋಪವಾಗದಂತೆ ಗಣತಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಪ್ರಾಚಾರ್ಯ ಮಲ್ಲಿಕಾರ್ಜುನ ಪಾಲಾಮೂರ್ ರವರು ಗಣತಿಯ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ತಿಳಿಸಿದರು.


☛ ಉದಯವಾಹಿನಿ ಚಿತ್ರ

# ಚಡಚಣ ಎಸ್‌ಬಿಐ ಬ್ಯಾಂಕ್ ದರೋಡೆ: 6 ಕೆಜಿ ಚಿನ್ನ, 41 ಲಕ್ಷ ನಗದು ಪತ್ತೆ

### ಸೆ.16ರಂದು ದರೋಡೆಕೋರರು ಬ್ಯಾಂಕ್‌ನ ಸಿಬ್ಬಂದಿ,ಗ್ರಾಹಕರಿಗೆ ಪಿಸ್ತೂಲ್, ಚಾಕುಗಳ ತೋರಿಸಿ, ಕೈ ಕಾಲು ಕಟ್ಟಿ ದರೋಡೆ

• ಉದಯವಾಹಿನಿ ಚಡಚಣ

ವಿಜಯಪುರ ಜಿಲ್ಲೆಯ ಚಡಚಣ್ಣ ಪಟ್ಟಣದ ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಹುಲಜಂತಿ ಗ್ರಾಮದಲ್ಲಿ ಬ್ಯಾಗ್ ಪತ್ತೆಯಾಗಿದೆ. ಇದರಲ್ಲಿ 6.54 ಕೆಜಿ ಚಿನ್ನ ಹಾಗೂ 41.04 ಲಕ್ಷ ರೂಪಾಯಿ ನಗದು ದೊರೆತಿದೆ.

ಸೆ.16 ರಂದು ಸಂಜೆ ಮೂವರು ದರೋಡೆಕೋರರು ಬ್ಯಾಂಕ್‌ನ ಆರು ಜನ ಸಿಬ್ಬಂದಿ ಹಾಗೂ ನಾಲ್ವರು ಗ್ರಾಹಕರಿಗೆ ಪಿಸ್ತೂಲ್, ಚಾಕುಗಳ ತೋರಿಸಿ, ಕೈ ಕಾಲು ಕಟ್ಟಿ ಹಾಕಿ ದರೋಡೆ ಮಾಡಿದ್ದರು. ಬ್ಯಾಂಕ್‌ನಲ್ಲಿದ್ದ 1.04 ಕೋಟಿ ರೂ. ಮತ್ತು 20 ಕೆಜಿ ಚಿನ್ನಾಭರಣದೊಂದಿಗೆ ಪರಾರಿಯಾಗಿದ್ದರು. ಈ ಬಗ್ಗೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಎಂಟು ತನಿಖಾ ತಂಡಗಳನ್ನು ರಚನೆ ಮಾಡಲಾಗಿತ್ತು.


☛ ಉದಯವಾಹಿನಿ ಚಿತ್ರ

ಅಂದು ರಾತ್ರಿಯೇ ಕದ್ದ ಚಿನ್ನ ಹಾಗೂ ಹಣದೊಂದಿಗೆ ಕಾರಿನಲ್ಲಿ ಆರೋಪಿಗಳು ಮಹಾರಾಷ್ಟ್ರದ ಪಂಢರಾಪುರದತ್ತ ಹೋಗುತ್ತಿದ್ದಾಗ ಸೋಲಾಪುರ ಜಿಲ್ಲೆಯ ಹುಲಜಂತಿ ಗ್ರಾಮದ ಬಳಿ ಕಾರು ಅಪಘಾತಕ್ಕೆ ಈಡಾಗಿತ್ತು. ಇದರಿಂದ ಕಾರನ್ನು ಅಲ್ಲಿಯೇ ಬಿಟ್ಟು ಆರೋಪಿಗಳು ಓಡಿ ಹೋಗಿದ್ದರು. ಅಲ್ಲದೇ, ಈ ಕಾರಿನಲ್ಲಿ ಸ್ವಲ್ಪ ಹಣ ಹಾಗೂ ಚಿನ್ನಾಭರಣ ಸಹ ದೊರೆತಿತ್ತು.

ಹೀಗಾಗಿ ಆರೋಪಿಗಳ ಪತ್ತೆಗೆ ಮಹಾರಾಷ್ಟ್ರ ಪೊಲೀಸರೊಂದಿಗೆ ರಾಜ್ಯ ತನಿಖ್ಯಾ ತಂಡಗಳು ಜಂಟಿ ಕಾರ್ಯಾಚರಣೆ ಕೈಗೊಂಡಿವೆ. ಇದೀಗ ಅದೇ ಹುಲಜಂತಿ ಗ್ರಾಮದಲ್ಲಿ ಸಂಜೆ ಬ್ಯಾಗ್‌ವೊಂದು ಪತ್ತೆಯಾಗಿದೆ. ಈ ಕುರಿತು ಶುಕ್ರವಾರ ಚಡಚಣ ಪೊಲೀಸ್ ಠಾಣೆಯಲ್ಲಿ ಎಸ್‌ಪಿ ಲಕ್ಷ್ಮಣ ನಿಂಬರಗಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.

**8 ತನಿಖಾ ತಂಡಗಳ ರಚನೆ**

ಬ್ಯಾಂಕ್ ದರೋಡೆ ನಡೆದ ಒಂದೂವರೆ ಗಂಟೆಯಲ್ಲೇ ಹುಲಜಂತಿ ಗ್ರಾಮದಲ್ಲಿ ಆರೋಪಿಗಳು ಬಳಕೆ ಮಾಡಿದ್ದ ಕಾರು ಪತ್ತೆ ಹಚ್ಚಲಾಗಿತ್ತು. ಅಂದು ಕಾರಿನಲ್ಲಿ ಆರೋಪಿಗಳು ಪರಾರಿಯಾಗುತ್ತಿದ್ದಾಗ ಅಪಘಾತವಾಗಿ ಗ್ರಾಮಸ್ಥರೊಂದಿಗೆ ವಾಗ್ವಾದ ಮಾಡಲಾಗಿತ್ತು. ನಂತರದಲ್ಲಿ ಗ್ರಾಮಸ್ಥರಿಗೂ ಬೆದರಿಕೆ ಹಾಕಿ ಅಲ್ಲಿಂದ ಆರೋಪಿಗಳು ಪರಾರಿಯಾದ ಮಾಹಿತಿ ಲಭ್ಯವಾಗಿತ್ತು. ಇದರ ಆಧಾರದ ಮೇಲೆ ತನಿಖೆ ಕೈಗೊಂಡಾಗ ಕಾರಿನಲ್ಲಿ 21 ಚಿನ್ನದ ಪ್ಯಾಕೇಟ್‌ಗಳು ಹಾಗೂ 1.03 ಲಕ್ಷ ರೂ. ನಗದು ಪತ್ತೆಯಾಗಿತ್ತು ಎಂದು ತಿಳಿಸಿದರು.

ಆ ದಿನದಿಂದಲೇ ಸೋಲಾಪುರ ಹಾಗೂ ವಿಜಯಪುರ ಪೊಲೀಸರು ಇಡೀ ಹುಲಜಂತಿ ಗ್ರಾಮವನ್ನು ಸುತ್ತುವರಿದು, ನಿಗಾ ವಹಿಸಲಾಗಿತ್ತು. ವಾಹನಗಳ ತಪಾಸಣೆ ಸೇರಿದಂತೆ ಅಗತ್ಯ ಕಾರ್ಯಾಚರಣೆ ನಡೆಸಲಾಗಿತ್ತು.

ಈ ವೇಳೆ, ಗ್ರಾಮದ ಪಾಳು ಬಿದ್ದ ಮನೆಯ ಮೇಲೆ ಬ್ಯಾಗ್ ಪತ್ತೆ ದೊರೆತಿದೆ. ಇದು ಬ್ಯಾಂಕ್‌ನಲ್ಲಿ ಕದ್ದ ಚಿನ್ನ, ಹಣ ತುಂಬಿಕೊಂಡು ಹೋದ ಬ್ಯಾಗ್ ಆಗಿದ್ದು, ಇದರಲ್ಲಿ 41.04 ಲಕ್ಷ ರೂ. ನಗದು ಹಾಗೂ 136 ಪಾಕೇಟ್‌ಗಳಲಿ 6.54 ಕೆಜಿ ಚಿನ್ನ ಪತ್ತೆಯಾಗಿದೆ ಎಂದು ಎಸ್‌ಪಿ ವಿವರಿಸಿದರು.

**ಠಾಣೆಯಲ್ಲಿ ಪ್ರಕರಣ ದಾಖಲು**

ಬ್ಯಾಂಕ್ ದರೋಡೆಕೋರರು ಕೃತ್ಯಕ್ಕೆ ಬಳೆಸಿದ ವಾಹನ ಸಹ ಕಳ್ಳತ್ತನೆ ಮಾಡಿರುವುದಾಗಿದೆ. ಈ ಬಗ್ಗೆ ಸೋಲಾಪುರ ಜಿಲ್ಲೆಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೈಕ್ ಹಾಗೂ ಕಾರು ಕಳ್ಳತನ ಮಾಡಿರುವ ಆರೋಪಿಗಳೇ ಈ ಬ್ಯಾಂಕ್ ದರೋಡೆ ಸಹ ಮಾಡಿದ್ದಾರೆ. ಸೋಲಾಪುರ ಪೊಲೀಸ್ ತನಿಖಾ ತಂಡ ಹಾಗೂ ನಮ್ಮ ತನಿಖಾ ತಂಡ ಜಂಟಿಯಾಗಿ ಆದಷ್ಟು ಬೇಗ ಉಳಿದ ವಸ್ತುಗಳು ಹಾಗೂ ಆರೋಪಿಗಳನ್ನು ಪತ್ತೆ ಮಾಡಲಾಗುವುದು ಎಂದು ಹೇಳಿದರು.

# ಮದ್ಯ ಹಗರಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ನಿರಂಜನ್ ದಾಸ್ ಬಂಧನ

**ರಾಯ್‌ಪುರ:** ಛತ್ತೀಸ್‌ಗಢ ಭ್ರಷ್ಟಾಚಾರ ನಿಗ್ರಹ ದಳದ ಆರ್ಥಿಕ ಅಪರಾಧಗಳ ವಿಭಾಗ ಮದ್ಯ ಹಗರಣವೊಂದರಲ್ಲಿ ನಿವೃತ್ತ ಐಎಎಸ್ ಅಧಿಕಾರಿ ನಿರಂಜನ್ ದಾಸ್ ಅವರನ್ನು ಬಂಧಿಸಿದೆ. ರಾಜ್ಯ ಅಬಕಾರಿ ಇಲಾಖೆಯಲ್ಲಿ ಈ ಹಿಂದೆ ಆಯುಕ್ತರಾಗಿದ್ದ ನಿರಂಜನ್ ದಾಸ್ ಅವರು ಮದ್ಯ ಹಗರಣವನ್ನು ನಿರ್ವಹಿಸಿದ ಮತ್ತು ವಂಚಕರ ಸಿಂಡಿಕೇಟ್‌ಗೆ ಸಹಾಯ ಮಾಡಿದ ಆರೋಪದ ಮೇಲೆ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಸ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿ ಹೇಳಿದರು.ರಾಜ್ಯ ಸ್ವಾಮ್ಯದ ಮದ್ಯದ ಅಂಗಡಿಗಳಲ್ಲಿ ಲೆಕ್ಕವಿಲ್ಲದ ಮದ್ಯ ಮಾರಾಟ, ಅಧಿಕಾರಿಗಳ ವರ್ಗಾವಣೆ, ಟೆಂಡರ್ ಪ್ರಕ್ರಿಯೆಯಲ್ಲಿ ಕುಶಲತೆ, ದೋಷಪೂರಿತ ಮದ್ಯ ನೀತಿಯನ್ನು ತರುವಲ್ಲಿ ಲಾಭ ಸೇರಿ ವಂಚನೆಯ ಸಿಂಡಿಕೇಟ್‌ಗೆ



ಲಾಭವಾಗುವ ಇತರ ಮಾರ್ಗಗಳಿಗಾಗಿ ಕೋಟ್ಯಂತರ ರೂಪಾಯಿಗಳ ಅನುಚಿತ ಪ್ರಯೋಜನಗಳನ್ನು ಪಡೆದಿದ್ದಾರೆ ಎಂದು ಅವರು ಹೇಳಿದರು.

ದಾಸ್ ಛತ್ತೀಸ್‌ಗಢ ರಾಜ್ಯ ಕೇಡರ್ ಅಧಿಕಾರಿಯಾಗಿದ್ದು, ಅವರನ್ನು ಭಾರತೀಯ ಆಡಳಿತ ಸೇವೆಗೆ ಬಡ್ತಿ ನೀಡಲಾಯಿತು. ಈ ಪ್ರಕರಣದಲ್ಲಿ ಬಂಧಿಸಲ್ಪಟ್ಟ ಎರಡನೇ ಮಾಜಿ ಐಎಎಸ್ ಅಧಿಕಾರಿ ಎಂದು ತಿಳಿಸಿದ್ದಾರೆ.

**ದೋಷಪೂರಿತ ಮದ್ಯ ನೀತಿ**

ಛತ್ತೀಸ್‌ಗಢದಲ್ಲಿ ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರ್ಕಾರವಿದ್ದಾಗ 2019 ಮತ್ತು 2022 ರ ನಡುವೆ 2,500 ಕೋಟಿ ರೂ.ಗಳಿಗೂ ಹೆಚ್ಚಿನ ಹಗರಣ ನಡೆದಿದೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.ಈ ಹಗರಣದ ಹಣ ವರ್ಗಾವಣೆಯ ಭಾಗವನ್ನು ಇಡಿ ತನಿಖೆ ನಡೆಸುತ್ತಿದೆ.

ಎಸಿಬಿ/ಇಒಡಬ್ಲ್ಯೂ ಕಳೆದ ವರ್ಷ ಜ 17 ರಂದು ಮದ್ಯ ಹಗರಣದಲ್ಲಿ ಎಫ್‌ಐಆರ್ ದಾಖಲಿಸಿ, ಮಾಜಿ ಅಬಕಾರಿ ಸಚಿವ ಕವಾಸಿ ಲಖ್ಮಾ ಮತ್ತು ಮಾಜಿ ಮುಖ್ಯ ಕಾರ್ಯದರ್ಶಿ ವಿವೇಕ್ ಢಂಡ್ ಸೇರಿದಂತೆ 70 ವ್ಯಕ್ತಿಗಳು ಮತ್ತು ಕಂಪನಿಗಳನ್ನು ಹೆಸರಿಸಿತ್ತು. ಇದುವರೆಗೆ ಒಂದು ಚಾರ್ಜ್‌ಶೀಟ್ ಮತ್ತು ನಾಲ್ಕು ಪೂರಕ ಚಾರ್ಜ್‌ಶೀಟ್‌ಗಳನ್ನು ಸಲ್ಲಿಸಿದೆ ಮತ್ತು 12ಕ್ಕೂ ಹೆಚ್ಚು ಆರೋಪಿಗಳನ್ನು ಬಂಧಿಸಲಾಗಿದೆ.

## ಐಫೋನ್ 17ಗೆ ಖರೀದಿಗೆ ಮುಂಬೈನಲ್ಲಿ ಹೊಡೆದಾಟ

**ಮುಂಬೈ:** ಆಪಲ್ ಕಂಪನಿ ತನ್ನ ಹೊಚ್ಚಹೊಸ ಐಫೋನ್ 17 ಸರಣಿಯನ್ನು ಭಾರತದಲ್ಲಿ ಬಿಡುಗಡೆ ಮಾಡಿದ್ದು,ಹೊಸ ಫೋನ್ ಖರೀದಿ ಗ್ರಾಹಕರು ಮುಗಿಬಿದ್ದಿದ್ದರಿಂದ ಮುಂಬೈನಲ್ಲಿ ಮಾರಾಮಾರಿ ನಡೆದು ಹಲವರು ಗಾಯಗೊಂಡಿದ್ದಾರೆ.

ವಾಣಿಜ್ಯ ರಾಜಧಾನಿ ಮುಂಬೈನ ಬಂದಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ ಆಪಲ್ ಸ್ಟೋರ್ ಮುಂದೆ ಭಾರೀ ನೂಕುನುಗ್ಗಲು ಉಂಟಾಗಿದ್ದು, ಗ್ರಾಹಕರ ನಡುವೆ ಹೊಡೆದಾಟ ಕೂಡ ನಡೆದಿದೆ.

ಬೆಳಗ್ಗೆ 5 ಗಂಟೆಯಿಂದಲೇ ಆಪಲ್ ಸ್ಟೋರ್ ಮುಂದೆ ಕಾಯುತ್ತಿದ್ದ ಗ್ರಾಹಕರು, ಅಂಗಡಿ ತೆರೆಯುತ್ತಿದ್ದಂತೇ ಒಳಗೆ ನುಗ್ಗಲು ಪ್ರಯತ್ನಿಸಿದ್ದಾರೆ. ಈ ವೇಳೆ ನೂಕುನುಗ್ಗಲು ಉಂಟಾಗಿದ್ದು, ಆಕ್ರೋಶಿತರ ನಡುವೆ ಮಾರಾಮಾರಿ ಕೂಡ ನಡೆದಿದೆ. ಈ ಕುರಿತು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದ್ದು, ಐಫೋನ್ 17ಗಾಗಿ ಜನರ ಕ್ರೇಜ್ ಕಂಡು ಎಲ್ಲರೂ ಆಶ್ಚರ್ಯಚಕಿತರಾಗಿದ್ದಾರೆ. ಇನ್ನೂ ರಾಜಧಾನಿ ಬೆಂಗಳೂರು ಸೇರಿದಂತೆ ದೇಶದ ಹಲವೆಡೆ ಆಪಲ್ ಸ್ಟೋರ್ ಮುಂದೆ ಜನಜಂಗುಳಿ ಕಂಡುಬಂದಿದೆ.

## ನಕಲಿ ಸಾಲ ಯೆಸ್ ಬ್ಯಾಂಕಿಗೆ 2797ಕೋಟಿ ರೂ. ನಷ್ಟ

**ನವದೆಹಲಿ:** ನಕಲಿ ಸಾಲ ವ್ಯವಹಾರದಿಂದಾಗಿ ಯೆಸ್ ಬ್ಯಾಂಕ್‌ಗೆ 2797 ಕೋಟಿ ರೂಪಾಯಿ ನಷ್ಟವಾಗಿದೆ ಎನ್ನಲಾದ ಪ್ರಕರಣದಲ್ಲಿ ಧೀರೂಬಾಯಿ ಅಂಬಾನಿ ಉದ್ಯಮ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ, ಬ್ಯಾಂಕಿನ ಸಹ ಸಂಸ್ಥಾಪಕ ರಾಣಾ ಕಪೂರ್, ಆತನ ಪತ್ನಿ ಬಿಂದು, ಪುತ್ರಿಯರಾದ ರಾಧಾ ಕಪೂರ್ ಮತ್ತು ರೋಶನಿ ವಿರುದ್ಧ ಸಿಬಿಐ ಆರೋಪಪಟ್ಟಿ ಸಲ್ಲಿಸಿದೆ.

ಕಪೂರ್ ನಿರ್ದೇಶನದಂತೆ ಎಡಿಎಯ ವಾಣಿಜ್ಯ ಫೈನಾನ್ಸ್ (ಆರ್‌ಸಿಎಫ್‌ಎಲ್) ಮತ್ತು ಗೃಹ ಫೈನಾನ್ಸ್ (ಆರ್‌ಎಚ್‌ಎಫ್‌ಎಲ್)ನ ಡಿಬೆಂಚರತ್ ಮತ್ತು ವಾಣಿಜ್ಯ ಸಾಲಪತ್ರಗಳಲ್ಲಿ ಬ್ಯಾಂಕ್ ಹೂಡಿಕೆ ಮಾಡಿತ್ತು. ಕ್ರೆಡಿಟ್ ರೇಟಿಂಗ್‌ನಲ್ಲಿ ಇದರ ಕಳಪೆ ಸಾಧನೆ ಇದ್ದರೂ ಹೂಡಿಕೆ ಮಾಡಲಾಗತ್ತು. ಇದಕ್ಕೆ ಪ್ರತಿಯಾಗಿ ಹಣವನ್ನು ಎಸ್‌ಬ್ಯಾಂಕ್ ಪ್ರವರ್ತಕರ ಕಂಪನಿಗಳಿಗೆ ಎಡಿಎ ಕಂಪನಿಗಳಿಂದ ವರ್ಗಾಯಿಸಲಾಗಿದೆ ಎಂದು ಆರೋಪಿಸಲಾಗಿದೆ.

ಯೆಸ್ ಬ್ಯಾಂಕಿಗೆ ವಂಚಿಸಿದ ಪ್ರಕರಣದಲ್ಲಿ ಸಿಬಿಐ ಈ ಮುನ್ನ ಡಿಎಚ್‌ಎಫ್‌ಎಲ್ ನ ಪ್ರವರ್ತಕ ಕಪಿಲ್ ವಾಧ್ವಾನಿ ಮತ್ತು ಸಹೋದರ ಧೀರಜ್ ವಾಧ್ವಾನಿ ಅವರ ವಿರುದ್ಧವೂ ತನಿಖೆ ನಡೆಸಿತ್ತು. ಅನಿಲ್ ಅಂಬಾನಿ ನೇತೃತ್ವದ ಕಂಪನಿಗಳ ವಹಿವಾಟಿಗೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲ ಆರೋಪಪಟ್ಟಿ ಸಲ್ಲಿಸಿದ್ದಾಗಿ ಸಿಬಿಐ ಪ್ರಕಟಿಸಿದೆ. ಹೆಸ್ ಬ್ಯಾಂಕಿನ ಮುಖ್ಯ ವಿಚಕ್ಷಣಾಅಧಿಕಾರಿ 2022ರಲ್ಲಿ ಅನಿಲ್ ಅಂಬಾನಿ ಮತ್ತು ರಾಣಾ ಕಪೂರ್ ಕಂಪನಿಗಳ ವಿರುದ್ಧ ಸಿಬಿಐಗೆ 2022ರಲ್ಲಿ ದೂರು ನೀಡಿದ್ದರು.

### ● ಇಸ್ರೇಲ್ ಬತ್ತಳಿಕೆಗೆ ಐರನ್ ಬೀಮ್ ● ಮುಸ್ಲಿಂ ರಾಷ್ಟ್ರಗಳಿಗೆ ಲೇಸರ್ ಶಾಕ್

# ಬೆಳಕಿನ ವೇಗದಲ್ಲಿ ದಾಳಿ, ಅಗ್ಗದ ಬೆಲೆಯಲ್ಲಿ ರಕ್ಷಣೆ

- ಬೆಳಕಿನ ವೇಗದಲ್ಲಿ ದಾಳಿ, ಅಗ್ಗದ ಬೆಲೆಯಲ್ಲಿ ರಕ್ಷಣೆ
- 250 ರೂಪಾಯಿಗೆ ಶತ್ರುಗಳ ರಾಕೆಟ್ ಭಸ್ಮ ಮಾಡುವ ಲೇಸರ್
- ಇಸ್ರೇಲ್‌ಗೆ ಐರನ್ ಬೀಮ್ ಅಸ್ತ್ರದ ಬಲ! ಶತ್ರುರಾಷ್ಟ್ರಗಳಿಗೆ ಶಾಕ್

**ಇಸ್ರೇಲ್:** ಅದು 2023ರ ಅಕ್ಟೋಬರ್ 7.. ಇಡೀ ಜಗತ್ತೇ ಅವತ್ತು ಬೆಚ್ಚಿಬಿದ್ದಿತ್ತು. ಸಾವಿರಾರು ರಾಕೆಟ್‌ಗಳು ಇಸ್ರೇಲ್‌ನ ನೆಲಕ್ಕೆ ಅಪ್ಪಳಿಸಿದ್ದವು. ಆಗ ಜಗತ್ತಿನ ಅತ್ಯಂತ ಶಕ್ತಿಶಾಲಿ ಎನ್ನಲಾಗಿದ್ದ ಐರನ್ ಡೋಮ್ ರಕ್ಷಣಾ ವ್ಯವಸ್ಥೆಯ ಮೇಲೆಯೇ ಪ್ರಶ್ನೆಗಳು ಎದ್ದಿದ್ದವು. ಅದಾದ ಮೇಲೆ ಇಸ್ರೇಲ್ ಏನೆಲ್ಲಾ ಮಾಡಿದೆ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ. ಈಗ ಇಸ್ರೇಲ್ ಮತ್ತೊಂದು ಅಸ್ತ್ರವನ್ನು ತನ್ನ ಬತ್ತಳಿಕೆಗೆ ಸೇರಿಸಿಕೊಳ್ಳುತ್ತಿದ್ದು, ಶತ್ರುಗಳ ಎದೆಯಲ್ಲಿ ನಡುಕ ಶುರುವಾಗಿದೆ. ಇಸ್ರೇಲ್ ವಿರುದ್ಧ ಇಸ್ಲಾಮಿಕ್ ನ್ಯಾಟೋ ರಚನೆ ಬಗ್ಗೆ ಮಾತುಕತೆ ನಡೆಯುತ್ತಿರುವಾಗಲೇ ರಣರಂಗವನ್ನೇ ಬದಲಿಸುವ, ಯುದ್ಧದ ಆರ್ಥಿಕತೆಯನ್ನೇ ಚೇಂಜ್ ಮಾಡಬಲ್ಲ ಕ್ರಾಂತಿಕಾರಿ ಅಸ್ತ್ರವನ್ನು ಇಸ್ರೇಲ್ ಜಗತ್ತಿನ ಮುಂದೆ ಇಟ್ಟಿದೆ. ಐರನ್ ಬೀಮ್ ಎನ್ನುವ ಲೇಸರ್ ಅಸ್ತ್ರ ಇಡೀ ಜಗತ್ತಿನ ಗಮನ ಸೆಳೆದಿದೆ. ಈ ಮೂಲಕ ಲೇಸರ್ ಕಿರಣಗಳ ಮೂಲಕ ಶತ್ರುಗಳನ್ನು ಆಕಾಶದಲ್ಲೇ ಸುಟ್ಟುಹಾಕುವ ಭವಿಷ್ಯದ ಯುದ್ಧ ತಂತ್ರಕ್ಕೆ ಮುನ್ನುಡಿ ಬರೆದಿದೆ.

ಹೌದು, ಐರನ್ ಡೋಮ್ ಏರ್ ಡಿಫೆನ್ಸ್ ಸಿಸ್ಟಮ್‌ಗೆ ಜಗತ್ತಿನಾದ್ಯಂತ ಖ್ಯಾತಿ ಗಳಿಸಿರುವ ಇಸ್ರೇಲ್, ಈಗ ತನ್ನ ರಕ್ಷಣಾ ಕವಚಕ್ಕೆ ಐರನ್ ಬೀಮ್ ಎಂಬ ಹೊಸ ಬ್ರಹ್ಮಾಸ್ತ್ರವನ್ನು ಸೇರಿಸಿದೆ. ಇದು ಅತ್ಯಾಧುನಿಕ ಉನ್ನತ-ಶಕ್ತಿಯ ಲೇಸರ್ ಆಧಾರಿತ ಸೆಕ್ಯುರಿಟಿ ಸಿಸ್ಟಮ್ ಆಗಿದ್ದು, ಇಸ್ರೇಲ್‌ನ ಕೋಟೆಗೆ ಮತ್ತಷ್ಟು ಬಲ ನೀಡಿದೆ. ಜಗತ್ತಿನ ಮೊದಲ ಹೈ-ಪವರ್ ಲೇಸರ್ ರಕ್ಷಣಾ ವ್ಯವಸ್ಥೆಯಾಗಿದ್ದು, ಕಾರ್ಯಾಚರಣೆಗೆ ರೆಡಿಯಾಗಿದೆ. ಇಸ್ರೇಲ್‌ನ ಐರನ್ ಬೀಮ್ ನೋಡಿ ಸುತ್ತ ಇರುವ ಮುಸ್ಲಿಂ ರಾಷ್ಟ್ರಗಳು ಶಾಕ್ ಆಗಿದ್ದು, ರಣರಂಗವನ್ನೇ ಬುಡಮೇಲು ಮಾಡಿದೆ. ಯಾಕೆಂದರೆ, ಸಾಂಪ್ರದಾಯಿಕ ಐರನ್ ಡೋಮ್ ಸಿಸ್ಟಮ್ ಶತ್ರುಗಳ ರಾಕೆಟ್ ಅನ್ನು ಹೊಡೆದುರುಳಿಸಲು ದುಬಾರಿ ಮಿಸೈಲ್‌ಗಳನ್ನು ಬಳಸುತ್ತೆ. ಆದರೆ, ಐರನ್ ಬೀಮ್ ಅದಕ್ಕೆ ತದ್ವಿರುದ್ಧ. ಇದು ಕಣ್ಣಿಗೆ ಕಾಣದ, ಪ್ರಬಲ ಲೇಸರ್ ಕಿರಣಗಳನ್ನು ಬಳಸಿ ಆಕಾಶದಲ್ಲಿ ಹಾರಿಬರುತ್ತಿರುವ ಶತ್ರುಗಳ ರಾಕೆಟ್‌ಗಳು, ಡ್ರೋನ್‌ಗಳು, ಮೋರ್ಟಾರ್ ಶೆಲ್‌ಗಳು ಮತ್ತು ಸ್ಮಾಲ್ ರೇಂಜ್ ಕ್ಷಿಪಣಿಗಳನ್ನು ಕೆಲವೇ ಸೆಕೆಂಡುಗಳಲ್ಲಿ ಸುಟ್ಟು ಭಸ್ಮ ಮಾಡುತ್ತದೆ.

**ಐರನ್ ಬೀಮ್ ವರ್ಸಸ್ ಐರನ್ ಡೋಮ್:** ಐರನ್ ಬೀಮ್‌ನ ಅತ್ಯಂತ ದೊಡ್ಡ ಮತ್ತು ಕ್ರಾಂತಿಕಾರಿ ಅಂಶವೆಂದರೆ ಅದರ ವೆಚ್ಚ. ಐರನ್ ಡೋಮ್‌ನ ಒಂದು ಕ್ಷಿಪಣಿಯ ಬೆಲೆ ಸುಮಾರು 40,000 ದಿಂದ 60,000 ಡಾಲರ್ ಅಂದ್ರೇ ಸುಮಾರು 33 ರಿಂದ 50 ಲಕ್ಷ ರೂಪಾಯಿ ಆಗಿದೆ. ಹಮಾಸ್‌ನಂತಹ ಸಂಘಟನೆಗಳು ಕಡಿಮೆ ಬೆಲೆಯ ಸಾವಿರಾರು ರಾಕೆಟ್‌ಗಳನ್ನು ಉಡಾಯಿಸಿದಾಗ, ಅವುಗಳನ್ನು ತಡೆಯಲು ಇಸ್ರೇಲ್ ಕೋಟ್ಯಂತರ ಡಾಲರ್ ಖರ್ಚು ಮಾಡಬೇಕಾಗುತ್ತದೆ.



ಇದು ಆರ್ಥಿಕವಾಗಿ ಇಸ್ರೇಲ್‌ಗೆ ದೊಡ್ಡ ಹೊರೆಯಾಗಿತ್ತು. ಆದರೆ, ಐರನ್ ಬೀಮ್ ಈ ಲೆಕ್ಕಾಚಾರವನ್ನೇ ತಲೆಕೆಳಗು ಮಾಡಿದೆ. ಐರನ್ ಬೀಮ್‌ನ ಒಂದು ಲೇಸರ್ ಶಾಟ್‌ಗೆ ತಗಲುವ ವೆಚ್ಚ ಕೇವಲ 2 ರಿಂದ 3 ಡಾಲರ್ ಅಂದ್ರೇ 160 ರಿಂದ 250 ರೂಪಾಯಿ ಮೌಲ್ಯದ ವಿದ್ಯುತ್ ಮಾತ್ರ.. ಅಂದ್ರೆ.. ಶತ್ರುಗಳು ಸಾವಿರಾರು ಡಾಲರ್ ಖರ್ಚು ಮಾಡಿ ಉಡಾಯಿಸುವ ರಾಕೆಟ್‌ನ್ನು, ಇಸ್ರೇಲ್ ಕೇವಲ ಒಂದೇ ಒಂದು ಕಾಫಿ ಅಥವಾ ಊಟದ ಬೆಲೆಯಲ್ಲಿ ನಾಶಪಡಿಸುತ್ತದೆ. ಇದು ಇಸ್ರೇಲ್‌ಗೆ ದೀರ್ಘಕಾಲೀನ ಯುದ್ಧಗಳಲ್ಲಿ ಭಾರೀ ಹಣವನ್ನು ಉಳಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

**ಇಸ್ರೇಲ್‌ನ ಐರನ್ ಬೀಮ್ ಅಸ್ತ್ರ**

**ಏರ್ ಡಿಫೆನ್ಸ್ ಸಿಸ್ಟಮ್‌ಗೆ ಮತ್ತಷ್ಟು ಬಲ:** ಇನ್ನು, ಐರನ್ ಬೀಮ್ ಲೇಸರ್ ಅಸ್ತ್ರ.. ಸದ್ಯ ಇಸ್ರೇಲ್‌ನಲ್ಲಿ ಅಸ್ತಿತ್ವದಲ್ಲಿರುವ ರಕ್ಷಣಾ ವ್ಯವಸ್ಥೆಗಳನ್ನು ಬದಲಿಸುವುದಿಲ್ಲ, ಬದಲಾಗಿ ಅವುಗಳಿಗೆ ಮತ್ತಷ್ಟು ಬಲ ತುಂಬಲಿದೆ. ಇಸ್ರೇಲ್‌ನ ವಾಯು ರಕ್ಷಣಾ ವ್ಯವಸ್ಥೆಯು ಒಂದು ಮಲ್ಟಿ ಲೇಯರ್ ಗುರಾಣಿಯಂತೆ ಕೆಲಸ ಮಾಡುತ್ತಿದೆ. ಇದರಲ್ಲಿ ಐರನ್ ಡೋಮ್ ಇದ್ದು, 2 ರಿಂದ 70 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ರಾಕೆಟ್, ಕ್ಷಿಪಣಿಗಳನ್ನು ತಡೆಯುತ್ತದೆ. ಅದಾದ ಬಳಿಕ ಡೇವಿಡ್ಸ್ ಸ್ಲಿಂಗ್ ಇದ್ದು, 40 ರಿಂದ 300 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಕ್ರೂಸ್ ಕ್ಷಿಪಣಿಗಳನ್ನು ನಾಶಪಡಿಸುತ್ತದೆ. ಆರೋ 2 ಬೈ 3: 90 ರಿಂದ 2400 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಖಂಡಾಂತರ ಕ್ಷಿಪಣಿಗಳನ್ನು ಅಟ್ಮಾಸ್ಫಿಯರ್ ಹೊರಗೆಯೇ ಹೊಡೆದುರುಳಿಸುತ್ತದೆ. ಈಗ ಅದಕ್ಕೆ ಐರನ್ ಬೀಮ್ ಸೇರಿದ್ದು, 10 ಕಿಲೋ ಮೀಟರ್ ಒಳಗಿನ ಅತಿ ಸಮೀಪದ ಬೆದರಿಕೆಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಹೊಡೆದುರುಳಿಸಲು ಇದನ್ನು ಸೇರ್ಪಡೆಗೊಳಿಸಲಾಗಿದೆ.

**ಭಾರತದ ಬಳಿಯೂ ಇದೆ ಲೇಸರ್‌ಅಸ್ತ್ರ**

**ನಿಮಗೆ ಒಂದು ವಿಚಾರವನ್ನು ಹೇಳಲೇಬೇಕಿದೆ. ಇಸ್ರೇಲ್‌ನಂತೆ ಭಾರತ ಕೂಡ ಲೇಸರ್ ಅಸ್ತ್ರವನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು 30-ಕಿಲೋವ್ಯಾಟ್ ಲೇಸರ್ ಡೈರೆಕ್ಟೆಡ್ ಎನರ್ಜಿ ವೆಪನ್ ವ್ಯವಸ್ಥೆಯನ್ನು ಕಂಡುಹಿಡಿದಿದೆ. ಡ್ರೋನ್‌ಗಳು, ಕ್ಷಿಪಣಿಗಳು, ವಿಮಾನಗಳು ಮತ್ತು ಡ್ರೋನ್‌ಗಳ ಸಮೂಹವನ್ನು ರಿಯಲ್ ಟೈಮ್‌ನಲ್ಲಿ ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿದೆ.**

**ಬೆಳಕಿನಷ್ಟು ವೇಗ, ವರ್ಷಾಂತ್ಯಕ್ಕೆ ಸೇನೆಗೆ**

**ಇನ್ನು, ಈ ಗೇಮ್ ಚೇಂಜರ್ ಲೇಸರ್ ತಂತ್ರಜ್ಞಾನವನ್ನು ಇಸ್ರೇಲ್‌ನ ರಕ್ಷಣಾ ಸಚಿವಾಲಯದ ಸಂಶೋಧನೆ ಮತ್ತು ಅಭಿವೃದ್ಧಿ ಘಟಕ, ರಾಫೆಲ್ ಅಡ್ವಾನ್ಸ್ಡ್ ಡಿಫೆನ್ಸ್ ಸಿಸ್ಟಮ್ಸ್ ಮತ್ತು ಎಲ್ಬಿಟ್ ಸಿಸ್ಟಮ್ಸ್‌ನಂತಹ ದಿಗ್ಗಜ ಸಂಸ್ಥೆಗಳು ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಐರನ್ ಬೀಮ್ 100 ಕಿಲೋವ್ಯಾಟ್-ವರ್ಗದ ಶಕ್ತಿಶಾಲಿ ಲೇಸರ್ ಅನ್ನು ಬಳಸುತ್ತೆ.. ಇದು ಸುಮಾರು 10 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಬರುವ ಶತ್ರುಗಳ ಯಾವುದೇ ಬೆದರಿಕೆಯನ್ನು ಟಾರ್ಗೆಟ್ ಮಾಡಿ ಕೆಲವೇ ಸೆಕೆಂಡುಗಳಲ್ಲಿ ನಾಶಪಡಿಸುತ್ತದೆ. ಲೇಸರ್ ಕಿರಣಗಳು ಬೆಳಕಿನ ವೇಗದಲ್ಲಿ ಚಲಿಸುವುದರಿಂದ, ಟಾರ್ಗೆಟ್ ಅನ್ನು ಗುರುತಿಸಿದ ತಕ್ಷಣವೇ ಅದನ್ನು ತಲುಪಿ ನಾಶಪಡಿಸುತ್ತವೆ. ಇದರಿಂದ ಶತ್ರುಗಳಿಗೆ ರಿಯಾಕ್ಟ್ ಮಾಡಲು ಸಮಯವೇ ಸಿಗಲ್ಲ. ದಕ್ಷಿಣ ಇಸ್ರೇಲ್‌ನಲ್ಲಿ ರಾಕೆಟ್‌ಗಳು, ಮೋರ್ಟಾರ್‌ಗಳು ಮತ್ತು ಯುಎವಿಗಳ ವಿರುದ್ಧ ನಡೆದ ಯಶಸ್ವಿ ಪರೀಕ್ಷೆಗಳ ನಂತರ ಐರನ್ ಬೀಮ್ ಅನ್ನು ಸಂಪೂರ್ಣವಾಗಿ ಆಪರೇಷನ್‌ಗೆ ಸಿದ್ಧ ಎಂದು ಘೋಷಣೆ ಮಾಡಲಾಗಿದೆ.**

## ಭಾರತವನ್ನು ಹೆದರಿಸುತ್ತೇನೆ ಎಂಬುದು ನಿಮ್ಮ ಭ್ರಮೆ: ರಷ್ಯಾ ಆಕ್ರೋಶ

- ಡೊನಾಲ್ಡ್ ಟ್ರಂಪ್ ಭಾರತ ವಿರೋಧಿ ಹೇಳಿಕೆಗಳ ವಿರುದ್ಧ ರಷ್ಯಾ ಆಕ್ರೋಶ.
- ಭಾರತವನ್ನು ಹೆದರಿಸುವ ಭ್ರಮೆ ಕೈಬಿಡುವಂತೆ ಅಮೆರಿಕ ಅಧ್ಯಕ್ಷರಿಗೆ ಸರ್ಗೆಯ್ ಲಾವ್ರೊವ್ ಸಲಹೆ.
- ಭಾರತ ಮತ್ತು ಚೀನಾದಂತ ಪ್ರಾಚೀನ ನಾಗರಿಕತೆಗಳಿಗೆ ಆದೇಶ ನೀಡಬಾರದು ಎಂದ ರಷ್ಯಾದ ವಿದೇಶಾಂಗ ಸಚಿವ.

**ಮಾಸ್ಕೋ:** ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಚೀನಾದ ಟಿಯಾಂಜಿನ್ ನಗರದಲ್ಲಿ ನಡೆದ ಶಾಂಘೈ ಸಹಕಾರ ಒಕ್ಕೂಟ (ಎಸ್‌ಸಿಒ)ದ ಶೃಂಗಸಭೆಯಲ್ಲಿ ಭೇಟಿ ಮಾಡಿದ್ದೇ ಮಾಡಿದ್ದು, ಸಂಪೂರ್ಣ ರಷ್ಯನ್ ಆಡಳಿತ ಭಾರತದ ಪರವಾಗಿ ನಿರಂತರ ಹೇಳಿಕೆಗಳನ್ನು ನೀಡುತ್ತಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಯಾವುದೇ ಭಾರತ ವಿರೋಧಿ ಹೇಳಿಕೆಗಳನ್ನು ಬಹಿರಂಗವಾಗಿ ಮತ್ತು ತೀವ್ರವಾಗಿ ಖಂಡಿಸುತ್ತಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಆಡಳಿತ, ದಿನದಿಂದ ದಿನಕ್ಕೆ ಭಾರತದ ಪರವಾಗಿ ತನ್ನ ಧ್ವನಿಯನ್ನು ಗಟ್ಟಿಗೊಳಿಸುತ್ತಿದೆ. ಇದಕ್ಕೆ ಭಾರತವನ್ನು ಬೆಂಬಲಿಸಿ ಪುಟಿನ್ ಮತ್ತು ಅವರ ಮಂತ್ರಿಗಳು ನೀಡುತ್ತಿರುವ ಹೇಳಿಕೆಗಳು ಸಾಕ್ಷಿ. ಭಾರತ ಪರವಾಗಿ ರಷ್ಯಾ ಹೇಳಿಕೆಗಳು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿವೆ. ಸುಂಕ ಸಮರ ವಿಚಾರವಾಗಿ ಮತ್ತೆ ಡೊನಾಲ್ಡ್ ಟ್ರಂಪ್ ಅವರನ್ನು ತರಾಟೆಗೆ ತೆಗೆದುಕೊಂಡಿರುವ ರಷ್ಯಾದ ವಿದೇಶಾಂಗ ಸಚಿ ಸರ್ಗೆಯ್ ಲಾವ್ರೊವ್, ಭಾರತ ಮತ್ತು ಚೀನಾದಂತಹ ಪ್ರಾಚೀನ ನಾಗರಿಕತೆಗಳು ಯಾವುದೇ ಬಾಹ್ಯ ಶಕ್ತಿಗಳ ಅಂತಿಮ ಸೂಚನೆಗಳಿಗೆ ಮಣಿಯುವುದಿಲ್ಲ. ಹೀಗಾಗಿ ಸುಂಕ ಒತ್ತಡಗಳು ಫಲ ನೀಡುವುದಿಲ್ಲ ಎಂದು ಹೇಳಿದ್ದಾರೆ.



**ಧಮ್ಕಿ ನಡೆಯದು ಎಂದ ಲಾವ್ರೊವ್:** ರಷ್ಯಾದ ಪ್ರಮುಖ ಚಾನೆಲ್ 1 ಟಿವಿಯ 'ದಿ ಗ್ರೇಟ್ ಗೇಮ್' ಕಾರ್ಯಕ್ರಮದಲ್ಲಿ ಮಾತನಾಡಿದ ಸರ್ಗೆಯ್ ಲಾವ್ರೊವ್, ಯಾವ ದೇಶಗಳೊಂದಿಗೆ ಎಂತಹ ಸಂಬಂಧ ಹೊಂದಬೇಕು ಎಂದು ಚೀನಾ ಮತ್ತು ಭಾರತದಂತಹ ದೇಶಗಳಿಗೆ ಯಾರೂ ಪಾಠ ಮಾಡಲು ಸಾಧ್ಯವಿಲ್ಲ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ರಷ್ಯಾದ ಇಂಧನವನ್ನು ಖರೀದಿಸುವುದನ್ನು ನಿಲ್ಲಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿರಂತರ ಒತ್ತಡ, ಭಾರತ ಮತ್ತು ಚೀನಾವನ್ನು ದೂರ ತಳ್ಳುತ್ತಿದೆ. ಈ ಬೆಳವಣಿಗೆ ಹೊಸ ಇಂಧನ ಮಾರುಕಟ್ಟೆಗಳು ಮತ್ತು ಹೊಸ ಸಂಪನ್ಮೂಲಗಳನ್ನು ಹುಡುಕುವಂತೆ ಎರಡೂ ರಾಷ್ಟ್ರಗಳನ್ನೂ ಒತ್ತಾಯಿಸುತ್ತಿದೆ. ಆದರೆ ಭಾರತ ಮತ್ತು ಚೀನಾಗೆ ಆದೇಶ ನೀಡುವ ಮೂಲಕ ಎಲ್ಲವನ್ನೂ ಸರಿ ಮಾಡುವುದಾಗಿ ಹೇಳುತ್ತಿರುವ ಟ್ರಂಪ್, ಆದಷ್ಟು ಬೇಗ ತಮ್ಮ ಭ್ರಮೆಯಿಂದ ಹೊರಬರಬೇಕು ಎಂದು ರಷ್ಯಾದ ವಿದೇಶಾಂಗ ಸಚಿವರು ಸೂಚ್ಯವಾಗಿ ಹೇಳಿದರು.

## ಮಧ್ಯರಾತ್ರಿಯೇ ಆಪರೇಷನ್ ಸಿಂಧೂರ್ ನಡೆದದ್ದೇಕೆ?




**ರಾಂಚಿ:** ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ನಡೆದ ನರಮೇಧಕ್ಕೆ ಪ್ರತಿಕಾರವಾಗಿ ಸೇನಾ ಪಡೆಗಳು ಪಾಕಿಸ್ತಾನ ಹಾಗೂ ಪಿಒಕೆ ಮೇಲೆ ನಡೆಸಿದ ಆಪರೇಷನ್ ಸಿಂಧೂರ ಕಾರ್ಯಾಚಾರಣೆಯನ್ನು ಮಧ್ಯರಾತ್ರಿಯೇ ಏಕೆ ನಡೆಸಲಾಯಿತು ಎಂಬ ಗುಟ್ಟು ಕೊನೆಗೂ ರಟ್ಟಾಗಿದೆ.

**ಗುಟ್ಟು ಬಿಟ್ಟುಕೊಟ್ಟ ಸಿಡಿಎಸ್**

ಭಾರತದ ರಕ್ಷಣಾ ಸೇನಾ ಸಿಬ್ಬಂದಿ ಜನರಲ್ ಅನಿಲ್ ಚೌಹಾನ್ ಅವರು ರಾಂಚಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಪರೇಷನ್ ಸಿಂಧೂರದ ಬಗ್ಗೆ ಮಹತ್ವದ ಮಾಹಿತಿಯೊಂದನ್ನು ರಾತ್ರೋರಾತ್ರಿ ವೈಮಾನಿಕ ದಾಳಿ ನಡೆಸುವುದಕ್ಕೆ ಮುಖ್ಯವಾಗಿ ಎರಡು ಪ್ರಮುಖ ಕಾರಣಗಳಿವೆ ಎಂದು ಹೇಳಿದ ಚೌಹಾಣ್ ಮೊದಲನೆಯದಾಗಿ, ರಾತ್ರಿಯ ವೇಳೆಯೂ ಸಹ ನಮ್ಮ ತಂತ್ರಜ್ಞಾನದ ಮೂಲಕ ಸ್ಪಷ್ಟ ಚಿತ್ರಣವನ್ನು ಪಡೆಯುವ ವಿಶ್ವಾಸ ನಮಗಿತ್ತು. ಎರಡನೇಯದಾಗಿ, ಅಲ್ಲಿನ ಸಾಮಾನ್ಯ ಜನರಿಗೆ ಯಾವುದೇ ಹಾನಿಯಾಗದಂತೆ, ಸಾವುಗಳು ಸಂಭವಿಸದಂತೆ ತಡೆಯುವುದು ನಮ್ಮ ಉದ್ದೇಶವಾಗಿತ್ತು ಎಂದು ಹೇಳಿದರು. ಪಾಕಿಸ್ತಾನದ ಮೇಲೆ ದಾಳಿ ಮಾಡುವುದಕ್ಕೆ ಉತ್ತಮ ಸಮಯ ಬೆಳಿಗ್ಗೆ 5:30 ರಿಂದ 6:00 ಎಂದು ರಕ್ಷಣಾ ಸಿಬ್ಬಂದಿ ಮುಖ್ಯಸ್ಥರು ಹೇಳುತ್ತಾರೆ. ಆದರೆ ಬೆಳಗಿನ ಪ್ರಾರ್ಥನೆಯಿಂದಾಗಿ ಸಾಕಷ್ಟು ನಾಗರಿಕರು ಇದೇ ವೇಳೆಯಲ್ಲಿ ಸಂಚಾರ ಮಾಡುತ್ತಿದ್ದರು ಎಂದು ಹೇಳಿದರು. ಬಹವಾಲ್ಪುರ್ ಮತ್ತು ಮುರಿಡ್ಕೆಯ ಆ ಸಮಯದಲ್ಲಿ, ಮೊದಲ ಅಜಾನ್ ಅಥವಾ ಮೊದಲ ಪ್ರಾರ್ಥನೆ ನಡೆಯುತ್ತದೆ, ಆ ಸಮಯದಲ್ಲಿ ಸಾಕಷ್ಟು ನಾಗರಿಕರ ಸಂಚಾರ ಇರುತ್ತೆ, ಒಂದು ವೇಳೆ ಈ ಸಂದರ್ಭದಲ್ಲಿ ದಾಳಿ ಮಾಡಿದ್ದರೆ ಅನೇಕ ಜನರು ಸಾವುನೋವುಗಳನ್ನು ಎದುರಿಸಬೇಕಿತ್ತು ಎಂದರು.

## ಆಪರೇಶನ್ ಸಿಂಧೂರದ ಸತ್ಯ ಒಪ್ಪಿಕೊಂಡ ಮತ್ತೋರ್ವ ಪಾಕ್ ಉಗ್ರ

**ಇಸ್ಲಮಾಬಾದ್:** ಭಾರತ ಮತ್ತು ಪಾಕಿಸ್ತಾನದ ನಡುವೆ ಸಂಘರ್ಷ ಮುಗಿದು ಹಲವು ಸಮಯ ಕಳೆದಿದೆ. ಆದರೆ ಇದರ ಪರಿಣಾಮಗಳು ಮಾತ್ರ ಇನ್ನೂ ಮುಗಿದಿಲ್ಲ. ಅದರಲ್ಲೂ ಭಾರತದ ದಾಳಿಯಲ್ಲಿ ಏನೂ ಆಗೇ ಇಲ್ಲ ಎಂದು ಮೀಸೆ ತಿರುವುತ್ತಿರುವ ಪಾಕಿಸ್ತಾನದ ಸುಳ್ಳುಗಳನ್ನು ಸ್ವತಃ ಅಲ್ಲಿನೇ ಉಗ್ರರೇ ಬಟಾಬಯಲು ಮಾಡುತ್ತಿದ್ದಾರೆ.

ಈ ಹಿಂದೆ ಪಾಕಿಸ್ತಾನದ ಸುಳ್ಳುಗಳನ್ನು ಜೈಶ್-ಎ-ಮೊಹಮ್ಮದ್ ಬಯಲು ಮಾಡಿತ್ತು. ಇದೀಗ ಲಷ್ಕರ್-ಎ-ತೊಯ್ಬಾ ಸರದಿ. ಭಾರತದ 'ಆಪರೇಷನ್ ಸಿಂಧೂರ'ದ ಯಶಸ್ಸನ್ನು ಈ ಉಗ್ರಗಾಮಿ ಸಂಘಟನೆಯೂ ಒಪ್ಪಿಕೊಂಡಿದೆ. ಭಾರತೀಯ ಸೇನೆಯು ತಮ್ಮ ಪ್ರಮುಖ ಭಯೋತ್ಪಾದಕ ಶಿಬಿರವನ್ನು ನಾಶಪಡಿಸಿರುವುದಾಗಿ ಲಷ್ಕರ್ ಕಮಾಂಡರ್ ಖಾಸಿಂ ಎಂಬಾತನೇ ವೀಡಿಯೋ ಮೂಲಕ ಸತ್ಯ ಬಾಯ್ಬಿಟ್ಟಿದ್ದಾನೆ.

**ಸತ್ಯ ಒಪ್ಪಿಕೊಂಡ ಲಷ್ಕರ್ ಕಮಾಂಡರ್:** ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ವಿಡಿಯೋದಲ್ಲಿ, ಲಷ್ಕರ್-ಎ-ತೊಯ್ಬಾ ಕಮಾಂಡರ್ ಖಾಸಿಂ, ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ನಾಶವಾದ ಮುರಿಡ್ಕೆಯಲ್ಲಿರುವ ತಮ್ಮ ಪ್ರಧಾನ ಕಚೇರಿ 'ಮರ್ಕಝ್ ತಯ್ಯಬಾವನ್ನು ಹಿಂದಿಗಿಂತಲೂ ದೊಡ್ಡದಾಗಿ ಪುನರ್ ನಿರ್ಮಿಸಲಾಗುತ್ತಿದೆ ಎಂದು ಹೇಳಿಕೊಂಡಿದ್ದಾನೆ.



ನಾನು ಭಾರತೀಯ ದಾಳಿಯಿಂದ ನಾಶವಾದ ಮುರಿಡ್ಕೆಯಲ್ಲಿನ ಮರ್ಕಝ್ ತಯ್ಯಬಾದ ಅವಶೇಷಗಳ ಮೇಲೆ ನಿಂತಿದ್ದೇನೆ. ಇದರ ಪುನರ್ ನಿರ್ಮಾಣ ಕಾರ್ಯ ನಡೆಯುತ್ತಿದೆ. ದೇವರ ದಯೆಯಿಂದ ಈ ಮಸೀದಿಯನ್ನು ಹಿಂದಿಗಿಂತಲೂ ದೊಡ್ಡದಾಗಿ ನಿರ್ಮಿಸಲಾಗುವುದು, ಎಂದು ನಿರ್ಮಾಣ ಹಂತದಲ್ಲಿರುವ ಸ್ಥಳದ ಮುಂದೆ ನಿಂತು ಆತ ಹೇಳಿದ್ದಾನೆ. ನಾಶವಾದ ಇದೇ ಮಸೀದಿಯಲ್ಲಿ ಅನೇಕ ಮುಜಾಹಿದ್ದೀನ್‌ಗಳು, ತಲಬಾ' ತರಬೇತಿ ಪಡೆದು 'ವಿಜಯ' ಸಾಧಿಸಿದ್ದರು ಎಂಬುದನ್ನೂ ಆತ ಒಪ್ಪಿಕೊಂಡಿದ್ದಾನೆ. ಆದರೆ ಪಾಕಿಸ್ತಾನ ಮಾತ್ರ ಈ ಕಟ್ಟಡವನ್ನು ಉಗ್ರಗಾಮಿ ಸಂಘಟನೆ ಬಳಸುತ್ತಿರಲಿಲ್ಲ ಎಂದು ವಾದಿಸಿತ್ತು.

# ಪತ್ನಿ ಮಹಿಳೆ ಎಂಬುದಕ್ಕೆ ವೈಜ್ಞಾನಿಕ ಸಾಕ್ಷಿ ನೀಡಲು ಮುಂದಾದ ಫ್ರಾನ್ಸ್ ಅಧ್ಯಕ್ಷ

### ಮ್ಯಾಕ್ರನ್ ದಂಪತಿಯ ಮಾನಸಿಕ ಒತ್ತಡಗಳು, ಬ್ರಿಗಿಟ್ಟೆ ಮ್ಯಾಕ್ರನ್ ಟ್ರಾನ್ಸ್‌ಜೆಂಡರ್ ಮಹಿಳೆ ಎಂದು ಆರೋಪಿಸಿರುವ ಕ್ಯಾಂಡೇಸ್ ಓವೆನ್ಸ್

- ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಪತ್ನಿಯ ಲಿಂಗತ್ವ ವಿವಾದ.
- ಬ್ರಿಗಿಟ್ಟೆ ಮ್ಯಾಕ್ರನ್ ಟ್ರಾನ್ಸ್‌ಜೆಂಡರ್ ಮಹಿಳೆ ಎಂದು ಆರೋಪಿಸಿರುವ ಕ್ಯಾಂಡೇಸ್ ಓವೆನ್ಸ್.
- ಅಮೆರಿಕದ ನ್ಯಾಯಲಯಕ್ಕೆ ವೈಜ್ಞಾನಿಕ ಸಾಕ್ಷಿ ನೀಡಲು ಮುಂದಾದ ಮ್ಯಾಕ್ರನ್ ದಂಪತಿ.

**ಅಮಿಯೆನ್ಸ್‌ಪ್ಯಾರಿಸ್:** ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಮತ್ತು ಅವರ ಪತ್ನಿ ಬ್ರಿಗಿಟ್ಟೆ ನಡುವಿನ ಸಂಬಂಧಗಳ ಬಗ್ಗೆ ಆಗ್ಗಾಗ್ಗೆ ವಿಚಿತ್ರ ವರದಿಗಳು ಬರುತ್ತಿರುತ್ತವೆ. ಇತ್ತೀಚಿಗಷ್ಟೇ ವಿಮಾನದಲ್ಲಿ ಬ್ರಿಗಿಟ್ಟೆ ಮತ್ತು ಮ್ಯಾಕ್ರನ್ ಕಿತ್ತಾಟ ನಡೆಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿತ್ತು.

ಟ್ರಾನ್ಸ್‌ಜೆಂಡರ್ ಮಹಿಳೆ ಎಂಬ ಆರೋಪಗಳನ್ನು ಮಾಡಲಾಗುತ್ತಿದೆ. ಇದರಿಂದ ಬೇಸತ್ತಿರುವ ಇಮ್ಯಾನ್ಯುಯೆಲ್ ಮ್ಯಾಕ್ರನ್, ತಮ್ಮ ಪತ್ರಿ ಮಹಿಳೆ ಎಂಬುದನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಲು ಮುಂದಾಗಿದ್ದಾರೆ.

ಹೌದು, ತಮ್ಮ ಪತ್ನಿ ಬ್ರಿಗಿಟ್ಟೆ ಟ್ರಾನ್ಸ್‌ಜೆಂಡರ್ ಮಹಿಳೆ ಎಂಬ ಆರೋಪಗಳನ್ನು ತಳ್ಳಿಹಾಕಿರುವ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್, ಆಕೆ ಓರ್ವ ಮಹಿಳೆ ಎಂಬುದಕ್ಕೆ ವೈಜ್ಞಾನಿಕ ಪುರಾವೆಗಳನ್ನು ಜನರ ಮುಂದಿಡಲು ನಿರ್ಧರಿಸಿದ್ದಾರೆ. ಅಮೆರಿಕದ ತೀವ್ರ ಬಲಪಂಥೀಯ ನಾಯಕಿ ಕ್ಯಾಂಡೇಸ್ ಓವೆನ್ಸ್ ಅವರು ಪದೇ ಪದೇ ಬ್ರಿಗಿಟ್ಟೆ ಮಹಿಳೆಯಲ್ಲ ಎಂದು ಆರೋಪಿಸುತ್ತಿದ್ದು, ಬ್ರಿಗಿಟ್ಟೆ ವಿರುದ್ಧ ಟ್ರಾನ್ಸ್‌ಫೋಬಿಕ್ ಆರೋಪಗಳನ್ನು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬ್ರಿಗಿಟ್ ಅವರು ಓವೆನ್ಸ್ ವಿರುದ್ಧ ಮಾನನಷ್ಟ ಮೊಕದ್ದಮೆ ಕೂಡ ಹೂಡಿದ್ದಾರೆ. ಕ್ಯಾಂಡೇಸ್ ಓವೆನ್ಸ್ ಅವರು ಬ್ರಿಗಿಟ್ಟೆ ಹುಟ್ಟಿನಿಂದ ಪುರುಷರಾಗಿದ್ದು, ಅವರ ಮೂಲ ಹೆಸರು ಜೀನ್-ಮೈಕೆಲ್ ಟ್ರೋಗಿನ್ಯೂಯಕ್ಸ್ ಆಗಿದೆ. ಅವರು ಹೆಣ್ಣಾಗಿ ಪರಿವರ್ತನೆ ಹೊಂದಿದ ಬಳಿಕ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಅವರನ್ನು ಮದುವೆಯಾಗಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ.

ಈ ಕುರಿತು ಮಾತನಾಡಿರುವ ಇಮ್ಯಾನ್ಯುಯೆಲ್ ಮ್ಯಾಕ್ರನ್ ಪರ ವಕೀಲ ಕ್ಲೇರ್ ಲಾಕ್, ಫ್ರಾನ್ಸ್ ಅಧ್ಯಕ್ಷರು ಇಂತಹ ಸುಳ್ಳು ಆರೋಪಗಳಿಂದ ತೀವ್ರ ನೊಂದಿದ್ದು, ತಮ್ಮ ಪತ್ನಿ ಓರ್ವ ಸಾಮಾನ್ಯ ಮಹಿಳೆ ಎಂದು ಸಾಬೀತುಪಡಿಸಲು ಅಮೆರಿಕದ ನ್ಯಾಯಾಲಯಕ್ಕೆ ವೈಜ್ಞಾನಿಕ ಪುರಾವೆಗಳು ಮತ್ತು ಛಾಯಾಚಿತ್ರಗಳನ್ನು ನೀಡಲಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ವೃತ್ತಿ ಮತ್ತು ಕುಟುಂಬ ಜೀವನದ ಜವಾಬ್ದಾರಿ ಹೊತ್ತಿರುವ ಯಾವುದೇ ವ್ಯಕ್ತಿ, ಇಂತಹ ಸುಳ್ಳು ಆರೋಪಗಳಿಂದ ಮಾನಸಿಕವಾಗಿ ಕುಗ್ಗುವುದು ಸಹಜ. ಫ್ರಾನ್ಸ್ ಅಧ್ಯಕ್ಷರು ಕೂಡ ಇಂತದ್ದೇ ಮಾನಸಿಕ ಒತ್ತಡವನ್ನು ಎದುರಿಸುತ್ತಿದ್ದು, ತಮ್ಮ ಪತ್ನಿಯ ಲಿಂಗದ ಕುರಿತು ಕೇಳಲಾಗುತ್ತಿರುವ ಪ್ರಶ್ನೆಗಳಿಂದ ತೀವ್ರವಾಗಿ ನೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಬ್ರಿಗಿಟ್ಟೆ ಓರ್ವ ಮಹಿಳೆ ಎಂಬುದನ್ನು ಸಾಬೀತುಪಡಿಸಲು, ಅಮೆರಿಕದ ನ್ಯಾಯಾಲಯಕ್ಕೆ ವೈಜ್ಞಾನಿಕ ಪುರಾವೆಗಳನ್ನು ಒದಗಿಸಲಿದ್ದಾರೆ ಎಂದು ಕ್ಲೇರ್ ಲಾಕ್ ಹೇಳಿದ್ದಾರೆ.

**ಮ್ಯಾಕ್ರನ್ ದಂಪತಿಯ ಮಾನಸಿಕ ಒತ್ತಡಗಳು**



ಬ್ರಿಗಿಟ್ಟೆ ಗರ್ಭಿಣಿಯಾಗಿರುವ ಮತ್ತು ಅವರು ಮಕ್ಕಳನ್ನು ಬೆಳೆಸುತ್ತಿರುವ ಚಿತ್ರಗಳನ್ನು ನ್ಯಾಯಾಲಯಕ್ಕೆ ಪುರಾವೆಯಾಗಿ ಒದಗಿಸಲಿದ್ದಾರಾ? ಎಂಬ ಪ್ರಶ್ನೆಗೆ, ಕ್ಲೇರ್ ಲಾಕ್ ಅವರು ಕಾನೂನಿನ ನಿಯಮಗಳು, ಮಾನದಂಡಗಳಿಗೆ ಅನುಸಾರವಾಗಿ ಸಾಕ್ಷಿಗಳನ್ನು ಒದಗಿಸಲಾಗುತ್ತದೆ ಎಂದಷ್ಟೇ ಉತ್ತರಿಸಿದರು. ಮೂರು ಮಕ್ಕಳ ತಾಯಿಯಾಗಿರುವ 72 ವರ್ಷದ ಬ್ರಿಗಿಟ್ಟೆ ಮ್ಯಾಕ್ರನ್, ಉತ್ತರ ಫ್ರಾನ್ಸ್‌ನ ಅಮಿಯೆನ್ಸ್‌ನಲ್ಲಿರುವ ಪ್ರೌಢಶಾಲೆಯಲ್ಲಿ ಬೋಧಿಸುತ್ತಿದ್ದಾಗ, ಅವರಿಗಿಂತ 24 ವರ್ಷ ಚಿಕ್ಕವರಾಗಿದ್ದ ವಿದ್ಯಾರ್ಥಿ ಇಮ್ಯಾನ್ಯುಯೆಲ್ ಮ್ಯಾಕ್ರನ್ ಅವರನ್ನು ಪ್ರೀತಿಸಿ ವಿವಾಹವಾಗಿದ್ದರು. ಆದರೆ ಅವರ ಪ್ರೇಮ ಸಂಬಂಧ ಮತ್ತು ವೈವಾಹಿಕ ಸಂಬಂಧದ ಬಗ್ಗೆ ಆಗ್ಗಾಗ್ಗೆ ಪ್ರಶ್ನೆಗಳನ್ನು ಕೇಳಲಾಗುತ್ತದೆ.

## ಮಿನಿ ನ್ಯೂಸ್

### ಕೇರಳ ವಿಧಾನಸಭೆಯ ಕಲಾಪಗಳ ಮಧ್ಯೆಯೇ ಸಚಿವ ಶಿವನ್‌ಕುಟ್ಟಿ ಅಸ್ವಸ್ಥ

**ತಿರುವನಂತಪುರಂ:** ರಾಜ್ಯ ವಿಧಾನಸಭೆಯ ಶೂನ್ಯ ವೇಳೆಯಲ್ಲಿ ಪ್ರಶ್ನೆಗಳಿಗೆ ಸಉತ್ತರಿಸುವಾಗ ಆರೋಗ್ಯ ಸಮಸ್ಯೆ ಉಂಟಾದ ಹಿನ್ನಲೆಯಲ್ಲಿ ಕೇರಳದ ಶಿಕ್ಷಣ ಮತ್ತು ಕಾರ್ಮಿಕ ಸಚಿವ ವಿ. ಶಿವನ್ ಕುಟ್ಟಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಬೆಳಿಗ್ಗೆ 9 ಗಂಟೆಗೆ ಸದನದ ಕಲಾಪಗಳು ಪ್ರಾರಂಭವಾದ ಸುಮಾರು 10 ನಿಮಿಷಗಳ ನಂತರ, ಶಿವನ್‌ಕುಟ್ಟಿ ಅವರಿಗೆ ಇದ್ದಕ್ಕಿದ್ದಂತೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿದ್ದು,ಕೂಡಲೆ ಅವರನ್ನು ಆಡಳಿತ ಪಕ್ಷದ ಶಾಸಕರುನೆರವಿಗೆ ದಾವಿಸಿ ನಂತರ ಅವರನ್ನು ಸದನದಿಂದ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ವಿಧಾನಸಭೆ ಅಧಿಕಾರಿಯೊಬ್ಬರು ಹೇಳಿದರು, ಸಚಿವರಿಗೆ ನಿಜವಾಗಿ ಏನಾಯಿತು ಎಂಬುದು ಇನ್ನೂ ತಿಳಿದಿಲ್ಲ. ಇದು ಗಂಭೀರವಾಗಿ ಕಾಣುತ್ತಿಲ್ಲ, ಆದರೆ ಅವರನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸುವವರೆಗೆ ನಮಗೆ ಖಚಿತವಾಗಿ ತಿಳಿಯಲು ಸಾಧ್ಯವಿಲ್ಲ ಎಂದು ಅಧಿಕಾರಿ ಹೇಳಿದರು. ಶಿವನ್‌ಕುಟ್ಟಿ ಉತ್ತರಿಸಬೇಕಾದ ಉಳಿದ ಪ್ರಶ್ನೆಗಳನ್ನು ನಂತರ ಸಂಸದೀಯ ವ್ಯಾವಹಾರಗಳ ಸಚಿವ ಎಂ.ಬಿ. ರಾಜೇಶ್ ಕೈಗೆತ್ತಿಕೊಂಡರು.ಮುಖ್ಯಮಂತ್ರಿ ಸೇರಿದಂತೆ ಹಲವು ಸದಸ್ಯರು ಸಚಿವರ ಅನಾರೋಗ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದರು.

### ಮತ್ತೆ ಮೋದಿ ಹೊಗಳಿದ ಟ್ರಂಪ್

**ಲಂಡನ್:** ಅಮೆರಿಕ ಮತ್ತು ಭಾರತದ ನಡುವಿನ ಸಂಬಂಧ ಸುಧಾರಿಸುತ್ತಿರುವುದರ ನಡುವೆ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಧಾನಿ ನರೇಂದ್ರ ಮೋದಿ ಯವರನ್ನು ಹೊಗಳಿದ್ದಾರೆ. ಯುನೈಟೆಡ್ ಕಿಂಗ್ಡಮ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, ಭಾರತ ಹಾಗೂ ಭಾರತದ ಪ್ರಧಾನಿ ಮೋದಿ ನನಗೆ ಬಹಳ ಆಪ್ತ. ಅವರ ಹುಟ್ಟುಹಬ್ಬಕ್ಕೆ ನಾನು ಕರೆ ಮಾಡಿ ವಿಷ್ ಮಾಡಿದ್ದೆ. ನಿನ್ನೆಯಷ್ಟೇ ಅವರ ಜೊತೆ ಮಾತನಾಡಿದ್ದೆ. ನಾವು ಬಹಳ ಒಳ್ಳೆಯ ಒಡನಾಟ ಹೊಂದಿದ್ದೇವೆ. ನಾನು ಭಾರತಕ್ಕೆ ತುಂಬಾ ಹತ್ತಿರವಾಗಿದ್ದೇನೆ, ನಾನು ಭಾರತೀಯ ಪ್ರಧಾನಿಗೆ ತುಂಬಾ ಹತ್ತಿರವಾಗಿದ್ದೇನೆ. ನಾನು ನಿನ್ನೆ ಅವರೊಂದಿಗೆ ಮಾತನಾಡಿದೆ. ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದೆ. ನಮಗೆ ತುಂಬಾ ಉತ್ತಮ ಸಂಬಂಧವಿದೆ ಎಂದು ಹೇಳಿದರು.

ಗಾಜಾದಲ್ಲಿ ನಡೆಯುತ್ತಿರುವ ಹಿಂಸಾಚಾರ, ನಗರಗಳ ನಾಶ ಮತ್ತು ನಾಗರಿಕರ ಸಾವಿನ ಕುರಿತು ಮಾತನಾಡಿದ ಟ್ರಂಪ್, ನೀವು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಮನವೊಲಿಸಿ ಗಾಜಾದ ಕ್ರಮಗಳನ್ನು ನಿಲ್ಲಿಸುವಂತೆ ಕೇಳುತ್ತೀರಾ? ಎಂದು ಪ್ರಶ್ನಿಸಲಾಯಿತು. ಇದಕ್ಕೆ ಟ್ರಂಪ್ ಅಕ್ಟೋಬರ್ 7ರ ಘಟನೆಗಳು ಮಾನವ ಇತಿಹಾಸದ ಅತ್ಯಂತ ಕೆಟ್ಟ ದಿನಗಳಲ್ಲಿ ಒಂದಾಗಿದೆ. ಅದನ್ನು ಮರೆಯಲು ಸಾಧ್ಯವಿಲ್ಲ. ಯುದ್ಧವನ್ನು ಕೊನೆಗೊಳಿಸಲು ನಾವು ಬಯಸುತ್ತೇವೆ, ಆದರೆ ಮೊದಲು ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕು ಎಂದು ಹೇಳಿದರು. ಯುರೋಪಿಯನ್ ರಾಷ್ಟ್ರಗಳು ಇನ್ನೂ ರಷ್ಯಾದಿಂದ ತೈಲ ಖರೀದಿಸುತ್ತಿರುವುದನ್ನು ಟೀಕಿಸುತ್ತಾ, ಇಂತಹ ಕ್ರಮಗಳು ಯುದ್ಧದಲ್ಲಿ ಮಾಸ್ಕೋವನ್ನು ಏಕಾಂಗಿಗೊಳಿಸಲು ನಡೆಯುತ್ತಿರುವ ಪ್ರಯತ್ನಗಳನ್ನು ದುರ್ಬಲಗೊಳಿಸುತ್ತವೆ ಎಂದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿಪ್ರಾಯಪಟ್ಟಿದ್ದಾರೆ.

### 2 ಗೋಲ್ಗಪ್ಪಾ ಕಮ್ಮಿ ಕೊಟ್ಟಿದ್ದಕ್ಕೆ ಮಹಿಳೆಯಿಂದ ಟ್ರಾಫಿಕ್ ಬ್ಲಾಕ್

**ವಡೋದರ:** ಎಂತೆಂಥಾ ಕೇಸುಗಳನ್ನು ಪೊಲೀಸರು ಹ್ಯಾಂಡಲ್ ಮಾಡಬೇಕು ನೋಡಿ.. ಸಾಮಾನ್ಯವಾಗಿ, ರಾಜಕೀಯ ನಾಯಕರ ಸಭೆ, ಇನ್ಯಾವುದೋ ಮೆರವಣಿಗೆ, ಜೋರು ಮಳೆಯಿಂದ ಟ್ರಾಫಿಕ್ ಜಾಮ್ ಆಗುವುದನ್ನು ಕೇಳಿದ್ದೇವೆ, ನೋಡಿದ್ದೇವೆ. ಆದರೆ, ಇಲ್ಲಾದ ಸಂಚಾರ ದಟ್ಟಣೆ ಇದ್ಯಾವುದಕ್ಕೂ ಸಂಬಂಧಿಸಿದಲ್ಲ. ನಗರದ ಸುರಸಾಗರ್ ಲೇಕ್ ಏರಿಯಾದಲ್ಲಿ ಈ ವಿಲಕ್ಷಣ ವಿದ್ಯಮಾನ ನಡೆದಿದೆ. ಮಹಿಳೆ, ರಸ್ತೆಬದಿ ಅಂಗಡಿಯಲ್ಲಿ ಗೋಲ್ಗಪ್ಪಾ ತಿನ್ನಲು ಬಂದಿದ್ದಾರೆ. ಇಪ್ಪತ್ತು ರೂಪಾಯಿಯನ್ನು ಅಂಗಡಿಯವನಿಗೆ ಕೊಟ್ಟು, ಗೋಲ್ಗಪ್ಪಾ ಕೊಡಲು ಹೇಳಿದ್ದಾರೆ. ಆತ, ಇಪ್ಪತ್ತು ರೂಪಾಯಿ ಇಸ್ಕೊಂಡು ನಾಲ್ಕು ಗೋಲ್ಗಪ್ಪಾವನ್ನು ತಟ್ಟೆಗೆ ಹಾಕಿದ್ದಾನೆ. ಆದರೆ, ಈಕೆಯ ಪ್ರಕಾರ ಇಪ್ಪತ್ತು ರೂಪಾಯಿಗೆ ಆರು ಗೋಲ್ಗಪ್ಪಾ ಬರಬೇಕು. ಆದರೆ, ಅಂಗಡಿಯವನ ಪ್ರಕಾರ, ನಾಲ್ಕೇ. ಇಬ್ಬರ ನಡುವೆ, ಮಾತಿಗೆ ಮಾತು ಬೆಳೆದಿದೆ. ಅಂಗಡಿಯವನು ಎರಡು ಹಾಕಲು ಒಪ್ಪಲಿಲ್ಲ, ಅದಕ್ಕೆ ಇವಳು ಕೇಳಲಿಲ್ಲ. ಅಂಗಡಿಯವನು, ಎಕ್ಸ್‌ಟ್ರಾ ಹಾಕಲು ಒಪ್ಪದಿದ್ದಾಗ, ಬ್ಯೂಸಿ ರಸ್ತೆಯ ಮಧ್ಯದಲ್ಲೇ ಧರಣಿ ಕುಳಿತುಕೊಂಡು ಬಿಟ್ಟಿದ್ದಾರೆ.

ಟ್ರಾಫಿಕ್ ಓಡಾಟ ಜಾಸ್ತಿಯಿರುವ ಸುರಸಾಗರ್ ಏರಿಯಾದಲ್ಲಿ, ಮಹಿಳೆಯ ಅಚಾನಕ್ ಪ್ರತಿಭಟನೆಯಿಂದಾಗಿ ಟ್ರಾಫಿಕ್ ಜಾಮ್ ಆಗಿದೆ. ಪೊಲೀಸರು ಫುಲ್ ಗೊಂದಲಕ್ಕೆ ಬಿದ್ದಿದ್ದಾರೆ. ಯಾರೂ ಕೂಡಾ, ಮೆರವಣಿಗೆ ಅಥವಾ ಇನ್ಯಾವುದೋ ಕಾರ್ಯಕ್ರಮದ ಅನುಮತಿಯನ್ನು ಕೇಳಲಿಲ್ಲ. ಆದರೂ, ಏನಕ್ಕೆ ಟ್ರಾಫಿಕ್ ಜಾಮ್ ಎಂದು ಸ್ಥಳಕ್ಕೆ ಬಂದಿದ್ದಾರೆ. ಸ್ಥಳಕ್ಕೆ ಬಂದಾಗ, ಮಹಿಳೆಯ ರಸ್ತೆಯ ಮಧ್ಯದಲ್ಲಿ ಕೂತಿದ್ದಾರೆ.

### ಪಾಕ್ ವಿರುದ್ಧ ಕ್ರಮಕ್ಕೆ ಚಿಂತನೆ

**ನವದೆಹಲಿ:** ಏಷ್ಯಾಕಪ್‌ನಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಸುತ್ತಲಿನ ವಿವಾದ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಬುಧವಾರದ ಪಂದ್ಯಕ್ಕೂ ಮುನ್ನ ಐಸಿಸಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಇಮೇಲ್ ಕಳುಹಿಸಿದೆ. ಯುನೈಟೆಡ್ ಅರಬ್ ಎಮಿರೇಟ್ಸ್ ವಿರುದ್ಧದ ಏಷ್ಯಾ ಕಪ್ ಪಂದ್ಯಕ್ಕೂ ಮುನ್ನ ಹಲವಾರು ಪಂದ್ಯಾವಳಿ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪಾಕಿಸ್ತಾನದ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಐಸಿಸಿ ಚಿಂತನೆ ನಡೆಸುತ್ತಿದೆ. ಇಲ್ಲಿಯವರೆಗೆ, ಪಿಸಿಬಿಯ ಕಳ್ಳಾಟ ಮುಂದುವರೆದಿದ್ದು, ಯುಎಇ ವಿರುದ್ಧದ ಪಂದ್ಯದ ಆರಂಭವನ್ನು ಒಂದು ಗಂಟೆ ವಿಳಂಬ ಮಾಡಿದೆ. ಆದರೆ ಇದೀಗ ಐಸಿಸಿ ಕ್ರಮ ಕೈಗೊಳ್ಳುತ್ತಿದೆ. ಯುಎಇ ವಿರುದ್ಧದ ಪಂದ್ಯಕ್ಕೂ ಮೊದಲು, ಪಾಕಿಸ್ತಾನ ನಿಯಮಗಳಿಗೆ ವಿರುದ್ಧವಾದ ಕೆಲವು ಕೃತ್ಯಗಳನ್ನು ಎಸಗಿದೆ. ಪರಿಣಾಮವಾಗಿ, ಐಸಿಸಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಇಮೇಲ್ ಕಳುಹಿಸಿದೆ. ಐಸಿಸಿ ಕೂಡ ಕ್ರಮ ಕೈಗೊಳ್ಳಲು ಸಿದ್ಧತೆ ನಡೆಸುತ್ತಿದೆ.


ಆಟಗಾರರು ಮತ್ತು ಪಂದ್ಯ ಅಧಿಕಾರಿಗಳ ಪ್ರದೇಶದಲ್ಲಿ ನಿಯಮಗಳ ಉಲ್ಲಂಘನೆಯ ಬಗ್ಗೆ ಐಸಿಸಿ ಪಿಸಿಬಿಗೆ ಅಸಮಾಧಾನ ವ್ಯಕ್ತಪಡಿಸಿ ಇಮೇಲ್ ಕಳುಹಿಸಿದೆ. ಪಿಎಂಒಎ ಪ್ರದೇಶದಲ್ಲಿ ರೆಕಾರ್ಡಿಂಗ್ ಮಾಡುವುದು ಗಂಭೀರ ಉಲ್ಲಂಘನೆ ಎಂದು ಪಿಸಿಬಿಗೆ ಬರೆದ ಇಮೇಲ್‌ನಲ್ಲಿ ಐಸಿಸಿ ತಿಳಿಸಿದೆ. ವರದಿಯ ಪ್ರಕಾರ, ಪಿಸಿಬಿ ಮ್ಯಾಚ್ ರೆಫರಿ ಆಂಡಿ ಪೈಕ್ರಾಫ್ಟ್, ಪಾಕಿಸ್ತಾನ ನಾಯಕ ಸಲ್ಮಾನ್ ಅಘಾ ಮತ್ತು ಕೋಚ್ ಮೈಕ್ ಹೆಸ್ಸನ್ ನಡುವಿನ ಸಂಪೂರ್ಣ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ಯತ್ನಿಸಿದೆ. ಪಿಎಂಒಎ ಪ್ರದೇಶದಲ್ಲಿ ಹಾಗೆ ಮಾಡುವುದು ಸಮರ್ಥನೀಯವಲ್ಲ ಎಂದಾಗ, ಅವರು ಪಂದ್ಯದಿಂದ ಹಿಂದೆ ಸರಿಯುವುದಾಗಿ ಬೆದರಿಕೆ ಹಾಕಿದ್ದಾರೆ.



# ಒಟಿಟಿಗೆ ಬಂತು ಮಹಾವತಾರ ನರಸಿಂಹ

ಹೊಂಬಾಳೆ ಫಿಲಮ್ಸ್ ಪ್ರಸ್ತುತ ಪಡಿಸಿ, ವಿತರಣೆ ಮಾಡಿದ್ದ 'ಮಹಾವತಾರ್ ನರಸಿಂಹ' ಅನಿಮೇಷನ್ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಯಾರೂ ನಿರೀಕ್ಷಿಸಿದ ಕಲೆಕ್ಷನ್ ಮಾಡಿದೆ. ಈ ಅನಿಮೇಷನ್ ಸಿನಿಮಾ ದೊಡ್ಡ ಸ್ಟಾರ್ ನಟರುಗಳ ಸಿನಿಮಾವನ್ನೇ ಹಿಂದಿಕ್ಕಿದೆ. ಇದೀಗ ಈ ಸಿನಿಮಾ ಒಟಿಟಿಗೆ ಬಂದಿದೆ. ಯಾವ ಒಟಿಟಿ ಯಾವ ದಿನದಿಂದ ನೋಡಬಹುದು ಇಲ್ಲಿದೆ ಮಾಹಿತಿ... ಅಶ್ವಿನ್ ಕುಮಾರ್ ನಿರ್ದೇಶನದ, ಹೊಂಬಾಳೆ ಫಿಲ್ಮ್ಸ್ ಪ್ರೆಸೆಂಟ್ ಮಾಡಿದ ಪೌರಾಣಿಕ ಕಥೆಯನ್ನು ಆಧರಿಸಿದ ಅನಿಮೇಟೆಡ್ ಚಿತ್ರ 'ಮಹಾವತಾರ ನರಸಿಂಹ' ಜುಲೈ 25 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಯಿತು. ಈ ಚಿತ್ರದ ಕಥೆ, ಛಾಯಾಗ್ರಹಣ ಮತ್ತು ಅನಿಮೇಷನ್ ಎಲ್ಲರ ಹೃದಯ ಗೆದ್ದಿತ್ತು. ಈಗ, 56 ದಿನಗಳ ದೀರ್ಘ ಕಾಯುವಿಕೆಯ ನಂತರ, ಚಿತ್ರವು ಒಟಿಟಿಯಲ್ಲಿ ಬಿಡುಗಡೆ ಆಗಿದೆ. 'ಮಹಾವತಾರ ನರಸಿಂಹ' ಸಿನಿಮಾ ಪ್ರೇಕ್ಷಕರನ್ನು ತುಂಬಾನೇ ರಂಜಿಸಿತ್ತು. ಚಿಕ್ಕವರಿಂದ ಹಿಡಿದು ದೊಡ್ಡವರವರೆಗೆ, ಎಲ್ಲಾ ವಯಸ್ಸಿನ ಪ್ರೇಕ್ಷಕರು ಈ ಚಿತ್ರವನ್ನು ನೋಡಲು ಚಿತ್ರಮಂದಿರಗಳಿಗೆ ಹೋಗಲು ಪ್ರಾರಂಭಿಸಿದ್ದರು. ಈಗ, ಪ್ರೇಕ್ಷಕರು ಈ ಚಿತ್ರವನ್ನು ಮನೆಯಿಂದಲೇ ನೋಡಬಹುದಾಗಿದೆ. 'ಮಹಾವತಾರ ನರಸಿಂಹ' ಚಿತ್ರದ ಬಿಡುಗಡೆಗಾಗಿ ಕಾಯುವಿಕೆ ಈಗ ಮುಗಿದಿದೆ. ಈ ಚಿತ್ರವನ್ನು ಚಿತ್ರಮಂದಿರಗಳಲ್ಲಿ ನೋಡಲು ಸಾಧ್ಯವಾಗದಿದ್ದರೆ, ಈಗ ನೀವು ನಿಮ್ಮ ಮನೆಯಿಂದಲೇ ವೀಕ್ಷಿಸಬಹುದು. ಒಟಿಟಿ ವೇದಿಕೆಯಾದ ನೆಟ್‌ಫ್ಲಿಕ್ಸ್ ತನ್ನ ಅಧಿಕೃತ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಈ ಬಗ್ಗೆ ಮಾಹಿತಿಯನ್ನು ನೀಡಿದೆ. ಸೆಪ್ಟೆಂಬರ್ 19 ರಂದು ಮಧ್ಯಾಹ್ನ 12.30 ರಿಂದ ದೇಶಾದ್ಯಂತ ಚಿತ್ರ ವೀಕ್ಷಣೆಗೆ ಲಭ್ಯವಾಗಲಿದೆ. ಈ ಚಿತ್ರ, ಭಕ್ತ ಪ್ರಹ್ಲಾದನ ಕಥೆಯನ್ನು ಹೇಳುತ್ತದೆ. ಅವನ ಭಕ್ತಿಯನ್ನು ನೋಡಿದ ವಿಷ್ಣು ಕ್ರೂರ ರಾಕ್ಷಸ ರಾಜ ಹಿರಣ್ಯಕಶಿಪುವನ್ನು ಕೊಲ್ಲಲು ನರಸಿಂಹನ ಅವತಾರವನ್ನು ತೆಗೆದುಕೊಂಡನು. ಅದನ್ನೇ ಸಿನಿಮಾ ಮಾಡಲಾಗಿದೆ. ಈ ಚಿತ್ರವು ವಿಶ್ವಾದ್ಯಂತ 325.65 ಕೋಟಿ ರೂ.ಗಳನ್ನು ಸಂಗ್ರಹಿಸಿತು. ಈ ಚಿತ್ರವು ಭಾರತದಲ್ಲಿ 250.2 ಕೋಟಿ ರೂ.ಗಳನ್ನು ಗಳಿಸಿತು. ಈ ಚಿತ್ರಕ್ಕೆ ಸಿಕ್ಕ ಅಗಾಧ ಪ್ರತಿಕ್ರಿಯೆಯ ಬಗ್ಗೆ ನಿರ್ದೇಶಕ ಅಶ್ವಿನ್ ಕುಮಾರ್ ಮಾತನಾಡಿದ್ದರು. 'ಒಂದು ಚಿತ್ರವು ಮೊದಲ ವಾರದಲ್ಲೇ 100 ಕೋಟಿ ರೂ.ಗಳನ್ನು ದಾಟಿದಾಗ, ಅದು ನಿಜಕ್ಕೂ ಬೇರೆ ರೀತಿಯ ಸಂತೋಷ. ನಾವು ಇಷ್ಟೊಂದು ಆದಾಯವನ್ನು ನಿರೀಕ್ಷಿಸಿರಲಿಲ್ಲ.





# ಕಾಂತಾರದಿಂದ ಗುಡ್ ನ್ಯೂಸ್

# ಟ್ರೇಲರ್ ರಿಲೀಸ್ ಡೇಟ್ ಫಿಕ್ಸ್

ಬಹು ನಿರೀಕ್ಷಿತ 'ಕಾಂತಾರ ಅಧ್ಯಾಯ 1' ಸಿನಿಮಾದ ಟ್ರೇಲರ್ ಇದೇ ಸೆಪ್ಟೆಂಬರ್ 22, 2025 ರಂದು ಮಧ್ಯಾಹ್ನ 12:40ಕ್ಕೆ ಅಧಿಕೃತವಾಗಿ ಬಿಡುಗಡೆಯಾಗಲಿದೆ ಎಂದು ಹೊಂಬಾಳೆ ಫಿಲಂಸ್ ಇಂದು ಘೋಷಿಸಿದೆ. ಈ ಚಿತ್ರವು ಅಕ್ಟೋಬರ್ 2, 2025 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆ ಕಾಣಲಿದೆ. ರಿಷಬ್ ಶೆಟ್ಟಿ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರವು, ಜಾಗತಿಕ ಮಟ್ಟದಲ್ಲಿ ಯಶಸ್ಸು ಕಂಡ 'ಕಾಂತಾರ' ಚಿತ್ರದ ಪ್ರೀಕ್ವೆಲ್ ಆಗಿದೆ.

ಕರಾವಳಿ ಕರ್ನಾಟಕದ ಅತೀಂದ್ರಿಯ ಲೋಕವನ್ನು ಅನಾವರಣಗೊಳಿಸುವ ಈ ಚಿತ್ರವು, ಪುರಾಣ, ಭಕ್ತಿ ಮತ್ತು ಅದೃಷ್ಟದ ನಡುವಿನ ಪೌರಾಣಿಕ ಕಥೆಯನ್ನು ಹೇಳುತ್ತದೆ. ಕಾಂತಾರ ಅಧ್ಯಾಯ 1 ದರ್ಶನಕ್ಕೆ ಕ್ಷಣಗಣನೆ.

ಇದೇ 22, ಮಧ್ಯಾಹ್ನ 12:45ಕ್ಕೆ. ಸಂಗೀತ ನಿರ್ದೇಶಕ ಬಿ. ಅಜನೀಶ್ ಲೋಕನಾಥ್ ಅವರ ಸಂಗೀತ, ಛಾಯಾಗ್ರಾಹಕ ಅರವಿಂದ್ ಎಸ್. ಕಶ್ಯಪ್ ಅವರ ದೃಶ್ಯ ವೈಭವ ಮತ್ತು ವಸ್ತ್ರ ವಿನ್ಯಾಸಕಿ ಪ್ರಗತಿ ಶೆಟ್ಟಿ ಅವರ ವಿಶಿಷ್ಟ ಕಲಾಕೃತಿಗಳು ಚಿತ್ರಕ್ಕೆ ಮೆರುಗು ನೀಡಲಿವೆ. ರಿಷಬ್ ಶೆಟ್ಟಿ, ಜೊತೆಗೆ ರುಕ್ಮಿಣಿ ವಸಂತ್, ಗುಲ್ಶನ್ ದೇವಯ್ಯ ಅವರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. 'ಕಾಂತಾರ ಅಧ್ಯಾಯ 1' ಚಿತ್ರವು ಕಲೆ, ಭಕ್ತಿ ಮತ್ತು ಶಕ್ತಿಯನ್ನು ಒಳಗೊಂಡಿದ್ದು, ಮತ್ತೊಮ್ಮೆ ಇತಿಹಾಸ ಸೃಷ್ಟಿಸಲು ಸಿದ್ಧವಾಗಿದೆ.




# ಉಪೇಂದ್ರ ಹುಟ್ಟುಹಬ್ಬಕ್ಕೆ ಸ್ಪೆಷಲ್ ಗಿಫ್ಟ್

ಕರುನಾಡ ಚಕ್ರವರ್ತಿ ಶಿವರಾಜಕುಮಾರ್, ರಿಯಲ್ ಸ್ಟಾರ್ ಉಪೇಂದ್ರ, ಹಾಗೂ ರಾಜ್ ಬಿ ಶೆಟ್ಟಿ ಪ್ರಮುಖಪಾತ್ರದಲ್ಲಿ ನಟಿಸಿರುವ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಹಾಗೂ ಎಂ. ರಮೇಶ್ ರೆಡ್ಡಿ ಅವರು ತಮ್ಮ ''ಸೂರಜ್ ಪ್ರೊಡಕ್ಷನ್ '' ಬ್ಯಾನರ್‌ನಲ್ಲಿ ನಿರ್ಮಿಸುತ್ತಿರುವ ಕನ್ನಡದ ಬಹುನಿರೀಕ್ಷಿತ ಮಲ್ಟಿಸ್ಟಾರರ್ ''45'' ಚಿತ್ರದ ಬಗ್ಗೆ ಅಭಿಮಾನಿಗಳಲ್ಲಿ ಸಾಕಷ್ಟು ನಿರೀಕ್ಷೆಯಿದೆ. ಈಗಾಗಲೇ ಹಲವು ವಿಶೇಷಗಳಿಂದ ''45'' ಎಲ್ಲರ ಗಮನ ಸೆಳೆದಿದೆ. ಚಿತ್ರದ ನಾಯಕರಲ್ಲೊಬ್ಬರಾದ ಉಪೇಂದ್ರ, ಅವರ ಹುಟ್ಟುಹಬ್ಬದ ದಿನ ಸಹಸ್ರಾರು ಅಭಿಮಾನಿಗಳ ಸಮ್ಮುಖದಲ್ಲಿ ವಿಶೇಷವಾದ ಬೈಕ್ ಅನಾವರಣ ಮಾಡುವ ಮೂಲಕ ''45'' ಚಿತ್ರತಂಡ ಉಪೇಂದ್ರ, ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದೆ. ಈ ಬೈಕ್ ''45'' ಚಿತ್ರದಲ್ಲಿ ಉಪೇಂದ್ರ, ಅವರು ಓಡಿಸುವ ಬೈಕ್ ಆಗಿದೆ. ನಿರ್ಮಾಪಕ ರಮೇಶ್ ರೆಡ್ಡಿ, ನಿರ್ದೇಶಕ ಅರ್ಜುನ್ ಜನ್ಯ ಹಾಗೂ ನಟ ಉಪೇಂದ್ರ, ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಉಪೇಂದ್ರ, ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿ ಮಾತನಾಡಿದ ನಿರ್ದೇಶಕ ಅರ್ಜುನ್ ಜನ್ಯ, ಉಪೇಂದ್ರ, ಅವರ ಹುಟ್ಟುಹಬ್ಬದ ಪ್ರಯುಕ್ತ ಅನಾವರಣಗೊಂಡಿರುವ ಈ ವಿಶೇಷ ಬೈಕ್ ಅನ್ನು ನಮ್ಮ ಚಿತ್ರದಲ್ಲಿ ಉಪೇಂದ್ರ, ಅವರೆ ಓಡಿಸುತ್ತಿರುತ್ತಾರೆ. ನಮ್ಮ ಸಿನಿಮಾದಲ್ಲಿ ಇದು ಒಂದು ಪಾತ್ರ ಎಂದು ಹೇಳಬಹುದು. ಇಂದಿನಿಂದ ಚಿತ್ರ ಬಿಡುಗಡೆಯವರೆಗೂ ಈ ಬೈಕ್‌ನ ಸಂಚಾರ ಆರಂಭವಾಗಲಿದೆ. ಉಪೇಂದ್ರ ಅವರ ಅಭಿಮಾನಿಗಳು ಈ ಬೈಕ್‌ನ ಜೊತೆಗೆ ರೀಲ್ ಮಾಡಬಹುದು. ಸೆಲ್ಫಿ ತೆಗೆದುಕೊಳ್ಳಬಹುದು. ಅದನ್ನು ನಮಗೆ ಅಥವಾ ಉಪೇಂದ್ರ ಅವರಿಗೆ ಟ್ಯಾಗ್ ಮಾಡಬಹುದು.

# ಇದ್ರೆ ನೆಮ್ಮದಿಯಾಗಿ ಇರ್ಬೇಕು

## ದಪ್ಪ ಆಗಿದ್ದೀರಾ ಅಂದ್ರು ಫ್ಯಾನ್ಸ್

ಬಿಗ್ ಬಾಸ್ ಖ್ಯಾತಿಯ ವೈಷ್ಣವಿಗೌಡ ಯಾವಾಗಲೂ ಸಾಮಾಜಿಕ ಜಾಲತಾಣದಲ್ಲಿ ಫುಲ್ ಆಯಕ್ಟಿವ್ ಆಗಿರ್ತಾರೆ. ಮದುವೆಯ ಬಳಿಕ ಪತಿ ಜೊತೆಗೆ ರೀಲ್ಸ್ ಮಾಡಿ ಆಗಾಗ ಹಂಚಿಕೊಳ್ತಿರ್ತಾರೆ. ಅವರ ವಿಡಿಯೋಗಳಿಗೆ ಸಾಕಷ್ಟು ಮೆಚ್ಚುಗೆ ಕೂಡಾ ವ್ಯಕ್ತವಾಗುತ್ತವೆ. ಇದೀಗ ಡೆವಿಲ್ ಸಿನಿಮಾದ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಇದ್ರೆ ನೆಮ್ಮದಿಯಾಗ್ ಇರ್ಬೇಕು ಎಂದು ಮಸ್ತ್ ಸ್ಟೆಪ್ ಹಾಕಿದ್ದಾರೆ ವೈಷ್ಣವಿಗೌಡ. ವೈಷ್ಣವಿಗೌಡ ಡೆವಿಲ್ ಹಾಡಿನ ಹುಕ್ ಸ್ಟೆಪ್ ಹಾಕಿರುವ ವಿಡಿಯೋ ಜಾಲತಾಣದಲ್ಲಿ ಸಖತ್ ಅಟ್ರ್ಯಾಕ್ಟ್ ಮಾಡ್ತಿದೆ. ಈ ವಿಡಿಯೋಗೆ ತಹರೇವಾರಿ ಕಮೆಂಟ್ಸ್ ಬರುತ್ತಿವೆ. ಬಹುತೇಕರು ವಿಡಿಯೋಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇನ್ನುಳಿದಂತೆ ಕೆಲವರು ವೈಷ್ಣವಿ ಅವರ ಕಾಲೆಳೆದಿದ್ದಾರೆ. ಕೆಲವರು ವೈಷ್ಣವಿ ಅವರು ಮದುವೆ ಆದ್ಮೇಲೆ ದಪ್ಪ ಆಗಿದ್ದಾರೆ ಅಂತಾ ಕಮೆಂಟ್ಸ್ ಮಾಡಿದ್ದಾರೆ. ಸದ್ಯ ವೈವಾಹಿಕ ಜೀವನಕ್ಕೆ ಕಾಲಿಟ್ಟಿರುವ ವೈಷ್ಣವಿಗೌಡ ಜಾಲತಾಣದಲ್ಲಿ ಸಖತ್ ಆಯಕ್ಟಿವ್ ಆಗಿದ್ದಾರೆ. ಕಿರುತೆರೆ ಜಗತ್ತಿನಿಂದ ಅಂತರ ಕಾಯ್ದುಕೊಂಡು ಪತಿಯ ಜೊತೆಗೆ ಸುಖಿ ಜೀವನ ನಡೆಸುತ್ತಿದ್ದಾರೆ. ಡೆವಿಲ್ ಚಿತ್ರದ ಟ್ರೆಂಡಿಂಗ್ ಸಾಂಗ್‌ಗೆ ಮೈ ಬಳುಕಿಸಿದ್ದಾರೆ.



# ಟಾಕ್ಸಿಕ್ ಫೈನಲ್ ಶೂಟಿಂಗ್ ಮುನ್ನ ಲಂಡನ್‌ಗೆ ಹಾರಿದ ಯಶ್!

ಟಾಕ್ಸಿಕ್ ಚಿತ್ರದ ಫೈನಲ್ ಹಂತದ ಚಿತ್ರೀಕರಣಕ್ಕೂ ಮುನ್ನ ರಾಕಿಂಗ್ ಸ್ಟಾರ್ ಯಶ್ ಲಂಡನ್‌ಗೆ ಹಾರಿದ್ದಾರೆ. ಟಾಕ್ಸಿಕ್ ಸಿನಿಮಾದ ಆಯಕ್ಷನ್ ಭಾಗದ ಚಿತ್ರೀಕರಣ ಮುಕ್ತಾಯವಾಗಿದೆ. ಹಾಲಿವುಡ್‌ನ ಜೆಜೆ ಪರರಿ 45 ದಿನಗಳ ಕಾಲ ಮುಂಬೈನಲ್ಲಿ ಬೀಡುಬಿಟ್ಟು ಫೈಟ್ ಸೀನ್ ಮುಗಿಸಿಕೊಟ್ಟಿದ್ದಾರೆ. ಇದೀಗ ಕೊನೆಯ ಹಂತದ ಚಿತ್ರೀಕರಣ ಮಾತ್ರವೇ ಬಾಕಿ ಇದ್ದು ಅದು ಬೆಂಗಳೂರಿನಲ್ಲಿ ನಡೆಯಲಿದೆ. ಸೆಪ್ಟೆಂಬರ್ ಕೊನೆಯ ವಾರದಿಂದ ಟಾಕ್ಸಿಕ್ ಫೈನಲ್ ಹಂತದ ಚಿತ್ರೀಕರಣ ನಡೆಯಲಿದೆ. ಅದಕ್ಕೂ ಮುನ್ನ ಬಿಸಿನೆಸ್ ಮೀಟಿಂಗ್ ಸಂಬಂಧ ಯಶ್ ಲಂಡನ್‌ಗೆ ಹಾರಿದ್ದಾರೆ. ಈಗಾಗಲೇ 'ಟಾಕ್ಸಿಕ್' ಸಿನಿಮಾ ಅಮೆರಿಕದಲ್ಲಿ ಹಾಲಿವುಡ್ ಜೊತೆ ವ್ಯವಹಾರದ ಸಹಯೋಗ ಮಾಡಿಕೊಂಡಿದ್ದು ಇಂಗ್ಲೀಷ್‌ನಲ್ಲೂ ತಯಾರಾಗುತ್ತಿದೆ. ಇದೀಗ ಇಂಗ್ಲೆಂಡ್‌ಗೆ ತೆರಳಿರುವ ಯಶ್ ಮಹತ್ವದ ಸಹಯೋಗ ಮಾಡುವ ಸಂಬಂಧ ಸಭೆ ನಡೆಸಿ ಬೆಂಗಳೂರಿಗೆ ಮರಳಲಿದ್ದಾರೆ. ಗುರುವಾರ ರಾತ್ರಿ ಯಶ್ ಮುಂಬೈನಿಂದ ಲಂಡನ್‌ಗೆ ತೆರಳುವ ವೇಳೆ ದೃಶ್ಯ ಸೆರೆಯಾಗಿದೆ. ಟಾಕ್ಸಿಕ್ ಲುಕ್‌ನಲ್ಲೇ ಇರುವುದರಿಂದ ಮುಖ ಮರೆಮಾಚಲು ಯಶ್ ಮಾಸ್ಕ್ ಧರಿಸಿದ್ದಾರೆ. ಯಶ್ ಈಗಾಗಲೇ ಹೇಳಿದಂತೆ 'ಟಾಕ್ಸಿಕ್' ಚಿತ್ರವನ್ನು ಗ್ಲೋಬಲ್ ಚಿತ್ರವನ್ನಾಗಿ ಮಾಡಲು ಎಲ್ಲಾ ತಯಾರಿ ಮಾಡಿಕೊಳ್ಳುತ್ತಿದ್ದಾರೆ.

# ಕಾಂಗರೂಗಳಿಗೆ ಟೀಂ ಇಂಡಿಯಾ ತಕ್ಕ ತಿರುಗೇಟು

## ಭಾರತ ಆಸೀಸ್ ಅನಧಿಕೃತ ಟೆಸ್ಟ್



ಭಾರತ ಎ ಹಾಗೂ ಆಸ್ಟ್ರೇಲಿಯಾ ಎ ತಂಡಗಳ ನಡುವೆ ನಡೆದ ಮೊದಲ ಅನಧಿಕೃತ ಟೆಸ್ಟ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿದೆ. ಈ ಟೆಸ್ಟ್‌ನಲ್ಲಿ ಉಭಯ ತಂಡಗಳು ತಲಾ 500 ಕ್ಕೂ ಅಧಿಕ ರನ್ ಕಲೆಹಾಕಿದವಾದರೂ ಪಂದ್ಯವನ್ನು ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ. ಮೊದಲ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡ 532 ರನ್ ಕಲೆಹಾಕಿದರೆ, ಇತ್ತ ಆತಿಥೇಯ ಭಾರತ ಕೂಡ ಉತ್ತಮ ಪ್ರದರ್ಶನ ನೀಡುವ ಮೂಲಕ ಇನ್ನೂ 3 ವಿಕೆಟ್‌ಗಳಿದ್ದರೂ ಸಹ ಆಸ್ಟ್ರೇಲಿಯಾಕ್ಕಿಂತ 1 ರನ್‌ಗೆ ಅಂದರೆ 531 ರನ್‌ಗೆ ತನ್ನ ಇನ್ನಿಂಗ್ಸ್ ಡಿಕ್ಲೇರ್ ಮಾಡಿತು. ಆ ಬಳಿಕ ಎರಡನೇ ಇನ್ನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ 56 ರನ್ ಕಲೆಹಾಕಿದ್ದ ಪಂದ್ಯವನ್ನು ಡ್ರಾ ಎಂದು ಘೋಷಿಸಲಾಯಿತು.

**ಎಲ್ಲರನ್ನೂ ಅಚ್ಚರಿಗೊಳಿಸಿದ ಶ್ರೇಯಸ್**

ಪಂದ್ಯ ಡ್ರಾದಲ್ಲಿ ಅಂತ್ಯಗೊಂಡರೆ, ಟೀಂ ಇಂಡಿಯಾ ನಾಯಕ ಶ್ರೇಯಸ್ ಅಯ್ಯರ್ ತಮ್ಮ ನಿರ್ಧಾರದಿಂದ ಎಲ್ಲರನ್ನೂ ಅಚ್ಚರಿಗೊಳಿಸಿದರು. ಲಕ್ನೋದಲ್ಲಿ ನಡೆದ ಮೊದಲ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಎ ತಂಡವು ತನ್ನ ಮೊದಲ ಇನ್ನಿಂಗ್ಸ್ ಅನ್ನು 6 ವಿಕೆಟ್‌ಗೆ 532 ರನ್‌ಗಳಿಗೆ ಡಿಕ್ಲೇರ್ ಮಾಡಿತು. ನಂತರ ಭಾರತ ಎ ತಂಡದ ಬ್ಯಾಟ್ಸ್‌ಮನ್‌ಗಳು ತಮ್ಮ ಮೊದಲ ಇನ್ನಿಂಗ್ಸ್‌ನಲ್ಲಿ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿದರು. ದೇವದತ್ ಪಡಿಕ್ಕಲ್ (150) ಮತ್ತು ಧ್ರುವ್ ಜುರೆಲ್ (140) ತಂಡದ ಪರ ಶತಕಗಳನ್ನು ಬಾರಿಸಿದರು. ಪಂದ್ಯದ ಕೊನೆಯ ದಿನದ ಒಂದು ಹಂತದಲ್ಲಿ, ಭಾರತ ಎ ತಂಡವು ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 531 ರನ್ ಗಳಿಸಿತ್ತು. ಏತನ್ಮಧ್ಯೆ, ಮಳೆ ಆರಂಭವಾದ ಕಾರಣ ಚಹಾ ವಿರಾಮ ಘೋಷಿಸಲಾಯಿತು. ಏತನ್ಮಧ್ಯೆ, ನಾಯಕ ಶ್ರೇಯಸ್ ಅಯ್ಯರ್ ಭಾರತ ಎ ತಂಡದ ಮೊದಲ ಇನ್ನಿಂಗ್ಸ್ 531 ರನ್‌ಗಳಿಗೆ ಡಿಕ್ಲೇರ್ ಮಾಡಿದರು. ವಾಸ್ತವವಾಗಿ ಈ ಪಂದ್ಯದಲ್ಲಿ ಭಾರತ ಎ ತಂಡ ಮುನ್ನಡೆ ಸಾಧಿಸುವ ಅವಕಾಶ ಇತ್ತು. ಆದಾಗ್ಯೂ, ನಾಯಕ ಶ್ರೇಯಸ್, ಆಸ್ಟ್ರೇಲಿಯಾ ಎ ತಂಡಕ್ಕೆ 2ನೇ ಇನ್ನಿಂಗ್ಸ್ ಆಡುವ ಅವಕಾಶ ನೀಡಿದರು. ಆದಾಗ್ಯೂ, ಇದು ಭಾರತ ಎ ತಂಡಕ್ಕೆ ಯಾವುದೇ ಪ್ರಯೋಜನ ನೀಡಲಿಲ್ಲ.

**ಮೊದಲ ಟೆಸ್ಟ್ ಡ್ರಾದಲ್ಲಿ ಅಂತ್ಯ**

ಎರಡನೇ ಇನ್ನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ವಿಕೆಟ್ ನಷ್ಟವಿಲ್ಲದೆ 56 ರನ್ ಗಳಿಸಿತು. ನಂತರ ಪಂದ್ಯವನ್ನು ಡ್ರಾ ಎಂದು ಘೋಷಿಸಲಾಯಿತು. ಮೊದಲ ಇನ್ನಿಂಗ್ಸ್‌ನಲ್ಲಿ ಅದ್ಭುತ ಶತಕ ಗಳಿಸಿದ ಆರಂಭಿಕ ಬ್ಯಾಟ್ಸ್‌ಮನ್ ಸ್ಯಾಮ್ ಕಾನ್‌ಸ್ಟಾಸ್ ಎರಡನೇ ಇನ್ನಿಂಗ್ಸ್‌ನಲ್ಲಿಯೂ ಉತ್ತಮವಾಗಿ ಬ್ಯಾಟಿಂಗ್ ಮಾಡಿ 49 ಎಸೆತಗಳಲ್ಲಿ ಅಜೇಯ 27 ರನ್ ಗಳಿಸಿದರು. ಮತ್ತೊಬ್ಬ ಆರಂಭಿಕ ಬ್ಯಾಟ್ಸ್‌ಮನ್ ಕ್ಯಾಂಪ್‌ಬೆಲ್ ಕೆಲ್ಲಾವೆ 47 ಎಸೆತಗಳಲ್ಲಿ ಅಜೇಯ 24 ರನ್ ಗಳಿಸಿದರು.

ಮೊದಲ ಇನ್ನಿಂಗ್ಸ್‌ನಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಸ್ಯಾಮ್ ಕಾನ್ಸ್ಟಸ್ 109 ರನ್ ಬಾರಿಸಿದರೆ, ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಜೋಶ್ ಫಿಲಿಪ್ ಕೂಡ ಅಜೇಯ 123 ರನ್ ಕಲೆಹಾಕಿದರು. ಮತ್ತೊಂದೆಡೆ, ಭಾರತ ಎ ತಂಡದ ಪರ ದೇವದತ್ ಪಡಿಕ್ಕಲ್ ಮತ್ತು ಧ್ರುವ್ ಜುರೆಲ್ ಶತಕಗಳನ್ನು ಬಾರಿಸಿದರೆ, ನಾರಾಯಣ್ ಜಗದೀಸನ್ ಮತ್ತು ಸಾಯಿ ಸುದರ್ಶನ್ ಕೂಡ ಅರ್ಧಶತಕಗಳ ಕಾಣಿಕೆ ನೀಡಿದರು. ಭಾರತ ಎ ಮತ್ತು ಆಸ್ಟ್ರೇಲಿಯಾ ಎ ನಡುವಿನ ಎರಡನೇ ಮತ್ತು ಅಂತಿಮ ಅನಧಿಕೃತ ಟೆಸ್ಟ್ ಪಂದ್ಯ ಸೆಪ್ಟೆಂಬರ್ 23 ರಿಂದ ಲಕ್ನೋದಲ್ಲಿ ನಡೆಯಲಿದೆ.

# ದುನಿತ್ ಬೌಲಿಂಗ್ ನೋಡ್ತಿದ್ದ ತಂದೆಗೆ ಹೃದಯಾಘಾತ, ನಿಧನ

ಏಷ್ಯಾಕಪ್‌ನಲ್ಲಿ ಚೊಚ್ಚಲ ಪಂದ್ಯನ್ನಾಡಿದ ಶ್ರೀಲಂಕಾದ ಯುವ ಸ್ಪಿನ್ನರ್ ದುನಿತ್ ವೆಲ್ಲಾಲಗೆ ಎಂದೆಂದಿಗೂ ಮರೆಯಲಾಗದ ಪಂದ್ಯವಾಗಿ ಮಾರ್ಪಟ್ಟಿದೆ. ಏಷ್ಯಾಕಪ್‌ನಲ್ಲಿ ಚೊಚ್ಚಲ ಪಂದ್ಯನ್ನಾಡಿದ ಶ್ರೀಲಂಕಾದ ಯುವ ಸ್ಪಿನ್ನರ್ ದುನಿತ್ ವೆಲ್ಲಾಲಗೆ ಎಂದೆಂದಿಗೂ ಮರೆಯಲಾಗದ ಪಂದ್ಯವಾಗಿ ಮಾರ್ಪಟ್ಟಿದೆ. ಅಫ್ಘಾನಿಸ್ತಾನ ವಿರುದ್ಧದ ಕೊನೆ ಲೀಗ್ ಪಂದ್ಯದಲ್ಲಿ ಕಣಕ್ಕಿಳಿದ್ದ 22 ವರ್ಷದ ಯುವ ಸ್ಪಿನ್ನರ್, ತಮ್ಮ ಕೊನೆ ಓವರ್‌ನಲ್ಲಿ ಐದು ಸತತ ಸಿಕ್ಸರ್ ಚಚ್ಚಿಸಿಕೊಂಡಿದ್ದರು. ಇದರಿಂದ ನಿರಾಸೆಗೊಂಡಿದ್ದ ದುನಿತ್ ವೆಲ್ಲಾಲಗೆ ಪಂದ್ಯದ ನಂತರ ತಂದೆಯ ಹಠಾತ್ ಸಾವಿನ ಸುದ್ದಿಯ ಅಘಾತ ಕಾದಿತ್ತು.



ತಂಡದ ಮ್ಯಾನೇಜರ್ ಹಾಗೂ ಕೋಚ್ ಸನತ್ ಜಯಸೂರ್ಯ ಆಘಾತಕಾರಿ ವಿಷಯವನ್ನು ದುನಿತ್ ವೆಲ್ಲಾಲಗೆ ತಿಳಿಸಿದ್ದಾರೆ. ದುಃಖಿತರಾದ ವೆಲ್ಲಲ್ಲಾಗೆ ಸಹ ಆಟಗಾರರು ಸಮಾಧಾನ ಪಡಿಸಿದ್ದಾರೆ. ವೆಲ್ಲಲ್ಲಾ ತಂದೆ ಹೃದಯಾಘಾತದಿಂದ ಮ್ಯಾಚ್ ನೋಡುತ್ತಲೇ ಮೃತಪಟ್ಟಿದ್ದಾರೆ. ಅಪಘಾನಿಸ್ತಾನದ ಹಿರಿಯ ಆಟಗಾರ ನಬಿ ಅವರು ಐದು ಸಿಕ್ಸರ್ ಬಾರಿಸಿದರು. ಪಂದ್ಯ ಮುಗಿಯುತ್ತಿದ್ದಂತೆಯೇ ನಬಿಗೆ ರಿಪೋರ್ಟರ್ ಎದುರಾಗುತ್ತಾರೆ. ನಬಿಗೆ ಹೀಗೆ ಹೇಳ್ತಾರೆ.

**ರಿಪೋರ್ಟರ್:** ದುನಿತ್ ವೆಲ್ಲಾಲ ತಂದೆ ತೀರಿಕೊಂಡರು

**ನಬಿ:** ಫಾದರ್.. ಹೇಗೆ..

**ರಿಪೋರ್ಟರ್:** ಹಾರ್ಟ್ ಅಟ್ಯಾಕ್. ಈಗಷ್ಟೇ ಮ್ಯಾಚ್ ಮುಗೀತಿದ್ದಂತೆ

**ನಬಿ:** ರಿಯಲೀ.. ಹಾರ್ಟ್ ಅಟ್ಯಾಕ್.. ಎಂದು ಪ್ರಶ್ನೆ ಮಾಡಿದ್ದಾರೆ.

ಪಂದ್ಯದ ವೇಳೆ ಮೊಹಮ್ಮದ್ ನಬಿ ಸ್ಟ್ರೈಕ್‌ನಲ್ಲಿ ಇರುವಾಗ, 20ನೇ ಓವರ್ ಮಾಡಲು ಬಂದ ಶ್ರೀಲಂಕಾದ ಪರ ಸ್ಪಿನ್ನರ್ ದುನಿತ್ ವೆಲ್ಲಾಲ ಭಾರೀ ಮುಖಭಂಗ ಅನುಭವಿಸಿದರು. ಮೊದಲ ಮೂರು ಬಾಲ್‌ಗಳು ಸಿಕ್ಸರ್‌ಗಳು ಆಗಿದ್ದವು. 4ನೇ ಬಾಲ್ ನೋಬಾಲ್ ಆಗಿತ್ತು. ಹೀಗಾಗಿ ಫ್ರೀಹಿಟ್‌ನಲ್ಲಿ ಮೊಹಮ್ಮದ್ ನಬಿ ಬಾಲ್ ಅನ್ನು ಸಿಕ್ಸ್ ಸಿಡಿಸಿದರು. ಇದಾದ ಮೇಲೆ 5ನೇ ಬಾಲ್ ಕೂಡ ಬಿಗ್ ಸಿಕ್ಸರ್ ಆಯಿತು. ಆ ಮೇಲೆ 6ನೇ ಎಸೆತವನ್ನು ಸಿಕ್ಸರ್ ಟ್ರೈ ಮಾಡಿದ ಮೊಹಮ್ಮದ್ ನಬಿ ವಿಫಲವಾದರು. ಕೊನೆಯ ಬಾಲ್‌ನಲ್ಲಿ ಕುಸಲ್ ಪೆರೆರಾ ಹಾಗೂ ಕುಸಲ್ ಮೆಂಡಿಸ್ ಸೇರಿ ರನ್‌ಔಟ್ ಮಾಡಿದರು. ಪಂದ್ಯದಲ್ಲಿ ಕೇವಲ 22 ಬಾಲ್ ಎದುರಿಸಿ 3 ಬೌಂಡರಿ, 6 ಸಿಕ್ಸರ್‌ಗಳಿಂದ 60 ರನ್ ಚಚ್ಚಿದರು. 136 ರನ್‌ಗಳ ಆಸುಪಾಸಿನಲ್ಲಿ ಆಟ ಮುಗಿಸಬೇಕಿದ್ದ ಅಫ್ಘಾನಿಸ್ತಾನ 169 ರನ್‌ಗಳ ಟಾರ್ಗೆಟ್ ಅನ್ನು ಶ್ರೀಲಂಕಾಗೆ ನೀಡಿತ್ತು.

# ಭಾರತಕ್ಕೆ ಸೋಲಿನ ಭಯ ಹುಟ್ಟಿಸಿ ಸೋತ ಒಮಾನ್



ಏಷ್ಯಾಕಪ್‌ನಲ್ಲಿ ಟೀಂ ಇಂಡಿಯಾ ತನ್ನ ಅಜೇಯ ಓಟವನ್ನು ಮುಂದುವರೆಸಿದೆ. ಲೀಗ್ ಸುತ್ತಿನ ಕೊನೆಯ ಪಂದ್ಯದಲ್ಲಿ ಒಮಾನ್ ತಂಡವನ್ನು ಎದುರಿಸಿದ್ದ ಸೂರ್ಯಕುಮಾರ್ ಪಡೆ ಈ ಪಂದ್ಯವನ್ನು 22 ರನ್‌ಗಳಿಂದ ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಒಮಾನ್ ಆಲ್‌ರೌಂಡರ್ ಅಮೀರ್ ಕಲೀಮ್ ಟೀಮ್ ಇಂಡಿಯಾ ವಿರುದ್ಧ 38 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಇದು ಟಿ20ಐಗಳಲ್ಲಿ ಅವರ ಎರಡನೇ ಅರ್ಧಶತಕವಾಗಿದೆ. 189 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಒಮಾನ್ ತಂಡವು ಒಂದು ವಿಕೆಟ್‌ಗೆ 100 ರನ್‌ಗಳನ್ನು ಪೂರ್ಣಗೊಳಿಸಿದೆ. 2025 ರ ಏಷ್ಯಾ ಕಪ್‌ನ ಅಂತಿಮ ಗ್ರೂಪ್ ಎ ಲೀಗ್ ಪಂದ್ಯದಲ್ಲಿ ಟೀಮ್ ಇಂಡಿಯಾ ವಿರುದ್ಧ ಒಮಾನ್ 10 ಓವರ್‌ಗಳಲ್ಲಿ 1 ವಿಕೆಟ್‌ಗೆ 62 ರನ್ ಗಳಿಸಿದೆ. 89 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಒಮಾನ್ ತಂಡವು ಮೊದಲ ವಿಕೆಟ್ ಕಳೆದುಕೊಂಡಿತು, ನಾಯಕ ಜತಿಂದರ್ ಸಿಂಗ್, ಕುಲ್ದೀಪ್ ಯಾದವ್ ಬೌಲಿಂಗ್‌ನಲ್ಲಿ 33 ಎಸೆತಗಳಲ್ಲಿ 32 ರನ್ ಗಳಿಸಿ ಔಟ್ ಆದರು. ಭಾರತದ ವಿರುದ್ಧದ ಪವರ್ ಪ್ಲೇನಲ್ಲಿ ಒಮಾನ್ ಯಾವುದೇ ವಿಕೆಟ್ ಕಳೆದುಕೊಳ್ಳದೆ 44 ರನ್ ಗಳಿಸಿತು.

2025 ರ ಏಷ್ಯಾ ಕಪ್‌ನ ಅಂತಿಮ ಗ್ರೂಪ್ ಎ ಲೀಗ್ ಪಂದ್ಯದಲ್ಲಿ ಒಮಾನ್ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 188 ರನ್ ಗಳಿಸಿತು. ಭಾರತದ ಪರ ಸಂಜು ಸ್ಯಾಮ್ಸನ್ 45 ಎಸೆತಗಳಲ್ಲಿ 3 ಬೌಂಡರಿ ಮತ್ತು 3 ಸಿಕ್ಸರ್ ಸೇರಿದಂತೆ ಅದ್ಭುತ 56 ರನ್ ಗಳಿಸುವ ಮೂಲಕ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಅಭಿಷೇಕ್ ಶರ್ಮಾ 15 ಎಸೆತಗಳಲ್ಲಿ 5 ಬೌಂಡರಿ ಮತ್ತು 2 ಸಿಕ್ಸರ್ ಸೇರಿದಂತೆ 38 ರನ್ ಗಳಿಸಿದರು. ತಿಲಕ್ ವರ್ಮಾ 18 ಎಸೆತಗಳಲ್ಲಿ 1 ಬೌಂಡರಿ ಮತ್ತು 2 ಸಿಕ್ಸರ್ ಸೇರಿದಂತೆ 29 ರನ್ ಗಳಿಸಿದರು. ಅಕ್ಷರ್ ಪಟೇಲ್ 13 ಎಸೆತಗಳಲ್ಲಿ 3 ಬೌಂಡರಿ ಮತ್ತು 1 ಸಿಕ್ಸರ್ ಸೇರಿದಂತೆ 26 ರನ್ ಗಳಿಸಿದರು. ಓಮನ್ ಪರ ಶಾ ಫೈಸಲ್, ಜಿತೆನ್ ರಮಾನಂದಿ ಮತ್ತು ಆಮಿರ್ ಕಲೀಮ್ ತಲಾ 2 ವಿಕೆಟ್ ಪಡೆದರು. ಟೀಮ್ ಇಂಡಿಯಾ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ 41 ಎಸೆತಗಳಲ್ಲಿ ಮೂರು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳೊಂದಿಗೆ ಅರ್ಧಶತಕ ಗಳಿಸಿದರು.

ಏಷ್ಯಾಕಪ್‌ನ ಅಂತಿಮ ಲೀಗ್ ಪಂದ್ಯದಲ್ಲಿ ಟೀಮ್ ಇಂಡಿಯಾ 16 ಓವರ್‌ಗಳಲ್ಲಿ 150 ರನ್‌ಗಳನ್ನು ತಲುಪಿದೆ. ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಕ್ರೀಸ್‌ನಲ್ಲಿದ್ದಾರೆ. ಟೀಮ್ ಇಂಡಿಯಾ 10 ಓವರ್‌ಗಳಲ್ಲಿ 3 ವಿಕೆಟ್‌ಗಳ ನಷ್ಟಕ್ಕೆ 100 ರನ್ ಗಳಿಸಿದೆ. ಸಂಜು ಸ್ಯಾಮ್ಸನ್ 29 ಎಸೆತಗಳಲ್ಲಿ 37 ರನ್ ಮತ್ತು ಅಕ್ಷರ್ ಪಟೇಲ್ 7 ಎಸೆತಗಳಲ್ಲಿ 10 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ 15 ಎಸೆತಗಳಲ್ಲಿ 5 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ 38 ರನ್ ಗಳಿಸಿ ಔಟಾದರು. ಟೀಮ್ ಇಂಡಿಯಾ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಮೊಹಮ್ಮದ್ ನದೀಮ್ ಅವರ ಒಂದು ಓವರ್‌ನಲ್ಲಿ 19 ರನ್ ಬಾರಿಸಿದರು.



# ಕ್ಲೀನ್ ಬೌಲ್ಡ್ ಆಗಿದ್ದರೂ ಡಿಆರ್‌ಎಸ್ ತೆಗೆದುಕೊಂಡ ರಶೀದ್

ಏಷ್ಯಾಕಪ್ 2025 ರಲ್ಲಿ ಬಿ ಗುಂಪಿನ ಕೊನೆಯ ಲೀಗ್ ಪಂದ್ಯ ಶ್ರೀಲಂಕಾ ಹಾಗೂ ಅಫ್ಘಾನಿಸ್ತಾನ ನಡುವೆ ನಡೆಯಿತು. ಈ ಪಂದ್ಯವನ್ನು ಗೆದ್ದುಕೊಳ್ಳುವುದರೊಂದಿಗೆ ಶ್ರೀಲಂಕಾ ತಂಡ ಸೂಪರ್ 4 ಸುತ್ತಿಗೆ ಅರ್ಹತೆ ಪಡೆದರೆ, ಅಫ್ಘನ್ ತಂಡ ಟೂರ್ನಿಯಿಂದ ಹೊರಬಿದ್ದಿತು. ಇನ್ನು ಇದೇ ಪಂದ್ಯದಲ್ಲಿ ಅಫ್ಘನ್ ತಂಡದ ನಾಯಕ ರಶೀದ್ ಖಾನ್ ಕ್ಲೀನ್ ಬೌಲ್ಡ್ ಆಗಿದ್ದರೂ ಸಹ ಅಂಪೈರ್ ಬಳಿ ಬಳಿ ಡಿಆರ್‌ಎಸ್ ಕೇಳಿದರು. ಕೂಡಲೇ ಅಂಪೈರ್ ಪರಿಸ್ಥಿತಿಯನ್ನು ವಿವರಿಸಿದಾಗ ತನ್ನ ತಪ್ಪನ್ನು ಅರಿತುಕೊಂಡು ರಶೀದ್ ನಿರಾಶೆಯಿಂದ ಪೆವಿಲಿಯನ್‌ಗೆ ಮರಳಿದರು. ಇದೀಗ ಅದರ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ವಾಸ್ತವವಾಗಿ ಅಫ್ಘಾನಿಸ್ತಾನದ ಇನ್ನಿಂಗ್ಸ್ 18 ನೇ ಓವರ್‌ನಲ್ಲಿ ನಾಯಕ ರಶೀದ್ ಖಾನ್ ಮತ್ತು ಮೊಹಮ್ಮದ್ ನಬಿ ಕ್ರೀಸ್‌ನಲ್ಲಿದ್ದರು. ಇತ್ತ ಲಂಕಾ ವೇಗಿ ತುಷಾರ ಮೊದಲ ಎಸೆತದಲ್ಲಿ ನಿಧಾನಗತಿಯ ಯಾರ್ಕರ್ ಎಸೆದರು. ಈ ಎಸೆತವನ್ನು ಆಡುವಲ್ಲಿ ರಶೀದ್ ಖಾನ್ ಸಂಪೂರ್ಣವಾಗಿ ವಿಫಲರಾದರು. ಇದರಿಂದಾಗಿ ಚೆಂಡು ಅವರ ಬ್ಯಾಕ್ ಪ್ಯಾಡ್‌ಗೆ ಬಡಿದು ಸ್ಟಂಪ್‌ಗೆ ಬಡಿಯಿತು.

ಚೆಂಡು ಸ್ಟಂಪ್‌ಗೆ ಬಡಿದ ತಕ್ಷಣ, ತುಷಾರ ಎಲ್‌ಬಿಡಬ್ಲ್ಯೂಗಾಗಿ ಮೇಲ್ಮನವಿ ಸಲ್ಲಿಸಿದರು. ಆದರೆ ಈಗಾಗಲೇ ರಶೀದ್ ಬೌಲ್ಡ್ ಆಗಿದ್ದಾರೆ ಎಂಬುದು ತುಷಾರಗೆ ತಿಳಿದಿರಲಿಲ್ಲ. ಅಷ್ಟೇ ಅರಿವಿಲ್ಲದ ರಶೀದ್, ಅಂಪೈರ್ ಎಲ್‌ಬಿಡಬ್ಲ್ಯೂ ನೀಡಿದ್ದಾರೆಂದು ಭಾವಿಸಿ ರಿವ್ಯೂಗೆ ಸಿಗ್ನಲ್ ನೀಡಿದರು, ಆದರೆ ಅಂಪೈರ್ ತುಷಾರ್ ಕಡೆಗೆ ಬೆರಳು ತೋರಿಸುತ್ತಾ ರಶೀದ್ ಬೌಲ್ಡ್ ಆಗಿದ್ದಾರೆಂದು ಸೂಚಿಸಿದರು, ಏಕೆಂದರೆ ಚೆಂಡು ಅದಾಗಲೇ ಸ್ಟಂಪ್‌ಗೆ ಬಡಿದು ಬೇಲ್ಸ್‌ನ ಕೆಳಗೆ ಬೀಳಿಸಿತ್ತು. ಈ ಪಂದ್ಯದಲ್ಲಿ ರಶೀದ್ ಖಾನ್ 23 ಎಸೆತಗಳಲ್ಲಿ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ನೆರವಿನಿಂದ 24 ರನ್ ಗಳಿಸಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966